'ಜನತಾವಾಣಿ'ಯ ಓದುಗರಿಗೆ,
ಏಜೆಂಟರಿಗೆ, ಹಿತೈಷಿಗಳಿಗೆ, ಅಭಿಮಾನಿಗಳಿಗೆ
ವಿಜಯ ದಶಮಿ ಹಬ್ಬದ ಶುಭಾಶಯಗಳು.
- ಸಂಪಾದಕರು

**ಬಿಡುವು**

ಆಯುಧ ಪೂಜೆ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ಬಿಡುವು. ಕಾರಣ ನಾಳೆ ಶುಕ್ರವಾರದ ಸಂಚಿಕೆ ಪ್ರಕಟವಾಗುವುದಿಲ್ಲ.
- ವ್ಯವಸ್ಥಾಪಕರು

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಗುರುವಾರ, ಅಕ್ಟೋಬರ್ 14, 2021

ಸಂಪುಟ : 48 ಸಂಚಿಕೆ : 154 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 8 ರೂ : 4.00 www.janathavani.com janathavani@mac.com


## ವಿ.ವಿ.ಗಳು ರಾಜಕೀಯ ಕೇಂದ್ರಗಳಾಗಬಾರದು

### ದೇಶಕ್ಕೆ ಒಳಿತು ಮಾಡುವ ನಿರ್ಧಾರಗಳಿಗೆ ಎಡಪಂಥೀಯರಿಂದ ವಿರೋಧ : ಖೂಬಾ

ದಾವಣಗೆರೆ, ಅ. 13 - ವಿಶ್ವವಿದ್ಯಾನಿಲ ಯಗಳು ರಾಜಕೀಯ ಕೇಂದ್ರಗಳಾಗಬಾರದು. ಅಲ್ಲಿ ರಾಜಕೀಯ ವಿಷಯಗಳು ತಲೆ ಎತ್ತಬಾರದು ಎಂದು ಕೇಂದ್ರ ರಾಸಾಯನಿಕ, ರಸಗೊಬ್ಬರ ಹಾಗೂ ನವೀಕರಿಸಬಹುದಾದ ಇಂಧನ ಖಾತೆಯ ರಾಜ್ಯ ಸಚಿವ ಭಗವಂತ ಖೂಬಾ ಹೇಳಿದ್ದಾರೆ.

ದಾವಣಗೆರೆ ವಿಶ್ವವಿದ್ಯಾನಿಲಯದ 13ನೇ ಸಂಸ್ಥಾಪನಾ ದಿನಾಚರಣೆ



ಮತ್ತು ಚಿತ್ರದುರ್ಗದ ಜಿ.ಆರ್. ಹಳ್ಳಿಯ ಸ್ನಾತಕೋತ್ತರ ಕೇಂದ್ರದಲ್ಲಿನ ಪುರುಷರ ವಸತಿ ನಿಲಯದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡುತ್ತಿದ್ದರು.

ಇತ್ತೀಚಿನ ದಿನಗಳಲ್ಲಿ ಬಹಳಷ್ಟು ವಿಶ್ವವಿ ದ್ಯಾನಿಲಯಗಳಲ್ಲಿ ಎಡ ಪಂಥೀಯ ಹಾಗೂ ಬಲ ಪಂಥೀಯ ವಿಚಾರಗಳ ಚರ್ಚೆಗಳು ನಡೆ ಯುತ್ತಿವೆ. ಸಂವಿಧಾನ ಹಾಗೂ ಪ್ರಜಾಪ್ರಭುತ್ವ ದಲ್ಲಿ ಇಂತಹ ವಿಚಾರಗಳ ಚರ್ಚೆಗೆ ಅವಕಾಶವಿ ದೆ. ಆದರೆ, ಕೆಲ ವಿಶ್ವವಿ ದ್ಯಾನಿಲಯಗಳು ರಾಜಕೀಯ ಕೇಂದ್ರಗಳಾಗಿರು ವುದು ದುರ್ದೈವದ ಸಂಗತಿ ಎಂದವರು ಹೇಳಿದರು.

ಸಮಾಜದ ಒಂದು ವರ್ಗ ಸದಾ ನಕಾರಾತ್ಮಕ ಚಿಂತನೆಗಳಿಂದ ವಿರೋಧಿಸುತ್ತಿದೆ. ದೇಶಕ್ಕೆ ಒಳ್ಳೆಯದನ್ನು ಮಾಡುವ ಎಲ್ಲ ನಿರ್ಧಾರಗಳಿಗೆ ವಿರೋಧಿಸುವ ನಿಲುವನ್ನು ಎಡಪಂಥೀಯರು ಹಾಗೂ (2ನೇ ಪುಟಕ್ಕೆ)


## ದಸರಾ ನಂತರ ಗಡಿ ನಿರ್ಬಂಧಗಳ ತೆರವಿನ ಪರಿಶೀಲನೆ : ಸಿಎಂ


ಬೆಂಗಳೂರು, ಅ. 13- ರಾಜ್ಯದ ಗಡಿ ಭಾಗಗಳಲ್ಲಿ ಕೋವಿಡ್ ನಿರ್ಬಂಧಗಳನ್ನು ಸಡಿಲಗೊಳಿಸುವ ಸಂಬಂಧ ದಸರಾ ಮುಗಿದ ಕೂಡಲೇ ಕೋವಿಡ್ ತಜ್ಞರ ಸಮಿತಿ ಸಭೆ ನಡೆಸಿ, ನಿರ್ಧಾರ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಪ್ರವಾಸ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರ್ನಾಟಕಕ್ಕೆ ಹೊಂದಿಕೊಂಡಿರುವ ಕೇರಳ ಮತ್ತು ಮಹಾರಾಷ್ಟ್ರದಲ್ಲಿನ ಕೋವಿಡ್ ಪರಿಸ್ಥಿತಿ ಬಗ್ಗೆ ತಜ್ಞರು ಮೌಲ್ಯಮಾಪನ ಮಾಡುತ್ತಿದ್ದಾರೆ, ದಸರಾ ಬಳಿಕ ಕೋವಿಡ್ ತಜ್ಞರ ಸಭೆ ಕರೆಯಲಾಗುವುದು, ಗಡಿ (2ನೇ ಪುಟಕ್ಕೆ)











| SL. NO. | Products | Specifications | Applications |
|---|---|---|---|
| 1 | M sand | 3 - 74MM | All Concreting Works |
| 2 | 6MM/Grit | 5 - 8MM | Brick Industry/Tiles/Lintels/Shelves/Road Works |
| 3 | 10/12MM | 8 - 14MM | PCC/RCC/Brick Industry/Tiles/ Interlocking Paving Blocks |
| 4 | 20MM | 14 - 24MM | All concreting works/PCC/RCC |
| 5 | 40MM | 28 - 40MM | Basement/Footings/Roads, Parking Areas/ Transformer Yards |
| 6 | GSB | 0 - 53MM | Road Works |
| 7 | Railway Ballast | 40 - 63MM | Railway track projects |
| 8 | Filling Material | 0 - 20MM | Filling/Leveling Work/Grading |



# ಮಹನೀಯರ ಜಯಂತಿಗಳಿಗೆ ನಿರ್ಬಂಧ ಹೇರುವುದು ಸರಿಯಲ್ಲ



ಹರಪನಹಳ್ಳಿ ತಾಲ್ಲೂಕು ವಾಲ್ಮೀಕಿ ಸಮಾಜದ ಅಧ್ಯಕ್ಷ ಕೆ. ಉಚ್ಚೆಂಗಪ್ಪ

ಹರಪನಹಳ್ಳಿ, ಅ.13- ರಾಜಕೀಯ ಪಕ್ಷಗಳ ಸಮಾವೇಶ ಹಾಗೂ ಚುನಾವಣಾ ಪ್ರಚಾರಗಳಿಗೆ ಕೋವಿಡ್ ನಿರ್ಬಂಧವಿಲ್ಲ. ಆದರೆ ಮಹನೀಯರ ಜಯಂತಿಗಳಿಗೆ ನಿರ್ಬಂಧ ಹೇರುವುದು ಸರಿಯಲ್ಲ ಎಂದು ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ. ಉಚ್ಚೆಂಗಪ್ಪ ಹೇಳಿದರು.

ಪಟ್ಟಣದ ಮಿನಿ ವಿಧಾನಸೌಧದ ಸಭಾಂಗಣದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಹಾಗೂ ಈದ್ ಮಿಲಾದ್ ಹಬ್ಬದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ತಾಲ್ಲೂಕಿನಲ್ಲಿ ಹಿಂದೂ, ಮುಸ್ಲಿಂ ಬಾಂಧವರು ಸಹೋದರರಂತೆ ಇದ್ದು, ಪರಸ್ಪರ ಸಾಮರಸ್ಯದಿಂದ ಹಾಗೂ ಭಾವೈಕ್ಯತೆಯಿಂದ ಹಬ್ಬಗಳನ್ನು ಆಚರಿಸುತ್ತಾ ಬಂದಿದ್ದೇವೆ. ಎರಡೂ ಹಬ್ಬಗಳ ಆಚರಣೆಗೆ ಅವಕಾಶ ನೀಡಬೇಕು. ವಾಲ್ಮೀಕಿ ಜಯಂತಿಯನ್ನು ಮಿನಿ ವಿಧಾನಸೌಧಕ್ಕೆ ಸೀಮಿತಗೊಳಿಸದೇ ಸಾಮರ್ಥ್ಯ ಸೌಧದಲ್ಲಿ ಆಚರಿಸಬೇಕು ಮತ್ತು ಕಾರ್ಯಕ್ರಮದಲ್ಲಿ ಉಪನ್ಯಾಸ ಹಾಗೂ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಬೇಕು ಎಂದು ಸಲಹೆ ನೀಡಿದರು.

ಅಂಜುಮಾನ್ ಕಮಿಟಿ ಅಧ್ಯಕ್ಷ ಮುಜಬುರ್ ರಹಿಮಾನ್ ಮಾತನಾಡಿ, ಸರ್ಕಾರ ಮಹನೀಯರ ಜಯಂತಿ ಆಚರಿಸಲು ನಿರ್ಬಂಧ ಹೇರದೆ ಆಚರಣೆಗೆ ಅವಕಾಶ ಮಾಡಿಕೊಡಬೇಕು. ನಾವೂ ಸಹ ಯಾವುದೇ ಅಹಿತಕರ ಘಟನೆಗಳು ಜರುಗದಂತೆ ಮುಂಜಾಗ್ರತೆ ವಹಿಸುತ್ತೇವೆ ಎಂದು ಮನವಿ ಮಾಡಿದರು.

ಈ ವೇಳೆ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಆನಂದ ವೈ. ಡೊಳ್ಳಿನ ಮಾತನಾಡಿ, ಸರ್ಕಾರ ಕೋವಿಡ್ 19 ಹಿನ್ನೆಲೆಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿಗೆ 7 ನಿಯಮಗಳು ಮತ್ತು ಈದ್ ಮಿಲಾದ್ ಹಬ್ಬಕ್ಕೆ 19 ನಿಯಮಗಳನ್ನು ಪಾಲಿಸುವಂತೆ ಸೂಚಿಸಿದೆ. ಹಾಗಾಗಿ ಮೆರವಣಿಗೆ ಹಾಗೂ ಡಿಜೆಗೆ ಅವಕಾಶವಿಲ್ಲ. ಆದರೆ ಶಾಲಾ-ಕಾಲೇಜು ಸೇರಿದಂತೆ, ಸರ್ಕಾರದ ಎಲ್ಲಾ ಕಛೇರಿಗಳಲ್ಲಿ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಸರಳವಾಗಿ ಆಚರಿಸಬೇಕು ಎಂದರು.

ಸರ್ಕಾರಿ ನೌಕರರ ಒಕ್ಕೂಟದ ತಾಲ್ಲೂಕು ಅಧ್ಯಕ್ಷ ಎಂ. ಆಂಜನೇಯ, ಅಂಜುಮಾನ್ ಕಾರ್ಯದರ್ಶಿ ಎನ್. ಮಜೀದ್, ಚಮನ್‌ಸಾಬ್ ಮಾತನಾಡಿದರು. ಉಪ ತಹಶೀಲ್ದಾರ್ ಪ್ರಭಾಕರ್‌ಗೌಡ, ಪ್ರಾದೇಶಿಕ ವಲಯ ಅರಣ್ಯಾಧಿಕಾರಿ ಭರತ್ ಡಿ. ತಳವಾರ, ಬಿಸಿಎಂ ಇಲಾಖೆಯ ವಿಸ್ತರಣಾಧಿಕಾರಿ ಕೆ. ಭೀಮಪ್ಪ, ಕಂದಾಯ ನಿರೀಕ್ಷಕ ಚಂದ್ರಶೇಖರ್, ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಕಾರ್ಯದರ್ಶಿ ಗಿರಜ್ಜಿ ನಾಗರಾಜ್, ಅಂಜುಮಾನ್ ಕಮಿಟಿ ಗೌರವ ಅಧ್ಯಕ್ಷ ಚಮನ್ ವಲಿ, ಪುರಸಭೆ ಸದಸ್ಯ ಎಂ.ಕೆ. ಜಾವೀದ್, ಮುಖಂಡರಾದ ಹುಲಿಕಟ್ಟಿ ಲಕ್ಕಪ್ಪ, ತಿಪ್ಪನಾಯಕನಹಳ್ಳಿ ಕೆ. ಎಂ.ಚನ್ನಪ್ಪ, ದ್ಯಾಪನಾಯಕನಹಳ್ಳಿ ಜಿ. ಬಸವರಾಜ್, ನಿವೃತ್ತ ಮುಖ್ಯ ಶಿಕ್ಷಕ ಆನಂದಪ್ಪ, ಎಂ. ದಾದಾ ಖಲಂದರ್, ಎನ್. ಜಿಲಾನ್, ಮೀನುಗಾರಿಕೆ ಇಲಾಖೆ ಮಂಜುಳಾ, ಪಿಡಬ್ಲೂಡಿ ಸಿ. ಪರಶುರಾಮ, ಎಎಸ್‌ಐ ರುದ್ರಪ್ಪ, ಸಮಾಜಕಲ್ಯಾಣ ಇಲಾಖೆಯ ದೇವೇಂದ್ರಪ್ಪ ಸೇರಿದಂತೆ, ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಗಾಳಿ ದುರ್ಗಾಂಬಿಕಾ ದೇವಿಗೆ ದುರ್ಗಾಷ್ಟಮಿ ಅಲಂಕಾರ



ದಾವಣಗೆರೆ, ಅ. 13- ಕೆ.ಆರ್. ರಸ್ತೆಯ ವೆಂಕಾಭೋವಿ ಕಾಲೋನಿಯ ಶ್ರೀ ಗಾಳಿ ದುರ್ಗಾಂಬಿಕಾ ದೇವಿ ದೇವಸ್ಥಾನದಲ್ಲಿ ನವರಾತ್ರಿ ಹಬ್ಬದ ಪ್ರಯುಕ್ತ ಪ್ರತಿದಿನ ವಿಶೇಷ ಅಲಂಕಾರ ಮಾಡಲಾಗುತ್ತಿದೆ. ಇಂದು ಶ್ರೀ ಅಮ್ಮನವರಿಗೆ ದುರ್ಗಾಷ್ಟಮಿ ಅಲಂಕಾರ ಮಾಡಲಾಗಿತ್ತು.

## ಶಾಮನೂರಿನಲ್ಲಿ ಇಂದು ಮಂಗಳಗೌರಿಗೆ ಅಲಂಕಾರ




ಶಾಮನೂರಿನ ಶ್ರೀ ಸಿದ್ಧಿವಿನಾಯಕ, ಶ್ರೀ ಕಲ್ಲೇಶ್ವರ, ಶ್ರೀ ಮಂಗಳಗೌರಮ್ಮ ದೇವಸ್ಥಾನದಲ್ಲಿ ಶರನ್ನವರಾತ್ರಿ ಪ್ರಯುಕ್ತ 8ನೇ ದಿನವಾದ ಇಂದು ಶ್ರೀ ದೇವಿಗೆ ವಿಶೇಷ ಅಲಂಕಾರ ಮಾಡಲಾಗುವುದು.

## ವಾಸವಿ ಅಮ್ಮನವರಿಗೆ ದುರ್ಗಾ ಅಲಂಕಾರ



ದಾವಣಗೆರೆ, ಅ. 13- ಪಿ.ಬಿ. ರಸ್ತೆಯ ಡಿಸಿಎಂ ಟೌನ್‌ಶಿಪ್‌ನಲ್ಲಿರುವ ವಾಸವಿ ಅಮ್ಮನವರ ದೇವಸ್ಥಾನದಲ್ಲಿ ನವರಾತ್ರಿ ಹಬ್ಬದ ಪ್ರಯುಕ್ತ ಪ್ರತಿದಿನ ವಿಶೇಷ ಅಲಂಕಾರ ಮಾಡಲಾಗುತ್ತಿದೆ. ಇಂದು ಶ್ರೀ ಅಮ್ಮನವರಿಗೆ ದುರ್ಗಾ ಅಲಂಕಾರ ಮಾಡಲಾಗಿತ್ತು.

## ಮಲೇಬೆನ್ನೂರು: ಭದ್ರ ಕಾಳಮ್ಮಗೆ ಕಾಳರಾತ್ರಿ ದೇವಿ ಅಲಂಕಾರ



ಮಲೇಬೆನ್ನೂರು, ಅ.13- ಪಟ್ಟಣದ ಹೊರವಲಯದಲ್ಲಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿರುವ ಶ್ರೀ ಭದ್ರಕಾಳಮ್ಮ ದೇವಿಗೆ ಶರನ್ನವರಾತ್ರಿ ಪ್ರಯುಕ್ತ ಏಳನೇ ದಿನ ಕಾಳರಾತ್ರಿ ದೇವಿಯ ವಿಶೇಷ ಅಲಂಕಾರ ಮಾಡಲಾಗಿತ್ತು.


## ಕುಂಕುಮಾಲಂಕಾರದಲ್ಲಿ ಕಂಗೊಳಿಸುವ ಶ್ರೀ ಬನಶಂಕರಿ ಅಮ್ಮ



ದಾವಣಗೆರೆ, ಅ.13- ನಗರದ ಡಿಸಿಎಂ ಟೌನ್ ಶಿಪ್ ಬಳಿಯ ರಾಜೇಂದ್ರ ಬಡಾವಣೆಯಲ್ಲಿನ ಶ್ರೀ ಬನಶಂಕರಿ ದೇವಾಲಯದಲ್ಲಿ ನವರಾತ್ರಿ ಪ್ರಯುಕ್ತ ಪ್ರತಿ ದಿನದಂತೆ ಇಂದೂ ಸಹ ಶ್ರೀ ಬನಶಂಕರಿ ಅಮ್ಮನನ್ನು ಕುಂಕುಮಾಲಂಕಾರದಲ್ಲಿ ಕಂಗೊಳಿಸುವಂತೆ ಮಾಡಲಾಗಿತ್ತು.

ದೇವಸ್ಥಾನದಲ್ಲಿನ ಗಾಯತ್ರಿ ಮತ್ತು ಲಕ್ಷ್ಮೀ ದೇವಿ ಅಮ್ಮನವರಿಗೂ ನೋಟುಗಳಲ್ಲಿ ವಿಶೇಷವಾಗಿ ಅಲಂಕಾರ ಮಾಡಲಾಗಿತ್ತು.

## ದ್ರಾಕ್ಷಿ ಅಲಂಕಾರದಲ್ಲಿ ರಾಜರಾಜೇಶ್ವರಿ





ದಾವಣಗೆರೆ, ಅ.13- ನವರಾತ್ರಿ ಪ್ರಯುಕ್ತ ಪ್ರತಿ ದಿನದಂತೆ ಕೆಟಿಜೆ ನಗರ 17ನೇ ಕ್ರಾಸ್ ನಲ್ಲಿರುವ ರಾಜರಾಜೇಶ್ವರಿ ದೇವಸ್ಥಾನದಲ್ಲಿ ರಾಜರಾಜೇಶ್ವರಿ ಅಮ್ಮನವರಿಗೆ ಶಾರದಾ ದೇವಿ ಅಲಂಕಾರ ಹಾಗೂ ವಿಶೇಷವಾಗಿ ದ್ರಾಕ್ಷಿಯ ಅಲಂಕಾರ ಮಾಡಿ ಕಂಗೊಳಿಸುವಂತೆ ಮಾಡಲಾಗುತ್ತಿದೆ.



ಎಸ್.ಕೆ.ಪಿ ರಸ್ತೆ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ದೇವಿಗೆ ಸಿದ್ಧಿ ದಾತ್ರಿ ಅಲಂಕಾರ

### ನವದುರ್ಗೆಯರ 9ನೇ ರೂಪ ಸಿದ್ಧಿದಾತ್ರಿ ದೇವಿಗೆ ನಮನ

ಅಷ್ಟಸಿದ್ಧಿಗಳನು ಕೊಡುವ ಸಿದ್ಧಿದಾತ್ರಿಯೆ
ನಿಷ್ಠೆ ಶ್ರದ್ಧೆ ಭಕ್ತಿಗೊಲಿವ ಶಿವನರ್ಧಾಂಗಿಯೆ
ಶ್ರೇಷ್ಠಳೆ ವಿಶಿಷ್ಟಳೆ ಶಿಷ್ಟ ರಕ್ಷಕಳೆ
ದೃಷ್ಟಿ ನಿನ್ನ ಪಾದದಲ್ಲಿ ನಿಲಿಸು ತಾಯೆ

ಶಿವನ ಅರ್ಧದೇಹದೊಳಗೆ ಸೇರಿದವಳೆ
ನವರಾತ್ರಿಯಲ್ಲಿ ಪೂಜೆಗೊಳುವಳೆ
ನವೋಲ್ಲಾಸ ತುಂಬುವ ಜಗದೀಶ್ವರಿಯೆ
ಭವತಾರಿಣಿ ಹರಮಹಿಷಿ ತ್ರಿಪುರೇಶ್ವರಿಯೆ

ಶಕ್ತಿ ಸಂಪೂರ್ಣಳೆ ಭಕ್ತಿ ಗೊಲಿವಳೆ
ಉಕ್ತಿಯಿಂದ ನುಡಿಸುವ ಮನೋಭಿಮಾನಿಯೆ
ಸೂಕ್ತ ಪ್ರೇರಣೆ ಕೊಟ್ಟು ಸಾಧನೆ ಮಾಡಿಸುವವಳೆ
ಭಕ್ತರ್ಗೆ ಆಧ್ಯಾತ್ಮಿಕ ಮಾರ್ಗ ತೋರುವವಳೆ

ತಿರುಗುವ ಮನವನು ನಿನ್ನಲಿ ನಿಲ್ಲಿಸಮ್ಮ
ಕರಗಿಸಿ ಅಹಂಕಾರ ಶ್ರದ್ಧೆ ಹೆಚ್ಚಿಸಮ್ಮ
ಸರಿಸಿ ಮೋಹಪೊರೆಗಳ ನೀ ಕಾಣಿಸಮ್ಮ
ಸೇರಿಸಿ ಸತ್ಸಂಗದಲಿ ದಯತೋರಮ್ಮ

ಗುರುವಾಗಿಹೆ ನೀನೆ ಓ ಜಗದಂಬ
ಗುರಿಯು ನೀನೆ ತಾಯೆ ಸಲಹೌ ಅಂಬ
ಪರಮಯಶಸ್ಕರಿಯೆ ಓ ಮೂಕಾಂಬ
ಸಿರಿಹರಿ ಸೋದರಿ ಕಾಯೆ ಜಯ ಜಯ ಅಂಬ

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್

# ವಿ.ವಿ.ಗಳು ರಾಜಕೀಯ ಕೇಂದ್ರಗಳಾಗಬಾರದು

(1ನೇ ಪುಟದಿಂದ) ದೇಶ ವಿರೋಧಿ ಶಕ್ತಿಗಳು ಹೊಂದಿವೆ ಎಂಬುದನ್ನು ನಾವು ಗಮನಿಸಿದ್ದೇವೆ. ರಾಜಕೀಯ ಮುಕ್ತ ವಾತಾವರಣ ನಿರ್ಮಿಸಿ, ಅಭಿವೃದ್ಧಿ ಕೇಂದ್ರಿತ ಶೈಕ್ಷಣಿಕ ವಾತಾವರಣ ನಿರ್ಮಿಸುವುದು ಸರ್ಕಾರದ ಆದ್ಯತೆ ಎಂದು ಹೇಳಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ 12 ಕೋಟಿ ರೂ. ವೆಚ್ಚದಲ್ಲಿ ಆಡಿಟೋರಿಯಂ ನಿರ್ಮಿಸುವ ಪ್ರಸ್ತಾವನೆ ಇದೆ. ಈ ಬಗ್ಗೆ ಸಚಿವ ಖೂಬಾ ಅವರ ಜೊತೆಗೂಡಿ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಜೊತೆ ಮಾತನಾಡುವುದಾಗಿ ಹೇಳಿದರು.

ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ ಮಾತನಾಡಿ, ತಮಿಳುನಾಡಿನಲ್ಲಿಉನ್ನತಶಿಕ್ಷಣಕ್ಕೆಸೇರ್ಪಡೆಯಾಗುವವರ ಪ್ರಮಾಣ ಶೇ.49ರಷ್ಟಿದೆ. ಕೇರಳದಲ್ಲಿ ಅತಿ ಹೆಚ್ಚಿನ ವಿದ್ಯಾವಂತರಿದ್ದಾರೆ. ಆದರೂ ಈ ರಾಜ್ಯಗಳಲ್ಲಿ ವಿಛಿದ್ರ ಶಕ್ತಿಗಳು ಹೆಚ್ಚಾಗಿವೆ. ಇದು ಶಿಕ್ಷಣದಲ್ಲಿ ನೈತಿಕ ಅಂಶದ ಮಹತ್ವವನ್ನು ತೋರಿಸುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಮಾತನಾಡಿ,



ವಿಶ್ವವಿದ್ಯಾನಿಲಯವನ್ನು ಜಾಗತಿಕ ಮಟ್ಟಕ್ಕೆ ಒಯ್ಯುವ ಪ್ರಯತ್ನಕ್ಕೆ ಎಲ್ಲರ ಸಹಕಾರ, ಪ್ರೋತ್ಸಾಹ, ಸಹಭಾಗಿತ್ವ ಅತ್ಯಗತ್ಯ. ಸಂಸ್ಥೆ ಬೆಳೆದಂತೆ ವಿದ್ಯಾರ್ಥಿಗಳ ಭವಿಷ್ಯವೂ ಉಜ್ವಲವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಜಾನಪದ ವಿದ್ವಾಂಸ ಡಾ. ಹೆಚ್. ವಿಶ್ವನಾಥ್ ರಚಿಸಿರುವ 'ಕನ್ನಡ ಸಾಹಿತ್ಯ ಸಿಂಚನ' ಮತ್ತು ಡಾ. ವೆಂಕಟರಾವ್ ಪಲಾಟೆ ರಚಿಸಿರುವ 'ಹ್ಯಾಂಡ್ ಬುಕ್ ಆಫ್ ಅಕಾಡೆಮಿಕ್ ರೈಟಿಂಗ್' ಮತ್ತು 'ಕೋವಿಡ್-19: ಆರಿಜನ್ ಅಂಡ್ ಸ್ಪ್ರೆಡ್ ಆಫ್ ಕೊರೊನಾ ವೈರಸ್' ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು.

ಸಿಂಡಿಕೇಟ್ ಸದಸ್ಯರಾದ ಮಾಡಾಳು ಮಲ್ಲಿಕಾರ್ಜುನ, ಡಾ. ಶ್ರೀಧರ್, ವಿಜಯಲಕ್ಷ್ಮಿ ಹಿರೇಮಠ, ಪವನ್ ಉಪಸ್ಥಿತರಿದ್ದರು. ಕುಲಸಚಿವೆ ಪ್ರೊ. ಗಾಯತ್ರಿ ದೇವರಾಜ್ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಜಯರಾಮಯ್ಯ ವಂದಿಸಿದರು. ಡಾ. ಭೀಮಾಶಂಕರ ಜೋಶಿ ಕಾರ್ಯಕ್ರಮ ನಿರೂಪಿಸಿದರು.

## ಕಾಳರಾತ್ರಿ ದೇವಿ ಆರಾಧನೆ



ದಾವಣಗೆರೆ, ಅ.13 - ಶರನ್ನವರಾತ್ರಿಯ ಎಂಟನೇ ದಿನವನ್ನು ಶ್ರೀ ಪಾರ್ವತಿ ದೇವಿಯ ಭಯಂಕರ ರೂಪವಾದ 'ಶ್ರೀ ಕಾಳರಾತ್ರಿ' ದೇವಿಯನ್ನು ಆರಾಧಿಸಿ ಪೂಜಿಸಲಾಯಿತು.

ನವರಾತ್ರಿಯ ಎಂಟನೇ ದಿನದ ಸಂಭ್ರಮದ ಈ ಚಿತ್ರದಲ್ಲಿ ಸರಸ್ವತಿ ನಗರದ ವಿಜಯ ವಿನಾಯಕ ನಾಗರಿಕ ವೇದಿಕೆಯ ಮಂಜುಳಾ ವೆಂಕಟೇಶ್, ರಾಧಾ ಆರ್, ನಾಗೇಶ್ವರಿ ನಾಯರಿ ಮತ್ತು ಅಕ್ಕಮಹಾದೇವಿ ಶಿವಶಂಕರ್ ಇದ್ದಾರೆ.


## ವಕೀಲರ ವಿರುದ್ಧ ಕ್ರಮ ತೆಗೆದುಕೊಳ್ಳದ್ದಕ್ಕೆ ಸುಪ್ರೀಂ ಆಕ್ಷೇಪ

ನವದೆಹಲಿ, ಅ. 13 - ಮೋಟಾರು ಅಪಘಾತ ಕ್ಲೇಮುಗಳ ಟ್ರಿಬ್ಯೂನಲ್ ಹಾಗೂ ಪರಿಹಾರ ಕಾಯ್ದೆಯಡಿ ನಕಲಿ ಅರ್ಜಿಗಳನ್ನು ದಾಖಲಿಸಿ ವಿಮಾ ಕಂಪನಿಗಳಿಗೆ ಕೋಟ್ಯಂತರ ರೂ.ಗಳ ನಷ್ಟಕ್ಕೆ ಕಾರಣರಾದ ವಕೀಲರ ವಿರುದ್ಧ ಏಕೆ ಕ್ರಮ ತೆಗೆದುಕೊಂಡಿಲ್ಲ ಎಂದು ಉತ್ತರ ಪ್ರದೇಶದ ವಕೀಲರ ಕೂಟಕ್ಕೆ ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ.

ಇದು ಗಂಭೀರ ವಿಷಯ. ವಕೀಲರ ವಿರುದ್ಧ ನಕಲಿ ಕ್ಲೇಮುಗಳ ಆರೋಪ ದಾಖಲಿಸಲಾಗಿದೆ. ಆದರೆ, ವಕೀಲರು ಈ ಬಗ್ಗೆ ಮಾಹಿತಿ ನೀಡಲು ವಕೀಲರ ಕೂಟ ತಿಳಿಸುತ್ತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಇಂತಹ ಚಟುವಟಿಕೆಗಳಲ್ಲಿ ತೊಡಗಿರುವ ವಕೀಲರ ವಿರುದ್ಧ ಕ್ರಮ ತೆಗೆದುಕೊಳ್ಳುವುದು ರಾಜ್ಯ ವಕೀಲರ ಒಕ್ಕೂಟದ ಕರ್ತವ್ಯ. ರಾಜ್ಯ ಕೂಟ ಕ್ರಮ ತೆಗೆದುಕೊಳ್ಳಲು ಹಿಂಜರಿಯುತ್ತಿರುವ ಕಾರಣ, ಭಾರತೀಯ ವಕೀಲರ ಒಕ್ಕೂಟ ಮಧ್ಯ ಪ್ರವೇಶಿಸಬೇಕಾಗಿ ಬಂದಿದೆ ಎಂದು ನ್ಯಾಯಾಲಯ ತಿಳಿಸಿದೆ.

1,376 ನಕಲಿ ಕ್ಲೇಮುಗಳ ದೂರುಗಳು ಬಂದಿದ್ದವು. ಈ ಪೈಕಿ ವಿಶೇಷ ತನಿಖಾ ತಂಡ 246 ಪ್ರಕರಣಗಳಲ್ಲಿ ತನಿಖೆ ನಡೆಸಿದ್ದು, ವಂಚನೆಯಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಈ ಪ್ರಕರಣಗಳಲ್ಲಿ 166 ಆರೋಪಿಗಳಿದ್ದು ಇವರಲ್ಲಿ ಅರ್ಜಿದಾರರು, ವಕೀಲರು, ಪೊಲೀಸರು, ವೈದ್ಯರು, ವಿಮಾ ಸಂಸ್ಥೆಯ ಉದ್ಯೋಗಿಗಳು, ವಾಹನಗಳ ಮಾಲೀಕರು, ಚಾಲಕರು ಮತ್ತಿತರರಿದ್ದಾರೆ. ಹಲವಾರು ಜಿಲ್ಲೆಗಳಲ್ಲಿ ಈ ಬಗ್ಗೆ 83 ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಲಾಗಿದೆ.

### ಐ.ಎಂ. ಕೊಟ್ರಯ್ಯ ನಿಧನ



ಮೂಡಬಿದರೆ ವಾಸಿಗಳಾದ ದಾವಣಗೆರೆ ಎಸ್.ನಿಜಲಿಂಗಪ್ಪ ಬಡಾವಣೆ 'ಎ' ಬ್ಲಾಕ್‌ನ **ಐ.ಎಂ. ಕೊಟ್ರಯ್ಯ** ಅವರು ದಿನಾಂಕ 13.10.2021ರ ಬುಧವಾರ ಮಧ್ಯಾಹ್ನ 2.40 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 60 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರಿ, ಅಳಿಯ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 14.10.2021ರ ಗುರುವಾರ ಬೆಳಿಗ್ಗೆ 11.30 ಕ್ಕೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ. : 9844581880**

## ಇ- ಸ್ವತ್ತು ಮಾಡಿಕೊಡಲು ಹಣದ ಬೇಡಿಕೆ ಎಸಿಬಿ ಬಲೆಗೆ ಕಕ್ಕರಗೊಳ್ಳ ಗ್ರಾ.ಪಂ. ಪಿಡಿಓ

ದಾವಣಗೆರೆ, ಅ.13- ಇ-ಸ್ವತ್ತು ಮಾಡುವ ಸಲುವಾಗಿ 10 ಸಾವಿರ ಲಂಚ ಪಡೆಯುತ್ತಿದ್ದ ವೇಳೆ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹಣದ ಸಮೇತ ಭ್ರಷ್ಟಾಚಾರ ನಿಗ್ರಹ ದಳದ ಕೈಗೆ ಸಿಕ್ಕಿ ಬಿದ್ದಿರುವ ಘಟನೆ ತಾಲ್ಲೂಕಿನ ಕಕ್ಕರಗೊಳ್ಳ ಗ್ರಾಮ ಪಂಚಾಯಿತಿಯಲ್ಲಿ ಇಂದು ನಡೆದಿದೆ. ವಿಜಯ್ ಗೌಡರ್ ಬಲೆಗೆ ಬಿದ್ದ ಪಿಡಿಓ ಗ್ರಾಮ ಪಂಚಾಯತಿ ಕಚೇರಿಯಲ್ಲಿ ಹಣ ಪಡೆಯುತ್ತಿದ್ದಾಗ ವಿಜಯ ಗೌಡರ್ ಹಣದ ಸಮೇತ ಎಸಿಬಿ ಡಿವೈಎಸ್ಪಿ ಮಂಜುನಾಥ ನೇತೃತ್ವದಲ್ಲಿ ನಡೆಸಿದ ದಾಳಿ ವೇಳೆ ಸಿಕ್ಕಿಬಿದ್ದಿದ್ದಾರೆ.

## ಗಡಿ ನಿರ್ಬಂಧಗಳ ತೆರವಿನ ಪರಿಶೀಲನೆ : ಮುಖ್ಯಮಂತ್ರಿ

(1ನೇ ಪುಟದಿಂದ) ಜಿಲ್ಲೆಗಳಲ್ಲಿ ಈಗಿರುವ ನಿರ್ಬಂಧಗಳನ್ನು ಸಡಿಲಿಸುವ ಕುರಿತು ಚರ್ಚೆ ನಡೆಸಿ, ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದರು. ಒಂದರಿಂದ 5ನೇ ತರಗತಿವರೆಗೆ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸುವ ಸಂಬಂಧ ಸಲಹಾ ತಜ್ಞರ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗುವುದು, 2 ವರ್ಷದಿಂದ 18 ವರ್ಷ ವಯೋಮಾನದವರಿಗೆ ಕೋವಿಡ್ ಲಸಿಕೆ ಹಾಕುವ ಕುರಿತ ಪ್ರಯೋಗ ಕೊನೆ ಹಂತದಲ್ಲಿದೆ. ಲಸಿಕೆಗೆ ಎಲ್ಲಾ ರೀತಿಯ ಒಪ್ಪಿಗೆ ದೊರೆತ ತಕ್ಷಣ ಮಕ್ಕಳು ಮತ್ತು ಹದಿಹರೆಯದವರಿಗೆ ಲಸಿಕೆ ಹಾಕಲಾಗುವುದು, ಲಸಿಕೆ ಹಾಕುವುದರಲ್ಲಿ ಕರ್ನಾಟಕ ಮುಂದಿದೆ ಎಂದರು.

ಕೋವಿಡ್ ಸಂದರ್ಭದಲ್ಲಿ ಸಾರ್ವಜನಿಕರ ಮೇಲೆ ಪ್ರಕರಣಗಳನ್ನು ದಾಖಲಿಸಿ, ಆರೋಪ ಪಟ್ಟಿ ಹಾಕಲಾಗಿರುವ ವಿಷಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಾಗ, ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚಿಸಿ ಪ್ರಕರಣಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ ನಿರ್ಧರಿಸಲಾಗುವುದು ಎಂದರು.

## ಡಿಸಿಎಂ ಟೌನ್‌ಶಿಪ್ : ಕಲ್ಯಾಣ ಮಂಟಪದ ಭೂಮಿ ಪೂಜೆ

ದಾವಣಗೆರೆ, ಅ.13- ಶ್ರೀ ವಾಸವಿ ಸೇವಾ ಸಂಘದಿಂದ ನಾಡಿದ್ದು ದಿನಾಂಕ 15 ರ ಶುಕ್ರವಾರ ಡಿಸಿಎಂ ಟೌನ್‌ಶಿಪ್‌ನಲ್ಲಿ ಕಲ್ಯಾಣ ಮಂಟಪದ ಭೂಮಿ ಪೂಜೆ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ 6.05 ರಿಂದ ಶ್ರೀ ವಾಸವಿ ಅಮ್ಮನವರಿಗೆ ಹಾಗೂ ಎಲ್ಲಾ ದೇವರುಗಳಿಗೆ ವಿಶೇಷ ಪೂಜೆ, ಅಭಿಷೇಕ ಇರುತ್ತದೆ. ಬೆಳಿಗ್ಗೆ 6.45 ಕ್ಕೆ ದೇವಸ್ಥಾನದ ಅರ್ಚಕರಿಂದ ಕಲ್ಯಾಣ ಮಂಟಪದ ಭೂಮಿ ಪೂಜೆ ನೆರವೇರಲಿದೆ. ಬೆಳಿಗ್ಗೆ 10.30 ಕ್ಕೆ ನಡೆಯುವ ವೇದಿಕೆ ಕಾರ್ಯಕ್ರಮವನ್ನು ಬಾಪೂಜಿ ವಿದ್ಯಾಸಂಸ್ಥೆಯ ಅಧ್ಯಕ್ಷ ರಾಜನಹಳ್ಳಿ ರಮಾನಂದ್ ಉದ್ಘಾಟಿಸಲಿದ್ದು, ಸಂಘದ ಅಧ್ಯಕ್ಷ ಬಿ.ಎಸ್. ರಾಮಶ್ರೇಷ್ಠಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯಅತಿಥಿಗಳಾಗಿ ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನದ ಆಜೀವ ಗೌರವಾಧ್ಯಕ್ಷ ಆರ್.ಎಸ್. ನಾರಾಯಣಸ್ವಾಮಿ, ಮೇಯರ್ ಎಸ್.ಟಿ. ವೀರೇಶ್, ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್, ಕಿರಾಣಿ ವರ್ತಕ ಹೆಚ್.ಆರ್. ವೇಣುಗೋಪಾಲ್ ಶ್ರೇಷ್ಠಿ ಪಾಲ್ಗೊಳ್ಳಲಿದ್ದು, ಸಂಘದ ಗೌರವಾಧ್ಯಕ್ಷ ಡಾ. ಬಿ.ಎಸ್. ನಾಗಪ್ರಕಾಶ್, ಉಪಾಧ್ಯಕ್ಷ ಬಿ.ವಿ. ಗಂಗಪ್ಪ ಶ್ರೇಷ್ಠಿ ಉಪಸ್ಥಿತರಿರುವರು.

## ಶಾಮನೂರಿನಲ್ಲಿ ಗಂಗಾ ಪೂಜೆ

ದಾವಣಗೆರೆ, ಅ.13- ಶಾಮನೂರು ಜನತಾ ಕಾಲೋನಿಯಲ್ಲಿರುವ ಶ್ರೀ ಮಾಲಸಾಂಬ ಗಂಗಮಾಳಮ್ಮ ದೇವಸ್ಥಾನ ಅಭಿವೃದ್ಧಿ ಸಮಿತಿಯಿಂದ ನಾಡಿದ್ದು ದಿನಾಂಕ 15 ರ ಶುಕ್ರವಾರ ಬೆಳಿಗ್ಗೆ 6.30 ಕ್ಕೆ ಗಂಗಾ ಪೂಜೆ ನಡೆಯಲಿದೆ.


## ಅಪರಿಚಿತ ಮಹಿಳೆಯ ಶವ ಪತ್ತೆ

ಹರಿಹರ, ಅ.13- ಹರಿಹರ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅಪರಿಚಿತ ಮಹಿಳೆಯ ಶವ ಪತ್ತೆಯಾಗಿದೆ.

ನಂ, 4 ಭದ್ರಾ ನಾಲಾ ಉಪವಿಭಾಗದ ಕೆಎನ್‌ಎನ್‌ಎ ಹರಿಹರ ಉಪವಿಭಾಗದ ಸಹಾಯಕ ಅಭಿಯಂತರ ಪ್ರಕಾಶ್ ಅವರು, ಚಾನಲ್‌ನ 10ನೇ ಉಪನಾಲೆಯನ್ನು ನಿರ್ವಹಣೆ ಮಾಡುವ ಸಂದರ್ಭದಲ್ಲಿ ಸುಮಾರು 30-35 ವರ್ಷ ವಯಸ್ಸಿನ ಮಹಿಳೆಯ ಶವ ಚಾನಲ್‌ನಲ್ಲಿ ತೇಲಿ ಬಂದಿದ್ದು, ಸೇತುವೆ ಬಳಿಯ ಪೈಪ್‌ಗೆ ಸಿಕ್ಕಿಹಾಕಿಕೊಂಡಿತ್ತು ಎಂದು ಪೊಲೀಸ್ ಠಾಣೆಗೆ ನೀಡಿದ ಗಣಕೀಕೃತ ದೂರಿನಲ್ಲಿ ತಿಳಿಸಿರುತ್ತಾರೆ.

ಸುಮಾರು 30-35 ವರ್ಷ ವಯಸ್ಸಿನ ಹೆಂಗಸಿನ ಮೈಮೇಲೆ ಕೇಸರಿ ಒಳಲಂಗ ಇದ್ದು, ಬಲಗೈಯಲ್ಲಿ ಕೊಟ್ರಮ್ಮ ಮತ್ತು ದುರ್ಗಪ್ಪ ಎಂಬ ಹಚ್ಚೆ ಗುರುತು ಇರುತ್ತದೆ. ಬಲಗೈಯಲ್ಲಿ ಹಸಿರು ಬಣ್ಣದ 2 ಗಾಜಿನ ಬಳೆ, 2 ರೋಲ್ಡ್‌ಗೋಲ್ಡ್ ಬಳೆಗಳು ಹಾಗೂ ಎಡಗೈಯಲ್ಲಿ 2 ರೋಲ್ಡ್‌ಗೋಲ್ಡ್ ಬಳೆಗಳಿರುತ್ತದೆ. ಮೃತ ಮಹಿಳೆಯ ವಾರಸುದಾರರು, ವಿಳಾಸದ ಬಗ್ಗೆ ತಿಳಿದು ಬಂದಿಲ್ಲ ಎಂದು ಹರಿಹರ ಗ್ರಾಮಾಂತರ ಪೊಲೀಸ್ ಠಾಣೆ ಮಾಹಿತಿ ನೀಡಿದೆ.

### 4ನೇ ವರ್ಷದ ಪುಣ್ಯಸ್ಮರಣೆ



ಜನನ 01–08–1955

ಮರಣ 15–10–2017

**ದಿ|| ಶ್ರೀಮತಿ ಚಾರ್ಮನಿ ಅನ್ನಪೂರ್ಣ**

ಅಮ್ಮ ನೀಡಿದ ಜನ್ಮ – ಅಮ್ಮ ನೀಡಿದ ಪ್ರೀತಿ
ಅಮ್ಮ ನೀಡಿದ ವಿದ್ಯೆ – ಅಮ್ಮ ನೀಡಿದ ಬದುಕು
ಇವೆಲ್ಲವೂ ಬೆಲೆ ಕಟ್ಟಲಾಗದ್ದು.
ಅಮ್ಮ ಯಾವತ್ತೂ ನೆನಪಲ್ಲಿರುವವರು.
4 ವರ್ಷದ ಹಿಂದೆ ಅಮ್ಮನನ್ನು ಕಳೆದುಕೊಂಡ
ಈ ದಿನದಂದು ಅವರಿಗೊಂದು ಭಾವಪೂರ್ಣ ನಮನ.

ನೀವು ನಮ್ಮನ್ನಗಲಿ ಇಂದಿಗೆ 4 ವರ್ಷವಾಯಿತು.
ಸದಾ ನಿಮ್ಮ ಸ್ಮರಣೆಯಲ್ಲಿರುವ

**ಶ್ರೀ ಶಿವಕುಮಾರ ಚಾರ್ಮನಿ ಮತ್ತು ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು, ಅಳಿಯಂದಿರು ಮತ್ತು ಚಾರ್ಮನಿ ಹಲ್ಲರ್ & ಫ್ಲೋರ್ ಮಿಲ್ ಸಿಬ್ಬಂಧಿ ವರ್ಗದವರು, ಅನ್ನಪೂರ್ಣ ಕಮ್ಯೂನಿಕೇಷನ್ಸ್ ಸಿಬ್ಬಂಧಿ ವರ್ಗದವರು ಹಾಗೂ ಬಂಧು-ಮಿತ್ರರು.**

### ಮೂರನೇ ವರ್ಷದ ಪುಣ್ಯಸ್ಮರಣೆ



ದಾವಣಗೆರೆ ಪಿ.ಜೆ. ಬಡಾವಣೆ ವಾಸಿ, **ರವೀಂದ್ರನಾಥ್‌ರವರ** ಧರ್ಮಪತ್ನಿ

**ದಿ|| ಶ್ರೀಮತಿ ಉಮಾ ಕೆ.ಸಿ.**


ಮರಣ 15.10.2018

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳು ಕಳೆದರೂ ನಿಮ್ಮ ನೆನಪು ನಮ್ಮಲ್ಲಿ ಸದಾ ಹಸಿರಾಗಿದೆ. ನಿಮ್ಮ ಮಾರ್ಗದರ್ಶನ ನಮಗೆ ದಾರಿ ದೀಪವಾಗಿದೆ. ನಿಮ್ಮ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸುವ...

ಪತಿ : ರವೀಂದ್ರನಾಥ್ ಕೆ.ಸಿ.

ಮಗಳು : ಶ್ರೀಮತಿ ನೀಮಾ ಡಿ.ಆರ್., ದಾವಣಗೆರೆ.

### ಮೊದಲ ವರ್ಷದ ಪುಣ್ಯಸ್ಮರಣೆ



ಜಗಳೂರು ತಾಲ್ಲೂಕು ತಮಲೇಹಳ್ಳಿ ಗ್ರಾಮದ ವಾಸಿ

**ಶ್ರೀ ದಂಡಿನ ರಾಜಪ್ಪನವರು**

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ಭಗವಂತನು ನಿಮ್ಮ ಆತ್ಮಕ್ಕೆ ಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ...

ಮೊದಲ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮವನ್ನು

*ದಿನಾಂಕ : 16.10.2021, ಸಮಯ : 11.00 ಗಂಟೆಗೆ*

*ಸ್ಥಳ : ದಂಡಿನ ರಾಜಪ್ಪ ಮಂಟಪ, ತಮಲೇಹಳ್ಳಿ ಗ್ರಾಮ, ಜಗಳೂರು ತಾ||*

ಈ ನಿಮಿತ್ತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

*ಸ್ಥಳ : ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ತಮಲೇಹಳ್ಳಿ.*


*ಸಮಯ : 11.00 ಗಂಟೆಯಿಂದ ಮಧ್ಯಾಹ್ನ : 03.00 ಗಂಟೆಯವರೆಗೆ.*

*ಸರ್ವರಿಗೂ ಸುಸ್ವಾಗತ :*

***ಶ್ರೀಮತಿ ಗಿರಿಜಮ್ಮ,*** ಅಧ್ಯಕ್ಷರು

*ದಂಡಿನ ರಾಜಪ್ಪ ಪರಿವಾರ ಪ್ರತಿಷ್ಠಾನ ಟ್ರಸ್ಟ್ ಹಾಗೂ ಕುಟುಂಬ ವರ್ಗದವರು*

### ಸುರೇಶ್‌ರಾವ್ ಪಾಟುವಾಳೆ ನಿಧನ



ದಾವಣಗೆರೆ ಕಲ್ಲೇಶ್ವರ ರೈಸ್ ಮಿಲ್ ಹತ್ತಿರ ಮಟ್ಟಿಕಲ್ಲು ವಾಸಿ ಪಾಟುವಾಳೆ ಸುರೇಶ್ (45) ಇವರು ದಿನಾಂಕ 13.10.2021ರ ಬುಧವಾರ ಸಂಜೆ 6 ಗಂಟೆಗೆ ನಿಧನರಾದರು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 14.10.2021ರ ಗುರುವಾರ ಮಧ್ಯಾಹ್ನ 1 ಕ್ಕೆ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

### ಎಲೆಬೇತೂರು ಬೆನವಪ್ಪ ಮಂಜಪ್ಪ ನಿಧನ



ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮದ ವಾಸಿ ಶ್ರೀಮತಿ ಜಯಮ್ಮ, ಮರಿಯಪ್ಪನವರ ಪುತ್ರ ಬೆನವಪ್ಪ ಮಂಜಪ್ಪ (48) ಅವರು ದಿನಾಂಕ 13.10.2021ರ ಬುಧವಾರ ಮಧ್ಯಾಹ್ನ 1.45ಕ್ಕೆ ನಿಧನರಾದರು. ತಂದೆ-ತಾಯಿ, ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 14.10.2021ರ ಗುರುವಾರ ಮಧ್ಯಾಹ್ನ 1 ಗಂಟೆಗೆ ಎಲೆಬೇತೂರಿನ ರುದ್ರಭೂಮಿಯಲ್ಲಿ ನೆರವೇರಲಿದೆ.





# ಆಯುಧ ಪೂಜೆ, ವಿಜಯದಶಮಿ ಸಂಭ್ರಮಕ್ಕೆ ಖರೀದಿ ಜೋರು

ದಾವಣಗೆರೆ, ಅ.13 - ಆಯುಧ ಪೂಜೆ ಹಾಗೂ ವಿಜಯದಶಮಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲು ಜನರು ಮುಂದಾಗಿದ್ದು, ಬುಧವಾರ ಮುಂಜಾನೆಯಿಂದಲೇ ದಾವಣಗೆರೆ ಮಾರುಕಟ್ಟೆಯಲ್ಲಿ ಹಬ್ಬಕ್ಕೆ ಬೇಕಾದ ವಸ್ತುಗಳ ಖರೀದಿಯ ಭರಾಟೆ ಜೋರಾಗಿತ್ತು.

ಆಯುಧ ಪೂಜೆ ಹಾಗೂ ವಿಜಯದಶಮಿ ಅಂಗವಾಗಿ ವಾಹನಗಳನ್ನು ಸ್ವಚ್ಛಗೊಳಿಸಿ, ಹೂವಿನಿಂದ ಅಲಂಕರಿಸಿ, ಪೂಜಿಸುವುದು. ಅಂಗಡಿ ಮುಂಗಟ್ಟು, ಕಚೇರಿಗಳನ್ನು ಅಲಂಕರಿಸಿ ಪೂಜೆ ಸಲ್ಲಿಸುವುದು. ಮನೆಗಳಲ್ಲಿ ಸಂಭ್ರಮ ದಿಂದ ಹಬ್ಬ ಆಚರಿಸುವುದು ಸಾಮಾನ್ಯ.

ಈ ಹಿನ್ನೆಲೆಯಲ್ಲಿ ಮಾರುಕಟ್ಟೆಯಲ್ಲಿ ಹೂ, ಮಾವಿನ ಸೊಪ್ಪು, ಬಾಳೆ ಕಂಬಕ್ಕೆ ಹೆಚ್ಚಿನ ಬೇಡಿಕೆ ಇತ್ತು. ಗ್ರಾಮೀಣ ಪ್ರದೇಶದಿಂದ ಹೆಚ್ಚಿನ ಸಂಖ್ಯೆಯಲ್ಲಿ ಹಳ್ಳಿಗರು ಬಾಳೆಕಂಬ, ಮಾವಿನ ಸೊಪ್ಪು ತಂದು ಪ್ರಮುಖ ರಸ್ತೆ ಹಾಗೂ ವೃತ್ತಗಳಲ್ಲಿ ಮಾರಾಟಕ್ಕಿಟ್ಟಿದ್ದರು.

**ಪಿ.ಬಿ. ರಸ್ತೆಯಲ್ಲಿ ಸಂಚಾರಕ್ಕೆ ತೊಂದರೆ:** ಪಿ.ಬಿ. ರಸ್ತೆಯ ರಾಜನಹಳ್ಳಿ ಧರ್ಮಛತ್ರದ ಮುಂಭಾಗವೇ ಹಣ್ಣು, ಹೂ ಮಾರಾಟ ಹಾಗೂ ಕೊಳ್ಳುವಿಕೆಯಲ್ಲಿ ಜನರು ತೊಡಗಿದ್ದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗಿತ್ತು. ಹಬ್ಬದ ಹಿನ್ನೆಲೆಯಲ್ಲಿ ಜನತೆ ಮಾರುಕಟ್ಟೆಗೆ ಲಗ್ಗೆಯಿಟ್ಟಿದ್ದರಿಂದ ವಾಹನಗಳ ಸಂಖ್ಯೆಯೂ ಹೆಚ್ಚಾಗಿ ಗಡಿಯಾರ ಕಂಬ, ಕೆ.ಆರ್. ಮಾರುಕಟ್ಟೆ ಇನ್ನಿತರೆ ಸ್ಥಳಗಳಲ್ಲಿ ಜನ ಜಂಗುಳಿ, ವಾಹನಗಳ ಸಂಖ್ಯೆ ಹೆಚ್ಚಾಗಿತ್ತು. ಸಂಚಾರ ಸುಗಮಗೊಳಿಸಲು ಪೊಲೀಸರು ಹರಸಾಹಸ ಪಡಬೇಕಾಗಿತ್ತು.

ಬಾಳೆಕಂಬ ಎರಡಕ್ಕೆ 20 ರೂ.ಗಳಿಂದ 100 ರೂ.ಗಳವರೆಗೂ ಗಾತ್ರಕ್ಕೆ ತಕ್ಕಂತೆ ಮಾರಾಟ ಮಾಡಲಾಯಿತು. ಇನ್ನು ಬೂದ ಕುಂಬಳಕಾಯಿ ದರ 50 ರೂ.ಗಳಿಂದ ಆರಂಭವಾಗಿತ್ತು. ಬೇಡಿಕೆ ಹೆಚ್ಚಾಗಿದ್ದರಿಂದ ಹೂವಿನ ದರ ಏರಿಕೆಯಾಗಿತ್ತು. ಚಂಡೆ ಹೂ ಮಾರೊಂದಕ್ಕೆ 60-80 ರೂ., ಸೇವಂತಿಗೆ 40-60 ರೂ., ಮಲ್ಲಿಗೆ 30-40 ರೂ.ಗಳಿಗೆ ಮಾರಾಟವಾಗುತ್ತಿತ್ತು.

ಬುಧವಾರ ಸಂಜೆ ಮಳೆಯಾಗುತ್ತಿದ್ದಂತೆ ಬೆಳಿಗ್ಗೆಗಿಂತ 10-20 ರೂ.ಗಳ ಕಡಿಮೆ ದರಗಳಿಗೆ ಮಾರಾಟವಾಗುತ್ತಿದ್ದುದು ಕಂಡು ಬಂತು.

## ಜಿಲ್ಲೆಯಲ್ಲಿ ವಾಡಿಕೆಗಿಂತ ಹೆಚ್ಚು ಮಳೆ: 263.62 ಹೆ.ಬೆಳೆ ಹಾನಿ

ದಾವಣಗೆರೆ, ಸೆ.13- ಜಿಲ್ಲೆಯಲ್ಲಿ ಅಕ್ಟೋಬರ್ 1 ರಿಂದ ಇಲ್ಲಿಯವರೆಗೆ ವಾಡಿಕೆಗಿಂತ ಮೂರುಪಟ್ಟು ಹೆಚ್ಚು ಮಳೆಯಾಗಿದ್ದು, ಒಬ್ಬರು ಮೃತಪಟ್ಟು, 263.62 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ. 59 ಮನೆಗಳಿಗೆ ಪೂರ್ಣ ಹಾಗೂನಿ 226 ಮನೆಗಳಿಳು ಭಾಗಷಃ ಹಾನಿಗೊಂಡಿವೆ.

ದಾವಣಗೆರೆ ತಾಲ್ಲೂಕಿನಲ್ಲಿ 23.87 ಹೆಕ್ಟೇರ್ ಮೆಕ್ಕೆಜೋಳ, 7.68 ಹೆ. ಜೋಳ, 0.89 ಹೆ.ಕಬ್ಬು 1.61 ಹೆ.ಭತ್ತ, 0.89 ಹೆ.ಶೇಂಗಾ ಹಾಗೂ 0.40 ಹೆ.ಬಾಳೆ, 4.04 ಹೆ.ಪ್ರದೇಶದ ತರಕಾರಿ ಬೆಳೆಗಳಿಗೆ ಹಾನಿಯಾಗಿದೆ.

ಹರಿಹರ ತಾಲ್ಲೂಕಿನಲ್ಲಿ 0.48 ಹೆ., ಚನ್ನಗಿರಿ 214.47, ಹೊನ್ನಾಳಿಯಲ್ಲಿ 8.49 ಹೆ. ಪ್ರದೇಶದಲ್ಲಿ ಮೆಕ್ಕೆಜೋಳ ಬೆಳೆಗೆ ಹಾನಿಯಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 86, ಹರಿಹರ 63, ಹೊನ್ನಾಳಿ 14, ನ್ಯಾಮತಿ 20 ಹಾಗೂ ಚನ್ನಗಿರಿ ತಾಲ್ಲೂಕಿನ 102 ಮನೆಗಳಿಗೆ ಹಾನಿಯಾಗಿದೆ.

**ಮೂರುಪಟ್ಟು ಮಳೆ :** ಅಕ್ಟೋಬರ್ ತಿಂಗಳಲ್ಲಿ ದಾವಣಗೆರೆ ಹಾಗೂ ಹರಿಹರ ತಾಲ್ಲೂಕಿನಲ್ಲಿ ವಾಡಿಕೆಯ ಮೂರು ಪಟ್ಟು ಹೆಚ್ಚು ಮಳೆಯಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ ವಾಡಿಕೆ ಮಳೆ ಪ್ರಮಾಣ 61.ಮಿ.ಮೀ. ಇದ್ದು, ವಾಸ್ತವಿಕವಾಗಿ 184 ಮಿ.ಮೀ. ಮಳೆಯಾಗಿದೆ. ಅದೇ ರೀತಿ ಹರಿಹರ ತಾಲ್ಲೂಕಿನಲ್ಲಿ 60 ಮಿ.ಮೀ. ವಾಡಿಕೆ ಮಳೆಯಾಗಿದ್ದರೆ ವಾಸ್ತವಿಕವಾಗಿ 194 ಮಿ.ಮೀ.. ಚನ್ನಗಿರಿ ತಾಲ್ಲೂಕಿನಲ್ಲೂ 56 ಮಿ.ಮೀ. ವಾಡಿಕೆ ಮಳೆಗೆ, ವಾಸ್ತವಿಕವಾಗಿ 157 ಮಿ.ಮೀ. ಮಳೆಯಾಗಿದೆ. ಇಲ್ಲೂ ಸಹ ಬಹುತೇಕ ವಾಡಿಕೆಗಿಂತ ಮೂರುಪಟ್ಟು ಹೆಚ್ಚು ಮಳೆಯಾಗಿದೆ.

## ಕಚ್ಚಾ ಖಾದ್ಯ ತೈಲದ ಮೇಲಿನ ಸುಂಕ ರದ್ದು

ನವದೆಹಲಿ ಅ. 13 - ಕಚ್ಚಾ ತಾಳೆ ಎಣ್ಣೆ, ಸೂರ್ಯಕಾಂತಿ ಹಾಗೂ ಸೋಯಾಬೀನ್ ತೈಲದ ಮೇಲಿನ ಮೂಲ ಆಮದು ಸುಂಕವನ್ನು ಕೇಂದ್ರ ಸರ್ಕಾರ ರದ್ದುಗೊಳಿಸಿದೆ. ಇದೇ ವೇಳೆ ಸಂಸ್ಕರಿತ ಖಾದ್ಯ ತೈಲದ ಮೇಲಿನ ಆಮದು ತೆರಿಗೆಯನ್ನೂ ಕಡಿತಗೊಳಿಸಲಾಗಿದೆ. ಕೇಂದ್ರ ಸರ್ಕಾರದ ಕ್ರಮದಿಂದ ಖಾದ್ಯ ತೈಲದ ಬೆಲೆ ಲೀಟರ್‌ಗೆ 15 ರೂ.ಗಳಷ್ಟು ಕಡಿಮೆಯಾಗಬಹುದು ಎಂದು ಖಾದ್ಯ ತೈಲ ಉದ್ಯಮ ಸಂಸ್ಥೆಯಾದ ಎಸ್.ಇ.ಎ. ತಿಳಿಸಿದೆ.

# ಸಾಲ ನೀಡಿಕೆಗೆ ವಿಳಂಬ ಧೋರಣೆ ಸರಿಯಲ್ಲ

## ಲೀಡ್ ಬ್ಯಾಂಕ್ ಸಭೆಯಲ್ಲಿ ಬ್ಯಾಂಕ್ ಅಧಿಕಾರಿಗಳಿಗೆ ಸಂಸದ ಸಿದ್ದೇಶ್ವರ ತರಾಟೆ




ದಾವಣಗೆರೆ, ಅ.13- ಕೇಂದ್ರ ಸರ್ಕಾರ ಬಡವರು ಸ್ವಾವಲಂಬಿಗಳಾಗಲು ಅರ್ಹ ಫಲಾನುಭವಿಗಳಿಗೆ ಅನುಕೂಲವಾಗಲಿ ಎಂದು ಯೋಜನೆಗಳನ್ನು ರೂಪಿಸಿದೆ. ಬ್ಯಾಂಕ್‌ಗಳಿಗೆ ಅರ್ಜಿ ಸಲ್ಲಿಕೆಯಾದ ಕೆಲ ದಿನಗಳಲ್ಲಿ ಬ್ಯಾಂಕ್‌ಗಳು ಸಾಲ ಸೌಲಭ್ಯ ಒದಗಿಸಬೇಕು. ಆದರೆ ಬ್ಯಾಂಕ್‌ಗಳು ತಿಂಗಳುಗಟ್ಟಲೆ ಅರ್ಜಿಯನ್ನು ವಿಲೇವಾರಿ ಮಾಡದೆ ವಿಳಂಬ ಧೋರಣೆ ಅನುಸರಿಸುತ್ತಿರುವುದು ಸರಿಯಲ್ಲ. ಇಂತಹ ಅರ್ಜಿಗಳನ್ನು ಬ್ಯಾಂಕ್‌ಗಳು ಒಂದು ತಿಂಗಳಲ್ಲಿ ಇತ್ಯರ್ಥಪಡಿಸಬೇಕು ಎಂದು ಸಂಸದ ಡಾ. ಜಿ. ಎಂ. ಸಿದ್ದೇಶ್ವರ್ ಬ್ಯಾಂಕ್ ಅಧಿಕಾರಿಗಳಿಗೆ ಸೂಚಿಸಿದರು.

ಬುಧವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಪುನರಾವಲೋಕನ ಸಮಿತಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪ್ರಧಾನಮಂತ್ರಿ ಜೀವನ್ ಜ್ಯೋತಿ ಬಿಮಾ, ಪ್ರಧಾನಮಂತ್ರಿ ಸುರಕ್ಷಾ ಬಿಮಾ ಯೋಜನೆಗಳ ಬಗೆಗೆ ಹೆಚ್ಚು ಪ್ರಚುರಪಡಿಸಬೇಕು. ಕೆಲವೊಮ್ಮೆ ಬೆಳೆ ವಿಮೆ ಯೋಜನೆಯಡಿ ಮಂಜೂರಾಗಿರುವ ವಿಮಾ ಮೊತ್ತದ ಬಗ್ಗೆ ಸಂಬಂಧಿತ ಫಲಾನುಭವಿಗಳಿಗೇ ಮಾಹಿತಿ ಇರುವುದಿಲ್ಲ. ಪರಿಹಾರ ಮೊತ್ತ ಬ್ಯಾಂಕ್ ಖಾತೆಗೆ ಜಮೆ ಆಗಿರುವ ಬಗ್ಗೆ ಬ್ಯಾಂಕ್ ಅಧಿಕಾರಿಗಳು ಸಂಬಂಧಿ ತರ ಗಮನಕ್ಕೆ ತರಬೇಕು ಎಂದು ಹೇಳಿದರು.

ಕೇಂದ್ರ ಸರ್ಕಾರ ಕೃಷಿ ಉತ್ಪನ್ನಗಳನ್ನು ಆಧರಿಸಿ ಸಣ್ಣ ಪ್ರಮಾಣದ ಆಹಾರ ಸಂಸ್ಕರಣಾ ಘಟಕಗಳನ್ನು ಪ್ರಾರಂಭಿಸುವ ಮೂಲಕ ರೈತಾಪಿ ವರ್ಗದವರು ಸಹ ಉದ್ಯಮಿಗಳಾಗಬೇಕು ಎಂಬ ಸದುದ್ದೇಶದಿಂದ ನೂತನವಾಗಿ ಪಿಎಂಎಫ್‌ಎಂಇ ಯೋಜನೆ ಪ್ರಾರಂಭಿಸಿ 10 ಸಾವಿರ ಕೋಟಿ ಅನುದಾನ ಮೀಸಲಿಟ್ಟಿದೆ. ಜಿಲ್ಲೆಯಲ್ಲಿ 25 ರಿಂದ 26 ಕೋಟಿಯಲ್ಲಿ ಕೇವಲ 6 ಜನ ರೈತರಿಗೆ 35 ಲಕ್ಷ ರೂಪಾಯಿಯಷ್ಟು ಸಾಲ ನೀಡಿರುವ ಸಾಧನೆ ಶೂನ್ಯಕ್ಕೆ ಸಮವಾಗುತ್ತದೆ. ಸಿಬಿಲ್ ಅಂಕಗಳ ಮಾನದಂಡದಲ್ಲಿ ಸಾಲದ ಅರ್ಜಿಗಳನ್ನು ತಿರಸ್ಕರಿಸುವುದು ಸರಿಯಲ್ಲ.

ಕೃಷಿಕರು ಸಹ ಉದ್ಯಮ ಪ್ರಾರಂಭಿಸಲು ಉತ್ತೇಜನ ನೀಡುವ ಯೋಜನೆಗೆ ಬ್ಯಾಂಕ್ ವಲಯ ಸಹ ಪೂರಕವಾಗಿ ಸ್ಪಂದಿಸಬೇಕು. ಹೆಚ್ಚಿನ ಪ್ರಮಾಣದಲ್ಲಿ ಸಾಲ ಸೌಲಭ್ಯ ಒದಗಿಸುವ ಮೂಲಕ ಯೋಜನೆಯ ಮೂಲ ಉದ್ದೇಶ ಈಡೇರಿಸಬೇಕು ಎಂದು ಸಂಸದ ಡಾ। ಜಿ.ಎಂ. ಸಿದ್ದೇಶ್ವರ ತಿಳಿಸಿದರು.

ಕೆಲವರು ಕೇವಲ ಸಹಾಯಧನ ಪಡೆಯುವ ಉದ್ದೇಶದಿಂದಲೇ ಸಾಲಕ್ಕೆ ಅರ್ಜಿ ಸಲ್ಲಿಸುವುದು ಉಂಟು. ಸಾಲ ಮಂಜೂರಾತಿ ಮಾಡುವಾಗ ಎಲ್ಲವನ್ನೂ ಗಮನಿಸಬೇಕು. ಪಡೆದಂತಹ ಸಾಲ ಸದುಪಯೋಗ ಆಗುತ್ತಿದೆಯೇ ಎಂದು ಸಂಬಂಧಿಸಿದ ಇಲಾಖೆ ಅಕಾರಿಗಳು ಪರಿಶೀಲನೆ ನಡೆಸಬೇಕು. ಕೇಂದ್ರ ಸರ್ಕಾರದ ಯೋಜನೆಗಳಿಗೆ ಸಂಬಂಧಿಸಿದಂತೆ ಆದಷ್ಟು ಬೇಗ ಸಾಲ ಮಂಜೂರಾತಿ ಮಾಡಬೇಕು ಎಂದು ಸಂಸದರು ಸೂಚಿಸಿದರು.

ಲೀಡ್‌ಬ್ಯಾಂಕ್ ವ್ಯವಸ್ಥಾಪಕ ಸುಶ್ರುತ್ ಡಿ. ಶಾಸ್ತ್ರಿ ಮಾತನಾಡಿ, ಜಿಲ್ಲೆಯಲ್ಲಿ ಮೊದಲ ತ್ರೈಮಾಸಿಕ ಅವಧಿಯಲ್ಲಿ ಕೃಷಿ, ಸಣ್ಣ ಕೈಗಾರಿಕೆ, ಇತರೆ ಆದ್ಯತಾ ವಲಯಗಳು ಒಳಗೊಂಡಂತೆ 1431 ಕೋಟಿ ಸಾಲ (6ನೇ ಪುಟಕ್ಕೆ)

# ನಾಯಕರಿಂದಲೇ ಡಿಕೆಶಿ ಕಮೀಷನ್ ಪುರಾಣ ಬಯಲು: ಕಾಂಗ್ರೆಸ್ ಪಕ್ಷಕ್ಕೆ ತೀವ್ರ ಮುಜುಗರ

**ಪತ್ರಿಕಾ ಗೋಷ್ಠಿಗೆ ಮುಂಚೆ ಮೈಕ್ ಆನ್ ಮಾಡಿ ಲಂಚದ ಬಗ್ಗೆ ಗುಸು - ಗುಸು ಮಾತನಾಡಿದ ಕೆಪಿಸಿಸಿ ವಕ್ತಾರ ವಿ.ಎಸ್. ಉಗ್ರಪ್ಪ ಹಾಗೂ ಮಾಧ್ಯಮ ಸಂಯೋಜಕ ಎಂ.ಎ. ಸಲೀಂ ಅವರ ವೀಡಿಯೋ ವೈರಲ್**

**ಸಲೀಂ ಅಮಾನತ್ತು, ಉಗ್ರಪ್ಪಗೆ ನೋಟಿಸ್**

ಬೆಂಗಳೂರು, ಅ. 13- ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಜಲ ಸಂಪನ್ಮೂಲ ಸಚಿವರಾಗಿದ್ದಾಗ ಶೇ.12ರಷ್ಟು ಲಂಚ ಪಡೆಯು ತ್ತಿದ್ದರು ಎಂದು ಕಾಂಗ್ರೆಸ್ ನಾಯಕರು ಕಾಂಗ್ರೆಸ್ ಕಚೇರಿಯಲ್ಲೇ ಮಾತನಾಡಿ ಕೊಂಡಿದ್ದು, ಬಯಲಾಗಿ ಪಕ್ಷಕ್ಕೆ ತೀವ್ರ ಮುಜುಗರ ತಂದಿದೆ.

ಕೆಪಿಸಿಸಿ ವಕ್ತಾರ ವಿ.ಎಸ್. ಉಗ್ರಪ್ಪ ಹಾಗೂ ಮಾಧ್ಯಮ ಸಂಯೋಜಕ ಎಂ.ಎ. ಸಲೀಂ ಅವರು ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗೋಷ್ಠಿ ಕರೆದಿದ್ದರು. ಗೋಷ್ಠಿಗೆ ಮುಂಚೆ ಮೈಕ್ ಆನ್ ಮಾಡಿ ಲಂಚದ ಬಗ್ಗೆ ಗುಸು - ಗುಸು ಮಾತನಾಡಿದ್ದಾರೆ.

ಈ ಸಂಭಾಷಣೆ ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿ ದ್ದಂತೆ, ಕೆಂಡಾಮಂಡಲರಾದ ಶಿವಕುಮಾರ್, ಸಲೀಂ ಮತ್ತು ಉಗ್ರಪ್ಪ ಅವರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ನಂತರ ಸಲೀಂ ಅವರನ್ನು ಪಕ್ಷದಿಂದ ಅಮಾನತ್ತುಗೊ ಳಿಸಿದರೆ, ಉಗ್ರಪ್ಪಗೆ ನೋಟಿಸ್ ಕಳಿಸಲಾಗಿದೆ. ಹಾಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಜಲ ಸಂಪನ್ಮೂಲ ಸಚಿವರಾಗಿದ್ದಾಗ ಗುತ್ತಿಗೆ ನೀಡುವಾಗ ಶೇ. 12ರಷ್ಟು ಲಂಚ ಪಡೆಯುತ್ತಿದ್ದರು ಎಂದು ಕಾಂಗ್ರೆಸ್ ನಾಯಕರೇ ಹೇಳಿರುವುದು ಬಿಜೆಪಿಗೆ ಅಸ್ತ್ರ ನೀಡಿದಂ ತಾಗಿದೆ. ಆಸಕ್ತಿಕರ ಅಂಶವೆಂದರೆ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಆಪ್ತರ ಮೇಲೆ ನಡೆದ ಐ.ಟಿ. ದಾಳಿಯ ಕುರಿತು ಮಾತನಾಡಲು ಕರೆದಿದ್ದ ಕಾಂಗ್ರೆಸ್ ಪತ್ರಿಕಾಗೋಷ್ಠಿ ತಿರುಗುಬಾಣದಂತಾಗಿದೆ.

ಪತ್ರಿಕಾಗೋಷ್ಠಿಗೆ ಮುಂಚೆ ಗುಸು ಗುಸು ಮಾತನಾಡಿದ ಸಲೀಂ, ಶಿವಕುಮಾರ್ ನೀರಾವರಿ ಸಚಿವರಾಗುವುದಕ್ಕೂ ಮುನ್ನ ಗುತ್ತಿಗೆದಾರರು ಶೇ. 6ರಿಂದ 8 ಪರ್ಸೆಂಟ್ ನೀಡುತ್ತಿದ್ದರು. ಶಿವಕುಮಾರ್ ಪರ್ಸೆಂಟ್ ಅನ್ನು ಶೇ. 12 ಮಾಡಿದರು. ಶಿವಕುಮಾರ್ ಕಲೆಕ್ಷನ್ ಗಿರಾಕಿ, ಅವರ ಹುಡುಗರ ಬಳಿಯೇ 50 ರಿಂದ 100 ಕೋಟಿ ಇದೆ ಎಂದರೆ ಇವರ ಬಳಿ ಎಷ್ಟಿರಬುಹುದು? ಎಂದು ಪ್ರಶ್ನಿಸಿದ್ದಾರೆ.

ಶಿವಕುಮಾರ್ ಬರೀ ಕಲೆಕ್ಷನ್ ಗಿರಾಕಿ, ಮಾಧ್ಯಮದವರ ಬಳಿ ಮಾತನಾಡಲೂ ಬರುವುದಿಲ್ಲ, ಸಿದ್ದರಾಮಯ್ಯ ಹೇಗೆ ಖಡಕ್ ಆಗಿ ಮಾತನಾಡುತ್ತಾರೆ, ಸಿದ್ದು ಅಷ್ಟು ಕೆಪಾಸಿಟಿ ಇಲ್ಲ ಇವರಿಗೆ ಎಂದೂ ಹೇಳಿದ್ದಾರೆ.

ಈ ಬಗ್ಗೆ ಕಿವಿಯಲ್ಲೇ ಪಿಸುಗುಟ್ಟಿದ ಉಗ್ರಪ್ಪ, ನಾವು ಪಟ್ಟು ಹಿಡಿದು ಅಧ್ಯಕ್ಷರನ್ನಾಗಿ ಮಾಡಿದೆವು. ಈಗ ನೋಡಿದರೆ ನಮ್ಮ ಬುಡಕ್ಕೇ ಇಡುತ್ತಿದ್ದಾನೆ ಎಂದಿದ್ದಾರೆ.

ಇವರಿಬ್ಬರ ಸಂಭಾಷಣೆ ವೈರಲ್ ಆಗುತ್ತಿದ್ದಂತೆ, ಕಾಂಗ್ರೆಸ್‌ನಲ್ಲಿನ ಆಂತರಿಕ ಕಲಹಕ್ಕೆ ಮತ್ತಷ್ಟು ತುಪ್ಪ ಸುರಿದಂತಾಗಿದೆ.

ಈ ಬೆಳವಣಿಗೆ ನಂತರ ಶಿವಕುಮಾರ್ ಮತ್ತು ಕಾಂಗ್ರೆಸ್ ಅನ್ನು ಟೀಕಿಸಿ, ಬಿಜೆಪಿ ಸರಣಿ ಟ್ವೀಟ್ ಮಾಡಿದೆ.

ಪಕ್ಷದ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಪ್ರತಿಕ್ರಿಯಿಸಿ, ಸತ್ಯ ಯಾವತ್ತಿದ್ದರೂ ಹೊರಗೆ ಬರಲೇಬೇಕು. ಡಿ.ಕೆ.ಶಿ. ಮೇಲೆ ಇ.ಡಿ., ಸಿಬಿಐ ದಾಳಿ ನಡೆದಾಗ ರಾಜಕೀಯ ಪ್ರೇರಿತ ಎಂದವರಿಗೆ ಅವರದೇ ಪಕ್ಷದ ಮುಖಂಡರ ಹೇಳಿಕೆ ಸಾಕ್ಷಿಯಾಗಿದೆ ಎಂದಿದ್ದಾರೆ.

### ಕೈ ಒಳಜಗಳದಿಂದ ಬಾಯಿ ಬಿಟ್ಟಿದ್ದಾರೆ

**ಸಚಿವ ಖೂಬಾ ಪ್ರತಿಕ್ರಿಯೆ**

**ಕಾಂಗ್ರೆಸ್ ಪಕ್ಷದಲ್ಲಿನ ಒಳಜಗಳದಿಂದಾಗಿ ಆ ಪಕ್ಷದ ನಾಯಕರಾದ ವಿ.ಎಸ್. ಉಗ್ರಪ್ಪ ಹಾಗೂ ಮಾಧ್ಯಮ ಸಂಯೋಜಕ ಎಂ.ಎ. ಸಲೀಂ ಸತ್ಯ ಬಾಯಿ ಬಿಟ್ಟಿದ್ದಾರೆ ಎಂದು ಕೇಂದ್ರ ಸಚಿವ ಭಗವಂತ ಖೂಬಾ ಹೇಳಿದ್ದಾರೆ.**

**ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಕಮೀಷನ್ ಪಡೆಯುತ್ತಾರೆ ಎಂದು ಸಲೀಂ ಹಾಗೂ ಉಗ್ರಪ್ಪ ನೀಡಿರುವ ಹೇಳಿಕೆಗಳ ಕುರಿತು ಪ್ರಸ್ತಾಪಿಸಿದ ಅವರು, ಉಭಯರಿಗೂ ಇವತ್ತು ಜ್ಞಾನೋದಯ ಆಗಿದೆ. ಆದರೆ, ಕಾಂಗ್ರೆಸ್‌ನಲ್ಲಿ ಎಲ್ಲರ ಸಂಸ್ಕೃತಿಯೂ ಅದೇ ಆಗಿದೆ ಎಂದರು. ಕಾಂಗ್ರೆಸ್‌ನಲ್ಲಿ ಡಿಕೆಶಿ ಹಾಗೂ ಸಿದ್ದರಾಮಯ್ಯ ಅವರಿಗೆ ಪರಸ್ಪರ ಆಗುವುದಿಲ್ಲ. ಅಲ್ಲಿ ಹಲವು ಗುಂಪುಗಳಿವೆ, ಘರ್ಷಣೆ ನಡೆಯುತ್ತಿದೆ ಎಂದೂ ಖೂಬಾ ಹೇಳಿದರು.**

ನಿನ್ನೆ ಘಟನೆಗೆ ಸಂಬಂಧಿಸಿದಂತೆ ಇಂದು ತುರ್ತು ಪತ್ರಿಕಾಗೋಷ್ಠಿ ನಡೆಸಿದ ವಿ.ಎಸ್. ಉಗ್ರಪ್ಪ, ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ಅವರನ್ನು 3-4 ದಶಕಗಳಿಂದ ಬಲ್ಲೆ, ಅವರು ಕ್ರಿಯಾಶೀಲ, ರಾಜ್ಯದ ಬಗ್ಗೆ ಬದ್ಧತೆ ಇರುವ ರಾಜಕಾರಣಿ, ಸೋಲಾರ್ ಕೇಂದ್ರದಲ್ಲಿ ಜಮೀನು ಖರೀದಿ ಮಾಡದೇ, ಜಮೀನನ್ನು ಲೀಸ್ ಮೂಲಕ ತೆಗೆದುಕೊಂಡಿರುವುದೇ ಶಿವಕುಮಾರ್ ಅವರ ಜನಪರ ಹಾಗೂ ಅಭಿವೃದ್ಧಿ ಕೆಲಸಕ್ಕೆ ಸಾಕ್ಷಿ ಎಂದು ಬಣ್ಣಿಸಿದರು.

ಕೆಪಿಸಿಸಿ ಮಾಧ್ಯಮ ವಿಭಾಗದ ಸಹ ಸಂಚಾಲಕ ಸಲೀಂ ಅವರು, ನಾನು ಪತ್ರಿಕಾಗೋಷ್ಠಿಗೆ ಆಗಮಿಸಿದಾಗ, (6ನೇ ಪುಟಕ್ಕೆ)

# ಡಿಕೆಶಿ ಹತ್ತಿಕ್ಕಲು ಸಿದ್ದರಾಮಯ್ಯ ಯತ್ನ : ಹೆಚ್‌ಡಿಕೆ ಆರೋಪ

ಬೆಂಗಳೂರು, ಅ. 13- ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಆಗುವುದನ್ನು ತಪ್ಪಿಸಲು ಹಾಗೂ ಅವರನ್ನು ಮನೆಗೆ ಕಳುಹಿಸಲು ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ವಿಡಿಯೋ ವೈರಲ್ ಮಾಡಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಕಚೇರಿಯಲ್ಲಿ ಆ ಪಕ್ಷದ ಇಬ್ಬರು ಮುಖಂಡರೇ ಪತ್ರಿಕಾಗೋಷ್ಠಿಗೂ ಮುನ್ನ ಶಿವಕುಮಾರ್ ಭ್ರಷ್ಟಾಚಾರವನ್ನು ಬಿಚ್ಚಿಟ್ಟಿದ್ದಾರೆ ಎಂದರು. ಶಿವಕುಮಾರ್ ಮುಖ್ಯಮಂತ್ರಿ ಆಗಬೇಕು ಎಂದು ಶ್ರಮಪಡುತ್ತಿದ್ದಾರೆ, ಆದರೆ, ಅವರ ಪಕ್ಷದವರೇ ಅವರನ್ನು ಮನೆಗೆ ಕಳುಹಿಸಲು ವೇದಿಕೆ ಸಿದ್ಧ ಮಾಡುತ್ತಿದ್ದಾರೆ ಎಂದೂ ಕುಮಾರಸ್ವಾಮಿ ಹೇಳಿದ್ದಾರೆ.

# ರಷ್ಯಾದಲ್ಲಿ ಕೊರೊನಾ ಸಾವು ದಾಖಲೆ ಹಂತಕ್ಕೆ

**ಲಸಿಕೆ ನಿಧಾನ, ನಿರ್ಬಂಧ ಕೊರತೆಯಿಂದ ಪರಿಸ್ಥಿತಿ ಉಲ್ಬಣ**

ಮಾಸ್ಕೋ, ಅ. 13 - ರಷ್ಯಾದಲ್ಲಿ ಕೊರೊನಾದಿಂದ ಪ್ರತಿದಿನ ಸಂಭವಿಸುವ ಸಾವಿನ ಪ್ರಮಾಣ ದಾಖಲೆ ಹಂತಕ್ಕೆ ತಲುಪಿದೆ. ಲಸಿಕೆ ನೀಡುವುದು ನಿಧಾನವಾಗುತ್ತಿರುವುದು ಹಾಗೂ ಅಧಿಕಾರಿಗಳು ನಿರ್ಬಂಧ ಹೇರಲು ಹಿಂಜರಿಯುತ್ತಿರುವುದು ಸಾವು ಹೆಚ್ಚಾಗಲು ಕಾರಣವಾಗಿದೆ.

ಕಳೆದ 24 ಗಂಟೆಗಳಲ್ಲಿ 984 ಜನರು ಕೊರೊನಾದಿಂದ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಳೆದ ಕೆಲ ವಾರಗಳಲ್ಲಿ ಕೊರೊನಾದಿಂದ ಸಾವುಗಳು ಸಂಭವಿಸುವುದು ಹೆಚ್ಚಾಗುತ್ತಿದೆ. ಬುಧವಾರದವರೆಗೆ ದೇಶದಲ್ಲಿ 28,717 ಜನರು ಕೊರೊನಾದಿಂದ ಸಾವನ್ನಪ್ಪಿದ್ದಾರೆ.

ಲಸಿಕೆ ನೀಡುವುದರಲ್ಲಿ ಹಿಂದೆ ಬಿದ್ದಿರುವುದೇ ಸಾವು ಹೆಚ್ಚಾಗಲು ಕಾರಣ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. 14.6 ಕೋಟಿ ರಷ್ಯನ್ನರ ಪೈಕಿ 4.3 ಕೋಟಿ ಜನರು ಮಾತ್ರ ಎರಡೂ ಡೋಸ್ ಲಸಿಕೆ ಪಡೆದಿದ್ದಾರೆ ಎಂದು ಪ್ರಧಾನ ಮತ್ರಿ ಮೈಖೆಲ್ ಮಿಶುಸ್ತಿನ್ ಹೇಳಿದ್ದಾರೆ.

ಲಸಿಕೆ ಹೆಚ್ಚಿಸಲು ಕ್ರಮ ತೆಗೆದುಕೊಳ್ಳುವಂತೆ ಅಧ್ಯಕ್ಷ ವ್ಲಾಡಿಮಿರ್ ಪುತಿನ್ ಹೇಳಿದ್ದಾರೆ. ಆದರೆ, ಲಸಿಕೆಗಾಗಿ ಬಲ ಪ್ರಯೋಗ ಮಾಡಬಾರದು ಎಂದೂ ಹೇಳಿದ್ದಾರೆ.

ಲಸಿಕೆ ಕುರಿತ ಹಿಂಜರಿಕೆ ಹಾಗೂ ಅಪಪ್ರಚಾರವೇ, ಜನರು ಲಸಿಕೆ ಪಡೆಯುವುದರಿಂದ ಹಿಂದೆ ಸರಿಯುವುದಕ್ಕೆ ಕಾರಣ ಎಂದು ಪರಿಣಿತರು ತಿಳಿಸಿದ್ದಾರೆ.

ಕೊರೊನಾ ಮೊದಲ ಬಾರಿಗೆ ಕಂಡು ಬಂದಾಗ ಹಲವು ತಿಂಗಳ ಕಾಲ ನಿರ್ಬಂಧ ಹೇರಲಾಗಿತ್ತು. ಇದು ಆರ್ಥಿಕ ಬೆಳವಣಿಗೆ ಕುಸಿಯಲು ಕಾರಣವಾಗುವ ಜೊತೆಗೆ, ಪುತಿನ್ ಜನಪ್ರಿಯತೆ ಕುಂದಿಸಿತ್ತು. ಇದಾದ ನಂತರ ಮತ್ತೆ ನಿರ್ಬಂಧ ಹೇರಲು ಅಧಿಕಾರಿಗಳು ಮುಂದಾಗಿಲ್ಲ. ರಷ್ಯಾದ ಕೆಲ ಪ್ರಾಂತ್ಯಗಳಲ್ಲಿ ಮಾತ್ರ ಚಿತ್ರಮಂದಿರ, ರೆಸ್ಟೋರೆಂಟ್ ಮತ್ತಿತರೆ ತಾಣಗಳಲ್ಲಿ ನಿರ್ಬಂಧ ಹೇರಲಾಗಿದೆ.

### ಕಾಣೆಯಾಗಿದ್ದಾರೆ



ಶ್ರೀಮತಿ ನೇತ್ರಾವತಿ ತಂದೆ ನಾರಾಯಣಪ್ಪ 36 ವರ್ಷ ಯರಗುಂಟೆ ವಾಸಿಯಾದ ಇವರು ದಿನಾಂಕ 7.10.2021ರಂದು ಗುರುವಾರ ಬೆಳಗ್ಗೆ 10 ಗಂಟೆ ಸಮಯದಲ್ಲಿ ಶುಭೋದಯ ಸ್ವಾಧಾರ್ ಗೃಹದಲ್ಲಿದ್ದ ಇವರು ಹೊರಗೆ ಹೋದವರು ಪುನಃ ವಾಪಸ್ ಮನೆಗೆ ಬಂದಿರುವುದಿಲ್ಲ ಇವರು ಮಾನಸಿಕವಾಗಿ ಅಸ್ವಸ್ಥರಾಗಿದ್ದು ಇವರನ್ನು ಯಾರಾದರು ನೋಡಿದಲ್ಲಿ ಹತ್ತಿರದ ಬಡಾವಣೆ ಪೋಲಿಸ್ ಠಾಣೆಗಾಗಲೀ ಅಥವಾ ಈ ಕೆಳಗಿನ ಫೋನ್ ನಂಬರ್‌ಗಾಗಲೀ ತಿಳಿಸಬೇಕಾಗಿ ವಿನಂತಿ.

**ಶಾಂತ ಪ್ರಿಯ ಕೆ.ಎನ್: 81051 86048**
**ಬಡಾವಣೆ ಪೊಲೀಸ್ ಠಾಣೆ**
**94808 03249**
**08192 259213**

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

**ಸರ್ವರಿಗೂ ದಸರಾ ಹಬ್ಬದ ಶುಭಾಶಯಗಳು**



ನಮ್ಮೆಲ್ಲಾ ಆತ್ಮೀಯ ಬಂಧು - ಮಿತ್ರರಿಗೂ, ಸರ್ವ ನಾಗರಿಕರಿಗೂ ದಸರಾ ನಾಡಹಬ್ಬದ ಹಾರ್ದಿಕ ಶುಭಾಶಯಗಳು.

**ಡಿ. ಕೆ. ಸಂಗಮೇಶ್ ಎಲಿಗಾರ್**
ಪತ್ರ ಬರಹಗಾರರು, ಸಬ್ ರಿಜಿಸ್ಟ್ರಾರ್ ಕಚೇರಿ ಆವರಣ, ಪಿ. ಬಿ. ರಸ್ತೆ, ದಾವಣಗೆರೆ. ಮೊ. : 98440 65710

**ನಾಡ ಹಬ್ಬ ವಿಜಯದಶಮಿ ಶುಭಾಶಯಗಳು**



ನಮ್ಮೆಲ್ಲಾ ಆತ್ಮೀಯ ಸ್ನೇಹಿತರಿಗೂ, ಬಂಧುಗಳಿಗೂ ಹಾಗೂ ನಗರದ ಸರ್ವ ನಾಗರಿಕರಿಗೂ ದಸರಾ ಹಬ್ಬದ ಹಾರ್ದಿಕ ಶುಭಾಶಯಗಳು.

**ಪವಾಡಪ್ಪ ತಿಪ್ಪೇಸ್ವಾಮಿ** ದಸ್ತಾವೇಜು ಬರಹಗಾರರು,
ಸಬ್ ರಿಜಿಸ್ಟ್ರಾರ್ ಕಛೇರಿ ಆವರಣ, ಪಿ.ಬಿ. ರಸ್ತೆ, ದಾವಣಗೆರೆ. ಮೊ.: 98443 31765

Wewin
wewinbazaar.com
WANTED
GRAPHICAL DESIGNER
TELE EXECUTIVE,
PERSONAL ASSISTANT (LADIES)
Send your Resume to this mail ID
kavyarockzzmsipl@gmail.com
MAHARAJ E-MART Pvt.Ltd.,
No. 768/500, Lokikere Main Road, Near Industrial Area, Davangere-577 005.
9513636530, 9513636532



ಸರ್ವರಿಗೂ ನಾಡಹಬ್ಬ ದಸರಾ ಹಾಗೂ ವಿಜಯದಶಮಿ ಹಬ್ಬದ ಹಾರ್ದಿಕ ಶುಭಾಶಯಗಳು
ವಿಂಬಲ್ಡನ್ ಕಟ್ಟಿಂಗ್ ಎಡ್ಜ್
**ಮೇನ್ಸ್ ಸೆಲ್ಯೂನ್**
ಶಂಕರ್ ಪ್ಲಾಜಾ, ಮಾಮಾಸ್ ಜಾಯಿಂಟ್ ರೋಡ್
3ನೇ ಮುಖ್ಯರಸ್ತೆ, 3ನೇ ಕ್ರಾಸ್, ಎಂ.ಸಿ.ಸಿ. 'ಬಿ' ಬ್ಲಾಕ್,
ದಾವಣಗೆರೆ. ಫೋನ್ : 08192 224539
ಎಸ್. ಮುನಿಯಪ್ಪ

# ಪಾಲಿಕೆ ಗುರುತಿನ ಚೀಟಿ ಇದ್ದರೆ ಮಾತ್ರ ಸಂತೆ ಸುಂಕ ನೀಡಲು ಕರೆ

ದಾವಣಗೆರೆ, ಅ.13- ಸ್ಥಳೀಯ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ವಿವಿಧ ಸ್ಥಳಗಳಲ್ಲಿ ನಿತ್ಯ ಹಾಗೂ ವಾರದ ಸಂತೆಗಳಲ್ಲಿ ಬೀದಿ ಬದಿ ವ್ಯಾಪಾರಸ್ಥರಿಂದ ಸುಂಕ ವಸೂಲಾತಿ ಮಾಡಲು ನೀಡಿದ ಕಾರ್ಯಾದೇಶದ ಅವಧಿ ಮುಕ್ತಾಯವಾಗಿದ್ದು, ಸುಂಕ ವಸೂಲಾತಿ ಹಕ್ಕಿನ ಬಹಿರಂಗ ಹರಾಜು ಪ್ರಕ್ರಿಯೆ ಕೋವಿಡ್-19, ಮತ್ತಿತರೆ ಕಾರಣಗಳಿಂದ ಪ್ರಕ್ರಿಯೆಯಲ್ಲಿರುತ್ತದೆ. ಆದ್ದರಿಂದ ಪಾಲಿಕೆಯ ಗುರುತಿನ ಚೀಟಿ ಇಲ್ಲದ ವ್ಯಕ್ತಿಗಳಿಗೆ ಸುಂಕ ನೀಡಬಾರದು ಹಾಗೂ ಅಂತಹವರ ವಿವರಗಳನ್ನು ಪಾಲಿಕೆಗೆ ನೀಡುವಂತೆ ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

ನಮ್ಮ ಎಲ್ಲಾ ಗ್ರಾಹಕರಿಗೂ ಹಾಗೂ ಗೆಳೆಯರಿಗೂ
ದಸರಾ ಹಾಗೂ ವಿಜಯದಶಮಿಯ ಶುಭಾಶಯಗಳು
LOVATO AUTOGAS
ಎಲ್ಲಾ ವಿಧದ ಪೆಟ್ರೋಲ್ ಕಾರುಗಳಿಗೆ ಅಳವಡಿಸಿ
ಶೇ 65% ರಷ್ಟು ಉಳಿತಾಯ ಮಾಡಿ
Govt Apporved CNG
Retrofitment Center
CNG Conversion Kits
for All Petrol Vechicles
Save Upto 65% Of Fuel Cost




**ಎಸ್.ವಿ. ಆಟೋಟೆಕ್** ವಾಯು ಮಾಲಿನ್ಯ ತಪಾಸಣಾ ಕೇಂದ್ರ
(ಸರ್ಕಾರದಿಂದ ಮಾನ್ಯತೆ ಪಡೆದ ಅಳವಡಿಕೆ ಕೇಂದ್ರ)
ರಿಂಗ್ ರಸ್ತೆ, ನವೋದಯ ಶಾಲೆ ಹತ್ತಿರ,
ಯಲ್ಲಮ್ಮ ನಗರ, ದಾವಣಗೆರೆ.
ಸಂಪರ್ಕಿಸಿ : ವಿಶ್ವನಾಥ ಬಿ.ಜೆ.
99451 25525,
93807 22272

# 3ನೇ ಅಲೆ ಬಂದರೂ ಸುರಕ್ಷಿತವಾಗಿರಲು ಲಸಿಕೆ ಮುಖ್ಯ

## ಕುಂಬಳೂರು: ಜಿಲ್ಲಾ ಮಟ್ಟದ ಕೋವಿಡ್ ಜಾಗೃತಿ ಸಭೆಯಲ್ಲಿ ಟಿಹೆಚ್‌ಓ ಡಾ. ಚಂದ್ರಮೋಹನ್



ಮಲೇಬೆನ್ನೂರು, ಅ.13- ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಕೆಲವರು ಈಗಲೂ ನಿರಾಕರಿಸುತ್ತಿದ್ದು, ಅಂತಹವರ ಮನವೊಲಿಸುವ ಕೆಲಸವನ್ನು ಆರೋಗ್ಯ ಇಲಾಖೆಯವರು, ಆಶಾ ಕಾರ್ಯಕರ್ತೆಯರು ನಿರಂತರವಾಗಿ ಮಾಡುತ್ತಿದ್ದಾರೆ ಎಂದು ಹರಿಹರ ಟಿಹೆಚ್‌ಓ ಡಾ. ಚಂದ್ರಮೋಹನ್ ತಿಳಿಸಿದ್ದಾರೆ.

ಕುಂಬಳೂರು ಗ್ರಾಮದ ಗ್ರಾ.ಪಂ. ಕಚೇರಿ ಆವರಣದಲ್ಲಿ ಭಾರತ ಸರ್ಕಾರದ ನೀತಿ ಆಯೋಗ, ಜಿಲ್ಲಾಡಳಿತ, ಹರಿಹರ ತಾಲ್ಲೂಕು ಆಡಳಿತ ಹಾಗೂ ಕುಂಬಳೂರು ಗ್ರಾ.ಪಂ. ಮತ್ತು ಪ್ರಗತಿ ಟ್ರೇಡರ್ಸ್, ಕರಡೆಪ್ಪರ ಎಂಟರ್‌ಪ್ರೈಸಸ್ ಇವರುಗಳ ಸಂಯುಕ್ತಾಶ್ರಯದಲ್ಲಿ ಇಂದು ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಕೋವಿಡ್ ಜಾಗೃತಿ ಕಾರ್ಯಾಗಾರ ಮತ್ತು ಮನೆ ಮನೆಗೆ ತೆರಳಿ ಉಚಿತವಾಗಿ ಸ್ಯಾನಿಟೈಜೇಶನ್ ಮಾಡುವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಲಸಿಕೆ ಹಾಕಿಸಿಕೊಳ್ಳದವರು ಕೋವಿಡ್ 2ನೇ ಅಲೆಯಲ್ಲಿ ಪಾಸಿಟಿವ್ ಬಂದಾಗ ಬಹಳ ತೊಂದರೆ ಅನುಭವಿಸಿದರೆ, ಕೆಲವರು ಸಾವನ್ನಪ್ಪಿದರು. ಲಸಿಕೆ ಹಾಕಿಸಿಕೊಂಡವರಿಗೆ ಕೊರೊನಾ ಪಾಸಿಟಿವ್ ಬಂದರೂ ಅದರ ತೀವ್ರತೆ ಕಡಿಮೆ ಇತ್ತು. ಲಸಿಕೆಯ ಮಹತ್ವದ ಬಗ್ಗೆ ಜನರಿಗೆ ಸಾಕಷ್ಟು ಅರಿವು ಮೂಡಿಸಿದ್ದರೂ ಇನ್ನೂ ಕೆಲವರು ಲಸಿಕೆ ಹಾಕಿಸಿಕೊಳ್ಳಲು ಹಿಂದೇಟು ಹಾಕುತ್ತಿರುವ ಬಗ್ಗೆ ಅವರು ಬೇಸರ ವ್ಯಕ್ತಪಡಿಸಿದರು.

ಕೊರೊನಾ 3ನೇ ಅಲೆಯಿಂದ ಸುರಕ್ಷಿತವಾಗಿರಲು ಪ್ರತಿಯೊಬ್ಬರೂ ಕಡ್ಡಾಯವಾಗಿ ಲಸಿಕೆ ಹಾಕಿಸಿಕೊಳ್ಳಬೇಕೆಂದು ಮನವಿ ಮಾಡಿದ ಚಂದ್ರಮೋಹನ್, ಹರಿಹರ ತಾಲ್ಲೂಕಿನ ಹಳೇಪಾಳ್ಯ ಮತ್ತು ಕಂಬತ್ತನಹಳ್ಳಿ ಗ್ರಾಮಗಳಲ್ಲಿ ಮಾತ್ರ ಶೇ. 100 ರಷ್ಟು ಲಸಿಕೆ ಹಾಕಿಸಿಕೊಂಡಿದ್ದಾರೆ. ಹರಿಹರ, ಮಲೇಬೆನ್ನೂರು ಸೇರಿದಂತೆ ಎಲ್ಲಾ ಹಳ್ಳಿಗಳಲ್ಲಿ ಶೇ. 60 ಕ್ಕಿಂತ ಹೆಚ್ಚು ಜನ ಮೊದಲ ಡೋಸ್ ಪಡೆದಿದ್ದಾರೆ.

18 ವರ್ಷ ಮೇಲ್ಪಟ್ಟವರಿಗೆ ಲಸಿಕೆ ಮುಕ್ತವಾಗಿದ್ದು, ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿದೆ. ವಾರಕ್ಕೊಮ್ಮೆ ಲಸಿಕಾ ಮೇಳಗಳನ್ನು ಮಾಡುತ್ತಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಮನವಿ ಮಾಡಿದ ಅವರು, ಹರಿಹರ ತಾಲ್ಲೂಕಿನಲ್ಲಿ ಸದ್ಯ ಒಂದು ಕೊರೊನಾ ಪ್ರಕರಣ ಮಾತ್ರ ಇದೆ ಎಂದು ಮಾಹಿತಿ ನೀಡಿದರು.

ಜಿ.ಪಂ. ಮಾಜಿ ಸದಸ್ಯ ಬಿ.ಎಂ. ವಾಗೀಶ್ ಸ್ವಾಮಿ, ತಾ.ಪಂ. ಮಾಜಿ ಅಧ್ಯಕ್ಷ ಮಾಗಾನಹಳ್ಳಿ ಹಾಲಪ್ಪ, ನಿವೃತ್ತ ಡಿವೈಎಸ್ಪಿ ಕೆ. ನಾಗರಾಜಪ್ಪ, ಉಪ ತಹಶೀಲ್ದಾರ್ ಆರ್. ರವಿ, ಹಿರಿಯ ಆರೋಗ್ಯ ಸಹಾಯಕ ಎಂ. ಉಮ್ಮಣ್ಣ, ಗ್ರಾ.ಪಂ. ಉಪಾಧ್ಯಕ್ಷ ಹನುಮಂತಪ್ಪ, ಗ್ರಾ.ಪಂ. ಸದಸ್ಯ ಕಲ್ಲೇಶ್, ಹುಲ್ಲು ಮನಿ ನಿಂಗಪ್ಪ ಮತ್ತು ಇತರರು ಭಾಗವಹಿಸಿದ್ದರು.

ಗ್ರಾ.ಪಂ. ಅಧ್ಯಕ್ಷೆ ಲೀಲಾ ಶಿವಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಗೌತಮ್ ರಾಜ್ ಕರಡೆಪ್ಪರ್ ಸ್ವಾಗತಿಸಿದರು. ಹೆಚ್.ಎಂ. ಸದಾನಂದ ನಿರೂಪಿಸಿದರು. ಪಿಡಿಓ ಮೂರ್ತಿ ವಂದಿಸಿದರು.

## ಕೊಡಗು ಸೈನಿಕ ಶಾಲೆ ಪ್ರವೇಶ ಪರೀಕ್ಷೆಗೆ ಅರ್ಜಿ

ದಾವಣಗೆರೆ, ಅ. 13- ಕೊಡಗು ಸೈನಿಕ ಶಾಲೆಯಲ್ಲಿ 6 ಮತ್ತು 9ನೇ ತರಗತಿಯ ಪ್ರವೇಶಕ್ಕಾಗಿ, ಪ್ರವೇಶ ಪರೀಕ್ಷೆಯನ್ನು ನಡೆಸಲಾಗುತ್ತಿದ್ದು, ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಇದೇ ದಿನಾಂಕ 26 ಕೊನೆಯ ದಿನವಾಗಿದ್ದು, ಆಸಕ್ತರು ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08276-278963, ಜಾಲತಾಣ - www.sainikschoolkodagu.edu.in ಗೆ ಸಂಪರ್ಕಿಸಬಹುದು ಎಂದು ಶಿವಮೊಗ್ಗದ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

### ನವದುರ್ಗೆಯರ ಎಂಟನೇ ರೂಪ ಮಹಾಗೌರಿ ದೇವಿಗೆ ನಮನ

ಗಿರಿರಾಜ ಕುವರಿ ದೇವಿ ಮಹಾಗೌರಿಯೇ
ಗೌರವರ್ಣದಿ ಹೊಳೆವ ತ್ರಿಪುರ ಸುಂದರಿಯೇ
ಹರನರ್ಧಾಂಗಿ ತಾಯೆ ವೃಷಭವಾಹಿನಿಯೆ
ಪರಮೇಶ್ವರಿಯೆ ಶ್ವೇತಾಂಬರಧಾರಿಣಿಯೆ

ನಾಲ್ಕು ಕರಗಳಿಂದ ಶೋಭಿಸುವವಳೆ ತ್ರಿ
ಶೂಲ ಡಮರುಧಾರಿ ಅಭಯ ವರದ ಹಸ್ತಳೆ
ಅಲೌಕಿಕ ಚಂದ್ರಕಾಂತಿಯುತ ತೇಜಳೆ
ನಿಲ್ಲಮ್ಮ ಮನದಿ ಸದಾ ಶಾಂತಚಿತ್ತಳೆ

ಕೈಲಾಸೇಶ್ವರನಿಗಾಗಿ ತಪವ ಮಾಡಿದೆ
ನೀಲಕಂಠನರ್ಧಾಂಗಿ ಕಾಮೇಶ್ವರಿಯೆ
ಕಲಾನಿಪುಣಳೆ ಗಾನನರ್ತನ ಪ್ರಿಯಳೆ
ಸುಲಲಿತ ಲಾಸ್ಯವ ಮಾಡುವ ನಟೇಶ್ವರಿಯೆ

ನವರಾತ್ರಿಯ ಎಂಟನೆ ದಿನ ಪೂಜೆಗೊಳುವಳೆ
ನವನವೀನ ಉಲ್ಲಾಸ ತುಂಬುವವಳೆ
ನವವಿಧ ಭಕ್ತಿಲಿ ಸೇವೆ ಸ್ವೀಕರಿಸಮ್ಮ
ಭವವ ಬಿಡಿಸಮ್ಮ ಸಿರಿಹರಿ ಸೋದರಿಯೆ

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್

# ಸರ್ಕಾರದ ನಿಯಮದಡಿ ನವರಾತ್ರಿ ಆಚರಣೆ



### ಹರಿಹರ : ಅಕ್ಷರಭ್ಯಾಸ ಕಾರ್ಯಕ್ರಮದಲ್ಲಿ ಶಂಕರ್ ಖಟಾವ್ಕರ್

ಹರಿಹರ, ಅ.13- ನಗರದ ದಸರಾ ಉತ್ಸವ ಸಮಿತಿ ವತಿಯಿಂದ ಈ ಬಾರಿಯ ದಸರಾ ಮಹೋತ್ಸವವನ್ನು ಶ್ರದ್ಧಾ ಭಕ್ತಿಗೆ ಕೊರತೆ ಬರದಂತೆ ಹಾಗೂ ಕೋವಿಡ್ ನಿಯಮಗಳನ್ನು ಪಾಲಿಸುವ ಮೂಲಕ ಆಚರಿಸಲಾಗುತ್ತಿದೆ ಎಂದು ಸಮಿತಿ ಅಧ್ಯಕ್ಷ ಶಂಕರ್ ಖಟಾವ್ಕರ್ ತಿಳಿಸಿದರು.

ನಗರದ ನಾಮದೇವ ಕಲ್ಯಾಣ ಮಂಟಪದ ಆವರಣದಲ್ಲಿ ದಸರಾ ಉತ್ಸವ ಸಮಿತಿ ವತಿಯಿಂದ ಕೋಟಿ ಬಡಾವಣೆಯ ಶ್ರೀ ದತ್ತಂ ಭಟ್ಟರು ನೇತೃತ್ವದಲ್ಲಿ ಮಕ್ಕಳಿಗೆ ಅಕ್ಷರಭ್ಯಾಸ ಪೂಜೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಎಲ್ಲಾ ಸಮಾಜಗಳ ದೇವರನ್ನು ಒಂದೆಡೆ ಸೇರಿಸಿ ನಂತರದಲ್ಲಿ ಮೆರವಣಿಗೆ ಮೂಲಕ ಅದ್ದೂರಿಯಾಗಿ ಜೋಡು ಬಸವೇಶ್ವರ ದೇವ ಸ್ಥಾನದ ಆವರಣಕ್ಕೆ ತೆಗೆದುಕೊಂಡು ಹೋಗಲಾಗುತ್ತಿತ್ತು. ಆದರೆ ಈ ಬಾರಿ ಅವರ ದೇವಸ್ಥಾನಗಳಿಂದ ನೇರವಾಗಿ ಜೋಡು ಬಸವೇಶ್ವರ ದೇವಸ್ಥಾನಕ್ಕೆ ಬರಲಿದೆ ಎಂದು ತಿಳಿಸಿದರು

ದಸರಾ ಉತ್ಸವ ಸಮಿತಿಯ ವತಿಯಿಂದ ದುರ್ಗಾ ದೇವಿ ಮೂರ್ತಿ, ಶ್ರೀ ಹರಿಹರೇಶ್ವರ ಸ್ವಾಮಿ ಮತ್ತು ಗ್ರಾಮದೇವತೆ ಮೂರ್ತಿಯನ್ನು ಶ್ರೀ ಹರಿಹರೇಶ್ವರ ದೇವಾಲಯದ ಮುಂಭಾಗದಿಂದ ಆನೆ ಅಂಬಾರಿ, ವಿವಿಧ ಕಲಾ ತಂಡಗಳೊಂದಿಗೆ ಸರ್ಕಾರದ ಮಾರ್ಗ ಸೂಚಿ ಅನ್ವಯ ಮೆರವಣಿಗೆ ಹೊರಟು, ಜೋಡು ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಇರುವ ಬನ್ನಿಮುಡಿ ದೇವಸ್ಥಾನದ ಆವರಣಕ್ಕೆ ತಲುಪಿ, ಬನ್ನಿ ಮುಡಿಯುವ ಕಾರ್ಯಕ್ರಮ ನಡೆಸಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಮಿತಿಯ ಮುಖಂಡ ರಾದ ಟಿ.ಜೆ. ಮುರುಗೇಶಪ್ಪ,, ಶಿವಪ್ರಕಾಶ್ ಶಾಸ್ತ್ರಿ, ಕಂಚಿಕೇರಿ ಕರಿಬಸಪ್ಪ, ಅಜಿತ್ ಸಾವಂತ್, ಮಾಲತೇಶ್ ಭಂಡಾರಿ, ರಾಜು ಕಿರೋಜಿ, ಪ್ರಕಾಶ್ ಶೆಟ್ಟಿ, ನಾಗಮಣಿ ಶಾಸ್ತ್ರಿ, ಸಿ.ಕೆ. ಗುರುಪ್ರಸಾದ್ ಕಂಚಿಕೇರಿ, ಮಂಜುಳಾ , ಶಿಲ್ಪಾ, ಅಮೃತ, ಕೀರ್ತಿ ಇನ್ನಿತರರಿದ್ದರು.

## ವೀರೇಶ್ವರ ಪುಣ್ಯಾಶ್ರಮದಲ್ಲಿ ಜಾನಪದ ಸಂಭ್ರಮ-ಗಾಯನ ಸ್ಪರ್ಧೆ

ದಾವಣಗೆರೆ, ಅ.13- ಬಾಡಾ ಕ್ರಾಸ್ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಅಂಧ ಮಕ್ಕಳಿಗೆ ವಚನ ಗಾಯನ ಹಾಗೂ ಜಾನಪದ ಗಾಯನ ಸ್ಪರ್ಧೆ ನಡೆಸಲಾಯಿತು.

ಜಾನಪದ ಅಕಾಡೆಮಿಯ ಸದಸ್ಯೆ ಹಾಗೂ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ಸಂಗೀತ ಗುರುಗಳಾದ ಸಿ.ಕೆ. ರುದ್ರಾಕ್ಷಿಬಾಯಿ ಕಾರ್ಯಕ್ರಮ ಸಂಯೋಜಿಸಿದ್ದರು. ಮಕ್ಕಳ ಲೋಕದ ಅಧ್ಯಕ್ಷ, ಹಿರಿಯ ಕವಿ ಚಿನ್ನ ಸಮುದ್ರದ ಎನ್. ಪುಟ್ಟಾನಾಯ್ಕ ಅಧ್ಯಕ್ಷತೆ ವಹಿಸಿದ್ದರು.

ಆಶ್ರಮದ ವಿದ್ಯಾರ್ಥಿಗಳಾದ ಭಗವಂತ, ಶೇಖರ್, ಮಹಾಂತೇಶ್, ಗಿರೀಶ್, ಮೈಲಾರಿ, ಅಣ್ಣಪ್ಪ ಅಜ್ಜೇರ ಭಾಗವಹಿಸಿದ್ದು, ಮಕ್ಕಳಲೋಕದ ಸಂಸ್ಥಾಪಕ ಹಿರಿಯ ಕವಿ ಕೆ.ಎನ್. ಸ್ವಾಮಿ ಬಹುಮಾನ ವಿತರಿಸಿದರು.

ಸರ್ಕಾರಿ ಅಂಧ ಹೆಣ್ಣು ಮಕ್ಕಳ ಶಾಲೆಯ ಸಂಗೀತ ಗುರುಗಳಾದ ಪಾಂಡುನಾಯ್ಕ ಹಾರ್ಮೋನಿಯಂ, ತಬಲಾ ನುಡಿಸಿದರು. ರುದ್ರಾಕ್ಷಿ ಬಾಯಿ ಜಾನಪದ ಗೀತೆಗಳನ್ನು ಹಾಡಿದರು. ಪಿ.ಆರ್. ಐಸಿರಿ ಜನಪದ ಗೀತೆ, ವಚನಗಳನ್ನು ಹಾಡಿದರು. ದೈಹಿಕ ಶಿಕ್ಷಕ ಶಿವಾನಂದ್ ಕಾರ್ಯಕ್ರಮವನ್ನು ಸಂಯೋಜಿಸಿದ್ದರು.

## ಖಾಲಿ ಹುದ್ದೆಗಳ ಭರ್ತಿಗೆ ಮಾಜಿ ಸೈನಿಕರಿಂದ ಅರ್ಜಿ ಆಹ್ವಾನ

ದಾವಣಗೆರೆ, ಅ. 13- ಕೊಡಗು ಸೈನಿಕ ಶಾಲೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಮಾಜಿ ಸೈನಿಕರಿಂದ ಅರ್ಜಿ ಆಹ್ವಾನಿಸ ಲಾಗಿದೆ. ಅರ್ಜಿ ಸಲ್ಲಿಸಲು ಇದೇ ದಿನಾಂಕ 16 ಕೊನೆಯ ದಿನವಾಗಿದ್ದು, ಆಸಕ್ತರು ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08276-278963, ಜಾಲತಾಣ www.sainikschoolkodagu.edu.in ಗೆ ಸಂಪರ್ಕಿಸಬಹುದು ಎಂದು ಶಿವಮೊಗ್ಗ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

# ದಲಿತ ಮಹಿಳೆ ಮೇಲೆ ಅತ್ಯಾಚಾರ, ಕೊಲೆ ಖಂಡಿಸಿ ಡಿಎಸ್‌ಎಸ್ ಪ್ರತಿಭಟನೆ



ದಾವಣಗೆರೆ, ಅ.13- ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕಿನ ಚೌಡೇಶ್ವರಿಹಾಳ ಗ್ರಾಮದಲ್ಲಿ ದಲಿತ ಮಹಿಳೆ ಅತ್ಯಾಚಾರಕ್ಕೆ ಪ್ರತಿರೋಧಿಸಿದಾಗ ಪೆಟ್ರೋಲ್ ಸುರಿದು ಸುಟ್ಟು ಹಾಕಿದ್ದನ್ನು ಖಂಡಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಘಟಕ ನಗರದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿತು.

ನಗರದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದ ಡಿಎಸ್‌ಎಸ್ ಕಾರ್ಯಕರ್ತರು, ದುಷ್ಕರ್ಮಿಗಳಿಗೆ ಗಲ್ಲು ಶಿಕ್ಷೆ ವಿಧಿಸುವಂತೆ ಒತ್ತಾಯಿಸಿದರು. ನಂತರ ಅಪರ ಜಿಲ್ಲಾಧಿಕಾರಿ ಮುಖಾಂತರ ರಾಜ್ಯದ ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ರಾಜ್ಯದಲ್ಲಿ ಈ ರೀತಿ ದೌರ್ಜನ್ಯಕ್ಕೆ ಒಳಗಾದ ಕುಟುಂಬಗಳಿಗೆ ಸರ್ಕಾರ ರಕ್ಷಣೆ ನೀಡಬೇಕು. 50 ಲಕ್ಷ ಪರಿಹಾರ ನೀಡಬೇಕು. ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥ ಆಗುವವರೆಗೂ ಆರೋಪಿತರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು, ಅವರ ಬೆಂಬಲಿತರನ್ನು ಬಂಧಿಸಬೇಕು. ಆರೋಪಿಯನ್ನು ಗಲ್ಲು ಶಿಕ್ಷೆಗೆ ಒಳಪಡಿಸಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಕುಂದುವಾಡ ಮಂಜುನಾಥ್, ಜಿಗಳಿ ಹಾಲೇಶ್, ಮಂಜು ಕುಂದುವಾಡ, ಪರಮೇಶ್ ಪುರದಾಳ್, ಪ್ರದೀಪ್, ಬಾತಿ ಹೆಚ್.ಸಿ.ಸಿದ್ದೇಶ್, ವಿಜಯಮ್ಮ ಹಾಲವರ್ತಿ ಮಹಾಂತೇಶ್, ನೀರ್ಥಡಿ ಮಂಜು, ಬೇತೂರು ಹನುಮಂತಪ್ಪ, ದುರ್ಗಪ್ರಸಾದ್, ಅಣಜಿ ಹನುಮಂತಪ್ಪ ಮತ್ತು ಇತರರು ಭಾಗವಹಿಸಿದ್ದರು.

## ಕೊಮಾರನಹಳ್ಳಿ : ಸ್ವಚ್ಛಗೊಂಡ ಪ್ರಸಿದ್ಧ ಕಲ್ಯಾಣಿ



ಮಲೇಬೆನ್ನೂರು, ಅ.13- ಕೊಮಾರನಹಳ್ಳಿ ಗ್ರಾಮದಲ್ಲಿ ಅಭಿವೃದ್ಧಿ ಕಾಣದೇ ಗಿಡಗಂಟೆಗಳಿಂದ ಆವೃತವಾಗಿದ್ದ ಹೆಳವನಕಟ್ಟೆ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಯ ಪ್ರಸಿದ್ಧ ಕಲ್ಯಾಣಿಯನ್ನು ಗ್ರಾ.ಪಂ. ಸದಸ್ಯ ಮಡಿವಾಳರ ಬಸವರಾಜ್ ಅವರು ಆಸಕ್ತಿ ವಹಿಸಿ, ಉದ್ಯೋಗ ಖಾತ್ರಿ ಯೋಜನೆಯಡಿ ಸುಮಾರು 3 ಲಕ್ಷ ರೂ. ಅನುದಾನದಲ್ಲಿ ಕೂಲಿ ಕಾರ್ಮಿಕರಿಂದ ಹೂಳು ತೆಗೆಸಿ ಸ್ವಚ್ಛ ಮಾಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಈ ಕಾಮಗಾರಿಯನ್ನು ಸೋಮವಾರ ವೀಕ್ಷಣೆ ಮಾಡಿದ ಗ್ರಾ.ಪಂ. ಅಧ್ಯಕ್ಷ ಐ.ಪಿ. ರಂಗನಾಥ್ ಅವರು, ಗ್ರಾ.ಪಂ. ಸದಸ್ಯ ಬಸವರಾಜ್ ಅವರ ಶ್ರಮದಿಂದಾಗಿ ಈ ಐತಿಹಾಸಿಕ ಕಲ್ಯಾಣಿ ಅಭಿವೃದ್ಧಿಗೊಳ್ಳುತ್ತಿದ್ದು, ಇನ್ನಷ್ಟು ಅನುದಾನ ಹಾಕಿ ಸುಂದರಗೊಳಿಸುವುದಾಗಿ ಭರವಸೆ ನೀಡಿದರು. ಗ್ರಾಮದ ಪರಮೇಶ್ ನಾಯ್ಕ, ಹನುಮಂತ, ಪಿಡಿಓ ಕೆ.ಎಸ್. ರಮೇಶ್ ಮತ್ತಿತರರು ಈ ವೇಳೆ ಹಾಜರಿದ್ದರು.

# ಗ್ರಾ.ಪಂ. ಸದಸ್ಯರ ಒಕ್ಕೂಟದ ಅಧ್ಯಕ್ಷರಾಗಿ ರೇಖಾ ಲೋಕೇಶ್




ಹೊನ್ನಾಳಿ, ಅ.13- ಸದಸ್ಯರುಗಳು ಅಧಿಕಾರಿ ಗಳಿಂದ ತೊಂದರೆ ಅನುಭವಿಸದಂತೆ, ಮುಕ್ತವಾಗಿ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ ಹೊನ್ನಾಳಿ ತಾಲ್ಲೂಕಿನ ಎಲ್ಲ ಗ್ರಾಮ ಪಂಚಾಯ್ತಿ ಸದಸ್ಯರು ಒಕ್ಕೊರಲಿನಿಂದ ಒಕ್ಕೂಟ ರಚಿಸಿದ್ದಾರೆ.

ಹೊನ್ನಾಳಿ ತಾಲ್ಲೂಕು ಗ್ರಾಮ ಪಂಚಾಯ್ತಿ ಸದಸ್ಯರ ಒಕ್ಕೂಟದ ಅಧ್ಯಕ್ಷರಾಗಿ ಲಿಂಗಾಪುರ ಪಂಚಾಯ್ತಿಯ ರೇಖಾ ಲೋಕೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹೊನ್ನಾಳಿ ಸಾಮರ್ಥ್ಯ ಸೌಧದಲ್ಲಿ ತಾಲ್ಲೂಕಿನ 29 ಗ್ರಾಮ ಪಂಚಾಯ್ತಿಗಳ ಸದಸ್ಯರನ್ನು ಒಳಗೊಂಡಂತೆ ಈ ಆಯ್ಕೆ ಪ್ರಕ್ರಿಯೆ ನಡೆಸಲಾಯಿತು.

ಗೌರವಾಧ್ಯಕ್ಷರಾಗಿ ಅರಬಗಟ್ಟೆ ಸುರೇಶ್, ಉಪಾಧ್ಯಕ್ಷರಾಗಿ ಕೂಲಂಬಿ ಸಿದ್ದನಗೌಡ, ಸೊರಟೂರು ಸುಮಾ ಕುಮಾರ್, ಪ್ರಧಾನ ಕಾರ್ಯದರ್ಶಿ ರಾಮಪುರ ಶ್ರೀನಿವಾಸ, ಕಾರ್ಯದರ್ಶಿ ಸಾಸ್ವೆಹಳ್ಳಿ ರೇಣುಕಪ್ಪ ನೇಮಕಗೊಂಡರು.

ಸಹ ಕಾರ್ಯದರ್ಶಿಗಳಾಗಿ ಹುಣಸಘಟ್ಟದ ರೋಶನ್, ಬೀರಗೊಂಡನಹಳ್ಳಿ ಕವಿತ ರಮೇಶಪ್ಪ, ಕೋಟೆಮಲ್ಲೂರು ಎ.ಕೆ. ಅಣ್ಣಪ್ಪ, ಖಜಾಂಚಿಯಾಗಿ ತಿಮ್ಲಾಪುರ ಬಿ.ಹೆಚ್. ಜಯಪ್ಪ ಆಯ್ಕೆಗೊಂಡರು.

ಸಂಘಟನಾ ಕಾರ್ಯದರ್ಶಿಗಳಾಗಿ ಗೊಲ್ಲರಹಳ್ಳಿ ಹಳದಪ್ಪ, ಮಕ್ಕೇನಹಳ್ಳಿ ಹನುಮಂತಪ್ಪ, ಹತ್ತೂರು ಸುಮಿತ್ರ ಮಹೇಶ್ವರಪ್ಪ, ಕತ್ತಿಗೆ ಕುಬೇರಪ್ಪ, ಹನುಮಸಾಗರ ಶೃತಿ ಮಂಜುನಾಥ ಅವರನ್ನು ನೇಮಕ ಮಾಡಲಾಯಿತು.

ಹೊನ್ನಾಳಿ

ಈ ಸಂದರ್ಭದಲ್ಲಿ ಆಯ್ಕೆ ಪ್ರಕ್ರಿಯೆ ನಿರ್ವಹಣೆ ಯನ್ನು ಯಕ್ಕನಹಳ್ಳಿ ಪಂಚಾಯ್ತಿ ಅಧ್ಯಕ್ಷ ದಯಾನಂದ್, ತಿಮ್ಮಲಾಪುರ ಪಂಚಾಯ್ತಿಯ ತರಗನ ಹಳ್ಳಿ ರಮೇಶ್, ಸೊರಟೂರು ಸದಸ್ಯ ಪರಶುರಾಮಪ್ಪ, ವಿಕೇಂದ್ರೀಕೃತ ತರಬೇತಿ ಸಂಯೋಜಕಿ ಹೇಮಲತಾ, ಸಮಿತಿ ರಚನೆಯ ಸಲಹೆಗಾರ ಯುವರಾಜ್ ಸೇರಿದಂತೆ ಪಂಚಾಯಿತಿ ಸದಸ್ಯರುಗಳು ಉಪಸ್ಥಿತರಿದ್ದರು.

## ರಾಣೇಬೆನ್ನೂರು : ವೆಂಕಟೇಶ್ವರ ದೇವಸ್ಥಾನದಲ್ಲಿ ನವರಾತ್ರಿ



ರಾಣೇಬೆನ್ನೂರು, ಅ.13 - ನಗರದ ಕೋಟೆಯಲ್ಲಿರುವ ವೆಂಕೋಬ ಧಾಮದಲ್ಲಿ ಹಮ್ಮಿಕೊಳ್ಳಲಾದ ವೆಂಕಟೇಶ್ವರ ದೇವಸ್ಥಾನದ ನವರಾತ್ರಿ ಉತ್ಸವದಲ್ಲಿ ಸ್ಥಳೀಯ ತುಳಸಿ ಭಜನಾ ಮಂಡಳಿಯಿಂದ ಮೊನ್ನೆ ವೆಂಕಟೇಶ ಸ್ತವರಾಜ ಮತ್ತು ಸ್ತುತಿರತ್ನಮಾಲಾ ಪಾರಾಯಣ ನಡೆಯಿತು.

ತುಳಸಿ ಭಜನಾ ಮಂಡಳಿಯ ನಿರ್ಮಲಾ ಮಠದ, ಅರ್ಚನಾ ಮಠದ, ಮಂಜುಳಾ ಮಠದ, ವಿಜಯಾಬಾಯಿ ಚಿಮ್ಮಲಗಿ, ಸುನಿತಾ ನಾಯ್ಕ, ಲೀಲಾ ಚಂದಿ, ವಸುಧಾ ಗುಡಿ, ವಿಜಕ್ಕ ಪಾಂಡುರಂಗಿ, ಲಕ್ಷ್ಮೀ ಸಾತೇನಹಳ್ಳಿ, ಸುವರ್ಣ ಪಾವಡಿ, ಸುಧಾ ಪಾಂಡುರಂಗಿ, ಶ್ರೀಲಕ್ಷ್ಮೀ ವರಾಹಮೂರ್ತಿ, ಹೇಮಾ ಶಿಗ್ಗಾವಿ, ವೈಷ್ಣವಿ ಚಿಮ್ಮಲಗಿ, ವೀಣಾ ಶಿರಹಟ್ಟಿ ಮೊದಲಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ.: 98453 17181

**ಮಾರಾಟಕ್ಕೆ**
ಚಿಕ್ಕಮ್ಮಣ್ಣಿ ಲೇ ಔಟ್ 20×30 3 Floor ಮನೆ, ಜಯನಗರ 30×50, 3 BHK ಮನೆ, ಗಣೇಶ ಮಿಲ್ ಹತ್ತಿರ, 30×50 (ಪೂರ್ವ) ಸೈಟು, ಎಸ್.ಎಸ್. ಲೇ ಔಟ್, 30×45 (ಉತ್ತರ) ಡೂಪ್ಲೆಕ್ಸ್ ಮನೆ, ಎಸ್.ಎಸ್. ಆಸ್ಪತ್ರೆ ರಸ್ತೆ, 30×80 (ಪಶ್ಚಿಮ) ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ
98804 40602

**ಸೈಟ್ ಮಾರಾಟಕ್ಕೆ (15 ಲಕ್ಷಕ್ಕೆ)**
ಕರ್ನಾಟಕ ಗೃಹ ಮಂಡಳಿ(KHB) 9X12 (30x40) ವೆಸ್ಟ್ ಪಾರ್ಕ್ ಎದುರು
ಕಿರಣ್ ಬೂಸ್ನೂರ್ (ಏಜೆಂಟ್)
98440 63409
(ಅರ್ಜೆಂಟ್ ಮಾಡುವವರಿಗೆ ನಾವು ಸೈಟ್ ಗಳನ್ನು ತೋರಿಸುವುದಿಲ್ಲ)

**ಸೈಟ್ ಮಾರಾಟಕ್ಕಿದೆ**
ಬನಶಂಕರಿ ಬಡಾವಣೆಯಲ್ಲಿ 40x70 ಅಳತೆ ಸೈಟ್ ಮಾರಾಟಕ್ಕಿದೆ ಮತ್ತು 8500sqft ಅಳತೆಯ ಬ್ಯಾಂಕ್, ಸೂಪರ್ ಮಾರ್ಕೆಟ್, ಗೋಡೌನ್ ಮತ್ತಿತರೆ ಉಪಯೋಗಕ್ಕೆ ಅನುಕೂಲವಾದ ಜಾಗ ನೆಲ ಬಾಡಿಗೆಗೆ ದೊರೆಯುತ್ತದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
91081 81864

**ಲೀಸ್‌ಗೆ ಮನೆ ಬೇಕಾಗಿದೆ**
ನೃತ್ಯ ಸಂಗೀತ ಹಾಗು ಇನ್ನಿತರೆ ತರಗತಿಗಳನ್ನು ನಡೆಸಲು 3 ಕೊಠಡಿಯ ಮನೆ ಲೀಸ್‌ಗೆ ಬೇಕಾಗಿದೆ. ಆಂಜನೇಯ ಬಡಾವಣೆ, ಎಂ.ಸಿ.ಸಿ. 'ಎ' ಹಾಗೂ 'ಬಿ' ಬ್ಲಾಕ್, ವಿದ್ಯಾನಗರ, ಪಿ.ಜೆ. ಬಡಾವಣೆ
ಸಂಪರ್ಕಿಸಿ:
63609 93735

**ಸೈಟ್‌ಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ ಶಿವ ಪಾರ್ವತಿ ಬಡಾವಣೆ ಪಕ್ಕದ ಹೊಸ ಬನಶಂಕರಿ ಬಡಾವಣೆಯಲ್ಲಿ 30x50 ಪಶ್ಚಿಮ, 30x50 ಉತ್ತರ, 40x60 ಪೂರ್ವ, 30x40 ಪೂರ್ವ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟ್ ಮಾರಾಟಕ್ಕಿದೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ DUDAದ 40×60 ಅಳತೆಯ ಪೂರ್ವ ಮುಖದ (East Facing) ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ
(ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ)
96208 81115

**ಲೀಸ್ 12 ಲಕ್ಷ/ಬಾಡಿಗೆ 10,500**
ZP, TV ಸ್ಟೇಷನ್, ನ್ಯಾಯಾಲಯ, ಹೈಟೆಕ್ ಆಸ್ಪತ್ರೆ, ಸರ್.ಎಂ.ವಿ, ಲಲಿತ ಕಾಲೇಜ್, ಶಿಶಿ ಸೋಪ್, ಸುಬ್ರಮಣ್ಯ ದೇವಸ್ಥಾನದ ಹತ್ತಿರ ಸುಸಜ್ಜಿತ ನೀರು ಲಿಫ್ಟ್, ಕಾರ್ ಪಾರ್ಕಿಂಗ್‌ವುಳ್ಳ ಉತ್ತರ ದಿಕ್ಕಿನ 2 ಬೆಡ್ ರೂಂ ವಾಸ್ತು ಪ್ರಕಾರವಿದೆ.
99865 38099, 99004 11110

**ಸೈಟ್, ಮನೆ ಮಾರಾಟಕ್ಕಿವೆ**
ವಿದ್ಯಾನಗರ 40x60 1ನೇ ಬಸ್ ಸ್ಟಾಪ್ ಉತ್ತರ, 22x60 ಪಶ್ಚಿಮ, ಸಿದ್ದವೀರಪ್ಪ 30x40 ಹಳೇ ಮನೆ ಪೂರ್ವ 30x40 ಸೈಟ್, 60x40 ಸೈಟ್, ಬಾಪೂಜಿ ಸ್ಕೂಲ್ ಹಿಂಭಾಗ 40x50 ಕಾರ್ನರ್ ಸೈಟ್, 30x50 (ಬಾಡಿಗೆ ಬರುವಂತಹ ಮನೆ), 30x40 ಬಂಟ್ಸ್ ಫ್ಯಾಕ್ಟ್ರಿ ಹತ್ತಿರ, 30x40 ಹೊಸ ಮನೆ, ಡೂಪ್ಲೆಕ್ಸ್, ಸಪ್ತಗಿರಿ ಸ್ಕೂಲ್ ಹತ್ತಿರ, ಜೆ.ಹೆಚ್. ಪಟೇಲ್, 40x60 ರೋಡ್, KHB 40x60 ಪೂರ್ವ, 30x40 ಪಶ್ಚಿಮ
ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409

**ಸೈಟ್ ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 ಪೂರ್ವ, 50x70 ಪೂರ್ವ, 55x84 ದಕ್ಷಿಣ, ಪಶ್ಚಿಮ ಕಾರ್ನರ್, 30x40 ಪಶ್ಚಿಮ, 30x50 ಪೂರ್ವ, 40x60 ಪೂರ್ವ, 40x60 ದಕ್ಷಿಣ, 50x80 ದಕ್ಷಿಣ ಇನ್ನೂ ಅನೇಕ
ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409

**ಬೇಕಾಗಿದ್ದಾರೆ**
ಅಕೌಂಟ್ಸ್ ಬರೆಯಲು Tally ತಿಳಿದಿರುವ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ.
ಆನಂದ ಹಾರ್ಡ್‌ವೇರ್ ಅಂಡ್ ಪೇಂಟ್ಸ್
ಮಂಡಿಪೇಟೆ, ದಾವಣಗೆರೆ.

**ಮನೆ ಬಾಡಿಗೆಗೆ/ಲೀಸ್‌ಗೆ ಇವೆ**
ಮೂರು ಬೆಡ್ ರೂಂ ವಿದ್ಯಾನಗರ ಡ್ಯೂಪ್ಲೆಕ್ಸ್ ಹೌಸ್, ಮನೆ ಲೀಸ್‌ಗೆ ಇದೆ. ವಿನಾಯಕ ಬಡಾವಣೆಯಲ್ಲಿ 3 ಬೆಡ್ ರೂಂ ಬಾಡಿಗೆಗೆ ಇವೆ. ಅರ್ಧ ಪರ್ಸೆಂಟ್ ಕಮೀಷನ್ ಆಧಾರದ ಮೇಲೆ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
PUC or Any Degree.
ವಿಳಾಸ :
ಕಾವೇರಿ ಮೆಡಿಹೌಸ್ ಪ್ರೈ.ಲಿ.
ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ-577 002.

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲೇ ಇದ್ದು ಅಡುಗೆ ಮಾಡಲು ಮಹಿಳಾ ಸಿಬ್ಬಂದಿ-1 ಬೇಕಾಗಿದ್ದಾರೆ. (ವಸತಿ ವ್ಯವಸ್ಥೆ ಇರುತ್ತದೆ) ಸಂಪರ್ಕಿಸಿ :
86186 42929
08192-252228

**ಬಿಲ್ಡಿಂಗ್ ಮಾರಾಟಕ್ಕೆ**
ನಿಜಲಿಂಗಪ್ಪ ಬಡಾವಣೆ ಆಂಜನೇಯ ದೇವಸ್ಥಾನ ಹತ್ತಿರ, 30x30 ಅಳತೆ ಮೂಲೆ ನಿವೇಶನದಲ್ಲಿ ಹೊಸದಾಗಿ ಕಟ್ಟಿರುವ 3 ಅಂತಸ್ತಿನ ಬಿಲ್ಡಿಂಗ್ ಮಾರಾಟಕ್ಕಿದೆ. ಪ್ರತಿ ಶನಿವಾರ ಬೆಳಗ್ಗೆ 10.30 ರಿಂದ ಮಧ್ಯಾಹ್ನ 3ಗಂಟೆಯೊಳಗೆ ಸಂಪರ್ಕಿಸಿ
90088 78676

**SHOPS FOR RENT**
With wash room facility. N.R Road Davangere.
94483 69523

**ಮಾರಾಟಕ್ಕೆ**
ವಿದ್ಯಾನಗರ ಸೈಟ್(ದಕ್ಷಿಣ) 40×60, ನಿಜಲಿಂಗಪ್ಪ ಬಡಾವಣೆ ಸೈಟ್ (ದಕ್ಷಿಣ)40×60, ತರಳಬಾಳು ಬಡಾವಣೆ ಸೈಟ್(ದಕ್ಷಿಣ) 30×50, SS ಲೇಔಟ್ ಸೈಟ್ - 40×63, ಮಹಾಲಕ್ಷ್ಮಿ ಲೇಔಟ್ ಸೈಟ್( ಉತ್ತಮ್ ಚಂದ್ - ಪಶ್ಚಿಮ) 35×61, ಶಿಕ್ಷಕರ ಬಡಾವಣೆ 2 ನೇ ಹಂತ (ದಕ್ಷಿಣ- ಆವರಗೆರೆ ) 30×40
78996 36597, 99165 25828

**URGENT WANTED**
System Operate, Loading Unloading Handlers, Driver is Corgo Office
85534 83255

**ಮನೆ ಬಾಡಿಗೆಗೆ**
ಒಂದು ಬೆಡ್‌ರೂಂನ ಚಿಕ್ಕಮನೆ 24 ಗಂಟೆ ನೀರು, ಪಾರ್ಕಿಂಗ್, ಉತ್ತಮ ಗಾಳಿ ಬೆಳಕು, P.B ರೋಡಿಗೆ ಹತ್ತಿರ, ಮೊದಲ ಅಂತಸ್ತಿನಲ್ಲಿದ್ದು, ಉದ್ಯೋಗಿಗಳಿಗೆ ಆದ್ಯತೆ, #1777, 2B ಕ್ರಾಸ್, 2 ಮೇನ್ ವಿನೋಬ ನಗರ, ದಾವಣಗೆರೆ.
94482 20909, 78928 68475

**ಭಟ್ಟರು ಬೇಕಾಗಿದ್ದಾರೆ**
ತಿಂಡಿ ಹೋಟೆಲ್‌ಗೆ ಅಡುಗೆ ಮಾಡಲು ತಿಂಡಿ ಭಟ್ಟರು ಬೇಕಾಗಿದ್ದಾರೆ. ಆಕರ್ಷಕ ವೇತನ ಕೊಡಲಾಗುವುದು.
76195 54656
98866 43353

**ಬೇಕಾಗಿದ್ದಾರೆ**
ಮನೆಯಿಂದಲೇ ಟೆಲಿ ಕಾಲಿಂಗ್ ಮಾಡಲು ಅನುಭವವುಳ್ಳ ಉತ್ತಮ ಸಂಭಾಷಣೆಯುಳ್ಳ ಪದವೀಧರ ಮಹಿಳೆ ಬೇಕಾಗಿದ್ದಾರೆ. ಸಂಬಳ + ಇನ್ಸೆಂಟಿವ್ ಕೊಡಲಾಗುವುದು.
99164 01135

**WANTED**
Tele Callers, Data Entry, Executives, SSLC/PUC Fluency in English for outbond Process.
Timing: 10.00am to 5.00 pm
Contact: 83106 28910

**ಮನೆ ಖರೀದಿಗೆ ಮತ್ತು ಲೀಸ್‌ಗಿದೆ**
ಭಗತ್‌ಸಿಂಗ್ ನಗರ, ಮಸೀದಿ ಪಕ್ಕ.
ಸಂಪರ್ಕಿಸಿ: ಶಹಬುದ್ದೀನ್
74119 88337
77958 98578

**ಜಮೀನು ಮಾರಾಟಕ್ಕಿದೆ**
ಹರಿಹರ ಹತ್ತಿರ, ಶಿವಮೊಗ್ಗ ರಸ್ತೆಗೆ 8 ಎಕರೆ ಜಮೀನು ಮಾರಾಟಕ್ಕಿದೆ.
@ Rs 80 Laks/ Acre
(Contact Buyers only)
74112 50447

**REQUIRED**
GENTS AND LADIES WARDEN, RECEPTION & TELECALLING
LOCATION : DAVANGERE
CONTACT :
87628 67557, 78999 17593

**ನೇರ ಪರೀಕ್ಷೆಗಳು**
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC, SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ. ಕೊನೆಯ ದಿ:23.10.2021
ಮಾನಸ ಎಜುಕೇಷನ್ ಟ್ರಸ್ಟ್(ರಿ.)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**CHANGE OF NAME**
I, NEELGUND ESWARAPPA JITHENDRA (new name), previously called NEELGUND JITHENDRA (old name), resident of #168, Akshaya, 10th Cross, 'A' Block, Devaraj Urs Layout, Davangere - 577006 Karnataka State have changed my name as NEELGUND ESWARAPPA JITHENDRA vide affidavit dated 12-10-2021 sworn before Notary M. Prathaparudra,Davangere.Henceforth all my transactions & dealings will be in my new name NEELGUND ESWARAPPA JITHENDRA.

**ಸುವರ್ಣ ಉದ್ಯೋಗಾವಕಾಶ**
ವಿದ್ಯಾರ್ಹತೆ : ಪಿಯುಸಿ or any ಡಿಗ್ರಿ. ವಯಸ್ಸು 18 ವರ್ಷ ಮೇಲ್ಪಟ್ಟ, ಯುವಕ-ಯುವತಿಯರು ಬೇಕಾಗಿದ್ದಾರೆ. ರೂ 9,000 - 12,000 ವರೆಗೆ. ನಿಮ್ಮ ವೃತ್ತಿಪರತೆ ನೋಡಿ ವೇತನ ಹೆಚ್ಚಿಸಲಾಗುವುದು ಹಾಗೂ ಯುವಕರಿಗೆ ದ್ವಿಚಕ್ರ ವಾಹನ ಇರುವವರಿಗೆ ಆದ್ಯತೆ, ಜೊತೆಗೆ ಡಿ.ಎಲ್., ಆರ್.ಸಿ. ಕಾರ್ಡ್ ಹೊಂದಿರಬೇಕು.
Ph : 8951455892, 99023 42040
ಅಡ್ರೆಸ್ : ಎಸ್.ಎಸ್. ಹೈಟೆಕ್ ಹಾಸ್ಪಿಟಲ್ ಮೇನ್ ರೋಡ್, ಲಕ್ಷ್ಮೀ ಲೇಔಟ್, ದಾವಣಗೆರೆ.

**ಕೆಲಸಗಾರರು ಬೇಕಾಗಿದ್ದಾರೆ**
ಪಾನ್ ಮಸಾಲಾ ಶಾಪ್‌ನಲ್ಲಿ ಸೇಲ್ಸ್ ಮ್ಯಾನ್ ಬೇಕಾಗಿದ್ದಾರೆ. ಬೈಕ್ ಉಳ್ಳವರು ಹಾಗೂ ಓಮ್ನಿ ವಾಹನ ಚಲಾಯಿಸುವಂತವರು ಜೊತೆಗೆ ಲೈಸೆನ್ಸ್ ಹೊಂದಿರಬೇಕು. ಕೆ.ಆರ್. ಮಾರ್ಕೆಟ್, ಎಂ.ಜಿ. ರೋಡ್, ದಾವಣಗೆರೆ. (ಹುಡುಗರಿಗೆ ಮಾತ್ರ)
98455 07128, 99008 87751

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near Coffee day, Nutana Collage Road, Vidyanagara, 2nd main, Davangere
77603 16576
90080 55813

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಜಮೀನು ಮಾರಾಟಕ್ಕಿದೆ**
10 ಎಕರೆ ಜಮೀನು ಮಾರಾಟಕ್ಕಿದೆ. @ ಕುಣೆಬೆಳಕೆರೆ
@ Rs 30 Laks/Acre
Negotiable
(Contact Buyers only)
74112 50447

**ST. JOSEPH TIMES**
CHURCH ROAD, P.J. EXTENSION, RAM & CO CIRCLE, DAVANGERE.
Mob. : 9632002486
SMART CITY, SMART OFFER
OLD WATCH EXCHANGE OFFER
30% DISCOUNT
ಶೇಕಡಾ 30% ರಿಯಾಯಿತಿ

# ಜನಮುಖಿ ಕಾರ್ಯಗಳಿಂದ ಲಯನ್ಸ್ ಹಿರಿಮೆ ಹೆಚ್ಚಿದೆ

**ರಾಣೇಬೆನ್ನೂರಿನಲ್ಲಿ ಜಿಲ್ಲಾ ಲಯನ್ಸ್ ರಾಜ್ಯಪಾಲ ಶ್ರೀಕಾಂತ ಮೋರೆ**

ರಾಣೇಬೆನ್ನೂರು, ಅ.13- ಕಣ್ಣು ಪರೀಕ್ಷೆ, ಶಸ್ತ್ರಚಿಕಿತ್ಸೆ ರಕ್ತದಾನ, ರೋಗಿಗಳಿಗೆ ಅನ್ನ ದಾಸೋಹ ಮುಂತಾದ ಕಾರ್ಯಕ್ರಮಗಳ ಮೂಲಕ ರಾಣೇಬೆನ್ನೂರಿನ ಲಯನ್ಸ್ ಸಂಸ್ಥೆ ತನ್ನ ಹಿರಿಮೆ ಹೆಚ್ಚಿಸಿಕೊಂಡಿದೆ ಎಂದು ಲಯನ್ ಜಿಲ್ಲಾ ರಾಜ್ಯಪಾಲ ಶ್ರೀಕಾಂತ ಮೋರೆ ಹೇಳಿದರು.

ನಿನ್ನೆ ಇಲ್ಲಿ ನಡೆದ ಸಂಸ್ಥೆಯ 45 ನೇ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಪದಾಧಿಕಾರಿಗಳ ಹಾಗೂ ಸದಸ್ಯರ ಸಹಕಾರದಿಂದ ಕಾರ್ಯಕ್ರಮಗಳು ನಡೆಯುತ್ತಿದ್ದು, ಸಂಸ್ಥೆಯ ಹಿರಿಮೆ ಹೆಚ್ಚಿದೆ. ಇಂತಹ ಸಮಾಜಮುಖಿ ಕಾರ್ಯಕ್ರಮಗಳನ್ನು ಇನ್ನು ಹೆಚ್ಚು ಹೆಚ್ಚು ಕೈಗೊಳ್ಳಲಾಗುವುದು ಎಂದು ಅಧ್ಯಕ್ಷತೆ ವಹಿಸಿದ್ದ ಕ್ಲಬ್‌ನ ಅಧ್ಯಕ್ಷ ಟಿ. ವೀರಣ್ಣ ಹೇಳಿದರು.

ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಂ.ಎಸ್. ಅರಕೇರಿ, ವಿವಿಧ ಪದಾಧಿಕಾರಿಗಳಾದ ಕೊಟ್ರೇಶ್ ಎಮ್ಮಿ, ಟಿ.ಸಿ. ಪಾಟೀಲ, ಅಶೋಕ ಹೊಟ್ಟಿಗೌಡ್ರ, ಫಾತಿಮಾ ಬೆಳಕೇರಿ, ಬಸವರಾಜ ಬಡಿಗೇರ, ಶಿವಪ್ಪ ಗುರಿಕಾರ, ಬಸವರಾಜ ಪಾಟೀಲ, ರೇವಣಗೌಡ ಗ್ಯಾನಗೌಡ್ರ, ಎಂ.ಎಚ್. ಪಾಟೀಲ, ಬಿ.ಎಸ್.ಪಾಟೀಲ, ಲಯನೆಸ್ ಸಂಸ್ಥೆ ಸದಸ್ಯರು ಪಾಲ್ಗೊಂಡಿದ್ದರು.

## ಮಕ್ಕಳಿಗೆ ಜ್ಯಾಮಿಟ್ರಿ ಬಾಕ್ಸ್ ವಿತರಣೆ



ದಾವಣಗೆರೆ, ಅ.13 - ತಾಲ್ಲೂಕಿನ ಹುಚ್ಚವ್ವನಹಳ್ಳಿಯ ಶ್ರೀಮತಿ ನಾಗಮ್ಮ ಕೇಶವ ಮೂರ್ತಿ ಗ್ರಾಮಾಂತರ ಪ್ರೌಢಶಾಲೆಯ 8 ಮತ್ತು 9ನೇ ತರಗತಿ ವಿದ್ಯಾರ್ಥಿಗಳಿಗೆ ಜಿಲ್ಲಾ ವಕೀಲರ ಸಂಘದ ಮಾಜಿ ಅಧ್ಯಕ್ಷ ಅಬ್ದುಲ್ ರಹೀಂ ಅವರು ಉಚಿತವಾಗಿ ಜ್ಯಾಮಿಟ್ರಿ ಬಾಕ್ಸ್ ವಿತರಿಸಿದರು.

# ಯೋಜನೆಗೆ ನಮ್ಮ ಮುಖ್ಯಮಂತ್ರಿ ಕಾರಣ ಎಂದ ಸಂಸದರು...


## ಮಾಜಿ, ಹಾಲಿ ಶಾಸಕರು, ಮೂವರು ಮುಖ್ಯಮಂತ್ರಿಗಳು ಕಾರಣ ಎಂದು ಎಲ್ಲರ ಕಿವಿ ಹಿಂಡಿದ ಪರಮಪೂಜ್ಯರು

**ಕೆ.ಎಲ್.ಹರೀಶ್** ಬಸಾಪುರ

ಪರಮಪೂಜ್ಯ ಶಿವಮೂರ್ತಿ ಶಿವಾಚಾರ್ಯ ಮಹಾ ಸ್ವಾಮಿಗಳು ಭರಮಸಾಗರ ಕೆರೆ ವೀಕ್ಷಣೆ ಮಾಡಿ, ಏತ ನೀರಾವರಿ ಯೋಜನೆಯ ಮೂಲಕ ಕೆರೆಗೆ ನೀರು ಬರುತ್ತಿರುವುದನ್ನು ಕಂಡು ಹರ್ಷ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಸದ ಜಿ.ಎಂ. ಸಿದ್ದೇಶ್ವರ ಅವರು, ಈ ಯೋಜನೆಯ ಮೂಲಕ ಸುತ್ತಮುತ್ತಲಿನ ರೈತರ ಜೀವನ ಹಸನಾಗಲಿದೆ ಎಂದರು. ಈ ಯೋಜನೆಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರೇ ಕಾರಣ. ಅವರು 1200 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದ್ದರು ಎಂದು ಹೇಳುವ ಮೂಲಕ 2018 ರಲ್ಲಿಯೇ ಯೋಜನೆಯನ್ನು ಬಜೆಟ್ ನಲ್ಲಿ ಸೇರಿಸಿ, ಅನುಮೋದಿಸಿದ ಸಿದ್ದರಾಮಯ್ಯನವರನ್ನು ನಂತರ ಬಂದ ಸಮ್ಮಿಶ್ರ ಸರ್ಕಾರದ ಮುಖ್ಯಮಂತ್ರಿ ಹೆಚ್. ಡಿ.ಕುಮಾರಸ್ವಾಮಿ ಅವರನ್ನು ನೆನೆಯದೇ ಇದ್ದದ್ದು ಮಾತ್ರ ಅವರ ಏಕಮುಖ ಹೇಳಿಕೆಯೋ ಅಥವಾ ಸಂಸದರ ವಯೋಸಹಜ ಮರುವೋ ಎಂದು ಸಾರ್ವಜನಿಕರಿಗೆ ಅನಿಸಿದ್ದು ಮಾತ್ರ ಸತ್ಯ.

ಮಾಜಿ ಸಚಿವ ಹೆಚ್.ಆಂಜನೇಯ ಮಾತನಾಡಿ, ಏತ ನೀರಾವರಿ ಯೋಜನೆ 2018 ರ ತರಳಬಾಳು ಹುಣ್ಣಿಮೆಗೆ ಅಂದಿನ ಮುಖ್ಯಮಂತ್ರಿಗಳಾದ ಸಿದ್ದರಾಮ ಯ್ಯನವರು ಬಂದಾಗ, ಪರಮಪೂಜ್ಯರು ಬರದ ನಾಡಿಗೆ ನೀರು ಒದಗಿಸುವ ಏತ ನೀರಾವರಿ ಯೋಜನೆಯ ನೀಲಿ ನಕ್ಷೆ ರೂಪಿಸಿದ್ದು, ಇದಕ್ಕೆ 1200 ಕೋಟಿ ರೂ.ಗಳ ಅವಶ್ಯಕತೆ ಇದ್ದು, ಈ ಬಾರಿಯ ಬಜೆಟ್‌ನಲ್ಲಿ ಈ ಯೋಜನೆಯನ್ನು ಸೇರಿಸಬೇಕು ಎಂದು ತಿಳಿಸಿದರು. ಸಿದ್ದರಾಮಯ್ಯ ಅವರು 15 ದಿನದಲ್ಲಿ ಈ ಯೋಜನೆಯನ್ನು ಬಜೆಟ್‌ನಲ್ಲಿ ಸೇರಿಸಿ ಅನುಮೋದಿಸುವ ಮೂಲಕ ಏತ ನೀರಾವರಿ ಯೋಜನೆಗೆ ಬುನಾದಿ ಹಾಕಿದರು ಎಂದು ಸ್ಮರಿಸಿದರು.



ನಂತರ ಬಂದ ಮುಖ್ಯಮಂತ್ರಿಗಳು ಯೋಜನೆಗೆ ಸಹಕಾರ ನೀಡಿದ್ದರಿಂದ ಯೋಜನೆ ಇಷ್ಟು ಬೇಗ ಯಶಸ್ವಿಯಾಗಲು ಸಾಧ್ಯವಾಗಿದ್ದು ಎಂದು ತಿಳಿಸಿದರು.

ಗುರುಗಳು ಕೆರೆ ವೀಕ್ಷಣೆಗೆ ತೆರಳಿದ್ದಾಗ ಅವರ ಕಾಲಿಗೆ ಗಾಯವಾಗಿ ರಕ್ತ ಬಂದು ತುಂಗಭದ್ರೆಯ ನೀರಿನೊಂದಿಗೆ ಬೆರೆತು ತುಂಗಭದ್ರೆ ಪಾವನಳಾದಳು ಎಂದು ಭಾವುಕರಾದರು. 300 ವರ್ಷಗಳ ಹಿಂದೆ ರಾಜಾ ಭರಮಣ್ಣನಾಯಕ ಈ ಕೆರೆ ನಿರ್ಮಿಸುವಾಗ ಬಹುಶಃ ಮುಂದೆ ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಎಂಬ ಸ್ವಾಮೀಜಿ ಬಂದು ಈ ಕೆರೆಯನ್ನು ತುಂಬಿಸುತ್ತಾರೆ ಎಂದು ಅಂದು ಕೊಂಡಿರಬಹುದು ಎಂದದ್ದು ವಿಶೇಷವಾಗಿತ್ತು. ಕೆರೆಯ ಮುಂಭಾಗ ಗುರುಗಳ ಪ್ರತಿಮೆ ಮಾಡಿಸಬೇಕು. ಇಂತಹ ಮಹತ್ತರವಾದ ಯೋಜನೆಯನ್ನು ರೂಪಿಸಿದ ಗುರುಗಳ ದರ್ಶನವನ್ನು ಇಲ್ಲಿ ಓಡಾಡುವ ಪ್ರತಿಯೊಬ್ಬರೂ ನೋಡುವಂತಾಗಲಿ ಎಂದು ತಮ್ಮ ಆಶಯವನ್ನು ತಿಳಿಸಿದರು.

ಶಾಸಕ ಎಂ. ಚಂದ್ರಪ್ಪ ಮಾತನಾಡಿ, ತಾವು ಸದಾ ಗುರುಗಳ ಆಶಯದಂತೆ ಕೆಲಸ ಮಾಡುವುದಾಗಿ ತಿಳಿಸುತ್ತಾ, ಮಾಜಿ ಸಚಿವ ಆಂಜನೇಯ ಅವರ ಗುರುಗಳ ಪ್ರತಿಮೆಯ ಹೇಳಿಕೆಗೆ ಪರ್ಯಾಯವೆಂಬ. ತಾವೇ ಗುರುಗಳ ಕಂಚಿನ ಪ್ರತಿಮೆ ಮಾಡಿಸುವುದಾಗಿ, ಈಗಾಗಲೇ ಅದಕ್ಕೆ ಎರಡು ಕೋಟಿ ರೂ.ಗಳನ್ನು ಕಾಯ್ದಿರಿಸಿರುವುದಾಗಿ ಹೇಳಿದ್ದು ಮತ್ತು ಭಾಷಣದ ಮಧ್ಯೆಯೇ ಗುರುಗಳಿಗೆ ಮಗದೊಮ್ಮೆ ನಮಸ್ಕರಿಸಿ ಬಂದದ್ದು ಮಾತ್ರ ಚುನಾವಣೆ ಹತ್ತಿರ ಇದೆ ಎಂಬುದನ್ನು ನೆನಪಿಸುವಂತೆ ಇತ್ತು.

ಈ ಯೋಜನೆಯ ರೂವಾರಿಗಳಲ್ಲಿ ಒಬ್ಬರಾದ ನೀರಾವರಿ ಇಲಾಖೆಯ ಎಂ.ಡಿ. ಮಲ್ಲಿಕಾರ್ಜುನ್ ಬಿ.ಗುಂಗೆ ಮಾತನಾಡಿ, 55 ಕಿ.ಮೀ ಉದ್ದದ ಇಂತಹ ಯೋಜನೆಯನ್ನು ರಾಜ್ಯದಲ್ಲಿ ಎಲ್ಲಿಯೂ ಮಾಡಿರಲಿಲ್ಲ. ನೀರಾವರಿ ಯೋಜನೆಗಳನ್ನು ಮಾಡುವಾಗ ನಾನಾ ರೀತಿಯ ಅಡಚಣೆಗಳು ಇರುತ್ತವೆ. ಗುರುಗಳ ಕೃಪೆಯಿಂದ ಎಲ್ಲಾ ಅಡಚಣೆಗಳು ಬೇಗ ನಿವಾರಣೆಯಾಗಿ ಅವಧಿಗೂ ಮುನ್ನವೇ ಕೆಲಸ ಮುಗಿಸಲು ಸಾಧ್ಯವಾಗಿತ್ತು ಎಂದು ತಿಳಿಸುತ್ತಾ, ಯೋಜನೆಯಲ್ಲಿ ನಡೆದ ಅನುಭವಗಳನ್ನು ಹೇಳುತ್ತಿದ್ದರು. ಅಷ್ಟರಲ್ಲಿ ವರುಣನ ಆಗಮನದ ಮುನ್ಸೂಚನೆಯಿಂದ ಅವರ ಭಾಷಣ ಮೊಟಕುಗೊಳಿಸಲಾಯಿತು. ಅವರ ಮಾತುಗಳನ್ನು ಕೇಳುತ್ತಿದ್ದರೆ ಇಂತಹ ಯೋಜನೆಯಲ್ಲಿ ನಾವುಗಳು ಏಕೆ ಕೆಲಸ ಮಾಡಲು ಸಾಧ್ಯವಾಗಲಿಲ್ಲ ಎಂದು ನೆರೆದಿದ್ದ ಸಭಿಕರಿಗೆ ಬೇಸರವಾಗಿದಂತು ಸತ್ಯ.

ಅಂತಿಮವಾಗಿ ಪರಮಪೂಜ್ಯರು ತಮ್ಮ ಆಶೀರ್ವಚನದಲ್ಲಿ ಈ ಯೋಜನೆಯ ಯಶಸ್ಸಿಗೆ ಮೂವರು ಮುಖ್ಯಮಂತ್ರಿಗಳು ಕಾರಣ ಎಂದು ತಿಳಿಸುತ್ತಾ ಮನೆಯಲ್ಲಿ ಮಗು ಹುಟ್ಟಿದಾಗ ಬರುವ ನೆಂಟರು ಮಗುವಿನ ಹೋಲಿಕೆಯನ್ನು ತಂದೆ - ತಾಯಿ, ದೊಡ್ಡಪ್ಪ, ಅಜ್ಜಿ - ತಾತರಿಗೆ ಹೋಲಿಸುವಂತೆ ಈ ಯೋಜನೆಯ ಯಶಸ್ಸನ್ನು ಮೂವರು ಮುಖ್ಯಮಂತ್ರಿಗಳಿಗೂ ನೀಡಿದರು.


ಮುಂದಿನ ದಿನಗಳಲ್ಲಿ ಭಕ್ತರು ತಮಗೆ ಬರುವ ಆದಾಯದಲ್ಲಿ ಶೇಕಡ ಇಂತಿಷ್ಟು ಎಂದು ಮನೆಯ ಹೆಣ್ಣುಮಕ್ಕಳು ಹಾಗೂ ತಾಯಂದಿರಿಗೆ ಬಂಗಾರ ಮಾಡಿಸಿಕೊಡಬೇಕು ಎಂದು ಭಕ್ತರಿಂದ ಮಾತು ತೆಗೆದುಕೊಂಡರು. ಮನೆಯ ಮಹಿಳೆಯರು ಬ್ಯಾಂಕ್ ಇದ್ದಂತೆ ಎಂದು ತಿಳಿಸಿದ ಅವರು, ಈ ಯೋಜನೆ ಮಾಡುವಾಗ ಕೆಲವರು ಮನೆ ಕಳೆದುಕೊಂಡಿದ್ದು, ಅವರ ತ್ಯಾಗವನ್ನು ತಾವುಗಳು ಎಂದೂ ಮರೆಯಬಾರದು ಎಂದು ತಿಳಿಸುತ್ತಾ, ಮುಂದಿನ ಸಭೆಯಲ್ಲಿ ಅವರನ್ನು ಕರೆದು ಸನ್ಮಾನಿಸಬೇಕು ಎಂದು ತಮ್ಮ ಅಭಿಲಾಷೆ ತಿಳಿಸಿದರು.

ಈ ಯೋಜನೆಯಲ್ಲಿ ಕಾರ್ಯ ನಿರ್ವಹಿಸಿದ ಅಧಿಕಾರಿಗಳಿಗೂ ಹಾಗೂ ಸಿಬ್ಬಂದಿಗಳಿಗೂ ಪರಮಪೂಜ್ಯರಿಂದ ಸನ್ಮಾನಿಸಲಾಯಿತು.

1200 ಕೋಟಿ ರೂ.ಗಳ ಈ ಯೋಜನೆಗೆ ಸಿದ್ದರಾಮಯ್ಯನವರು ಬಜೆಟ್‌ನಲ್ಲಿ ಸೇರಿಸಿ ಅನುಮೋದಿಸಿದರು. ಮುಂದೆ ಬಂದ ಸಮ್ಮಿಶ್ರ ಸರ್ಕಾರದ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು, ಯೋಜನೆಗೆ ಸಂಬಂಧಪಟ್ಟ ಕಾರ್ಯಗಳನ್ನು ಮುಂದುವರೆಸಿದರು. ನಂತರ ಬಂದ ಬಿ.ಎಸ್. ಯಡಿಯೂರಪ್ಪ ಅವರು, 1200 ಕೋಟಿಯ ಈ ಯೋಜನೆಯನ್ನು 250 ಕೋಟಿ ರೂ.ಗಳಿಗೆ ಸೀಮಿತಗೊಳಿಸಿ ಆದೇಶ ಹೊರಡಿಸಿದರು. ಇದನ್ನು ಒಪ್ಪದ ಪರಮಪೂಜ್ಯರು ರೈತರ ಹಿತದೃಷ್ಟಿಯಿಂದ ಒತ್ತಾಯ ಮಾಡಿ ಈ ಯೋಜನೆಗೆ 1200 ಕೋಟಿ ಹಣವನ್ನು ಬಿಡುಗಡೆಗೊಳಿಸುವಲ್ಲಿ ಯಶಸ್ವಿಯಾದರು ಎಂಬುದು ನಿನ್ನೆಯ ಸಭೆಯಿಂದ ಅರ್ಥವಾಯಿತು.

ಅಂತಿಮವಾಗಿ ಈ ಯೋಜನೆಯ ಯಶಸ್ಸನ್ನು ಯಾರಿಗೆ ನೀಡುತ್ತೀರಾ ಎಂಬುದು ನಿಮಗೇ ಬಿಟ್ಟಿದ್ದು.

# ವಾಟ್ಸಾಪ್ ಸ್ಟೇಟಸ್‌ನಲ್ಲಿ ನವರಾತ್ರಿ ವೈಭವ...









**ದೇವಿಕಾ ಸುನೀಲ್**

ಕೊರೊನಾ ಕರಿಛಾಯೆ ಪೂರ್ತಿ ಅಲ್ಲದಿದ್ದರೂ ಪಕ್ಕಕ್ಕೆ ಸರಿದಿದೆ. ಜನರಲ್ಲಿ ಸ್ವಲ್ಪ ಚೈತನ್ಯ ಮೂಡುತ್ತಿದೆ. ಮನೆ ಯಲ್ಲೇ ಇದ್ದು ಸಾಕಾಗಿದ್ದ ಎಲ್ಲರಿಗೂ ರೆಕ್ಕೆ ಬಂದಂತಾಗಿದೆ. ಮೆಲ್ಲ ಮೆಲ್ಲನೆ ಪರಿಸ್ಥಿತಿ ಮೊದಲಿನಂತೆ ಆಗುತ್ತಿದೆ.

ಕಳೆದ ವರ್ಷ ಹಬ್ಬಗಳ ವೈಭವವನ್ನು ಕೊರೊನಾ ಕಸಿದುಕೊಂಡಿತ್ತು. ಮನೆ ಮಟ್ಟಿಗೆ ಹಬ್ಬಗಳು ನಡೆದವು. ಹೆಣ್ಣು ಮಕ್ಕಳನ್ನು ಮನೆಗೆ ಅರಿಶಿನ ಕುಂಕುಮಕ್ಕೂ ಕರೆಯಲು ಆಗದಂತಹ ಸ್ಥಿತಿ ಎದುರಾಗಿತ್ತು. ಕೆಲವರಂತೂ ಹಬ್ಬದ ಬಾಗಿನವನ್ನು ಮನೆಯ ದೇವರಿಗೆ ಸಲ್ಲಿಸಿ ಜೈ ಎಂದರು. ಆದರೆ, ಈ ಬಾರಿ ಕೊರೊನಾ ಬಿಡುವು ಮಾಡಿಕೊಂಡಿದೆ. ಜನರು ಉತ್ಸಾಹದಿಂದ ನವರಾತ್ರಿ ಆಚರಣೆಗೆ ಮುಂದಾಗಿದ್ದಾರೆ. ಮುಖ್ಯವಾಗಿ ಮುಚ್ಚಿದ ದೇವಸ್ಥಾನದ ಬಾಗಿಲುಗಳು ತೆರೆದುಕೊಂಡು, ಆಸ್ತಿಕರಿಗೆ, ಅರ್ಚಕರಿಗೆ ಸಂತೋಷ ನೀಡಿದೆ.

ಸುಮಾರು ಒಂದೂ ಮುಕ್ಕಾಲು ವರ್ಷಗಳಿಂದ ಕಳೆಗುಂದಿದ್ದ ವೈಭವಕ್ಕೆ ಮತ್ತೆ ಗರಿ ಮೂಡಿದೆ. ಸಾಂಪ್ರ ದಾಯಿಕವಾಗಿ ಎಲ್ಲಾ ದೇವಸ್ಥಾನಗಳಲ್ಲೂ ನವರಾತ್ರಿ ಪೂಜೆ, ಪುನಸ್ಕಾರಗಳನ್ನು ಮಾಡಿಯೇ ತೀರುತ್ತಾರೆ. ಆದರೆ ಕೆಲವೇ ದೇವಸ್ಥಾನಗಳಲ್ಲಿ ಮಾತ್ರ ವಿಶೇಷ ಅಲಂಕಾರವನ್ನು ಮಾಡಲಾಗುತ್ತಿತ್ತು. ಈಗ ಎಲ್ಲಾ ದೇವಿ ದೇವಸ್ಥಾನಗಳಲ್ಲೂ ಪ್ರತಿದಿನವೂ ವಿಶೇಷ ಅಲಂಕಾರ ಮಾಡಲಾಗುತ್ತಿದೆ. ಎಲ್ಲ ದೇವಸ್ಥಾನಗಳು ಸ್ಪರ್ಧೆಗೆ ನಿಂತಂತೆ ಒಂದಕ್ಕಿಂತ ಒಂದು ಕಣ್ಮನ ಸೆಳೆಯುವಂತೆ ಅಲಂಕರಿಸಿ, ಎಲ್ಲರನ್ನೂ ಕೈಬೀಸಿ ಕರೆಯುತ್ತಿವೆ.

ಮೊದಲೆಲ್ಲಾ ದಿನಪತ್ರಿಕೆಯಲ್ಲಿ ದೇವರ ವಿಶೇಷ ಅಲಂಕಾರ ನೋಡಿ ಸಂತೋಷ ಪಡುತ್ತಿದ್ದೆವು. ಆ ನಂತರ ಸುದ್ದಿ ವಾಹಿನಿಗಳ ಮೂಲಕ ವೀಕ್ಷಿಸಲು ಪ್ರಾರಂಭ ವಾಯಿತು. ಈಗಂತೂ ಮೊಬೈಲ್ ಮೂಲಕ ಮಿಂಚಿನ ವೇಗದಲ್ಲಿ ಜಗತ್ತಿನ ಮೂಲೆ ಮೂಲೆಗೂ ತಲುಪುತ್ತಿದೆ. ಮೊದಲು ತಮಗೆ ಬೇಕಾದವರಿಗೆ ಮಾತ್ರ ವಾಟ್ಸಾಪ್ ಮೂಲಕ ಕಳುಹಿಸುತ್ತಿದ್ದ ಇಂತಹ ವಿಶೇಷತೆಗಳನ್ನು, ತಮ್ಮ ವಾಟ್ಸಾಪ್ ಸ್ಟೇಟಸ್‌ಗೆ ಹಾಕುವ ಮೂಲಕ ಅವರ ಸಂಪರ್ಕದಲ್ಲಿರುವ ಎಲ್ಲರಿಗೂ ತಲುಪುವಂತಾಯಿತು. ಬೇರೆಯವರು ಕಳುಹಿಸಿರುವ ವಿಶೇಷ ಅಲಂಕಾರಗಳನ್ನು ತಮ್ಮ ಸ್ಟೇಟಸ್‌ಗೆ ಹಾಕಿಕೊಂಡು ಎಲ್ಲರಿಗೂ ಹಂಚಿಕೊ ಳ್ಳುವ ಮೂಲಕ ಹೆಚ್ಚಿನ ಪ್ರಚಾರ ಪಡೆದುಕೊಳ್ಳುತ್ತಿದೆ.

ತಿರುಪತಿ ತಿಮ್ಮಪ್ಪನಿಗೆ ಬಣ್ಣ ಬಣ್ಣದ ಹೂವುಗಳು, ಮುತ್ತುಗಳು, ಬಂಗಾರ, ವಜ್ರ, ವೈಢೂರ್ಯಗಳ ಅಲಂಕಾರವನ್ನು ಮಾತ್ರ ನೋಡಿದ್ದ ನಮ್ಮೆಲ್ಲರಿಗೂ, ಇವಿಷ್ಟೇ ಅಲ್ಲ ಬೇರೆ ಬೇರೆ ರೀತಿಯೂ ದೇವರಿಗೆ ಅಲಂಕಾರ ಮಾಡಿ, ಮನ ತಣಿಸಿಕೊಳ್ಳಬಹುದು ಎಂಬುದನ್ನು ಎಲ್ಲರೂ ನೋಡುವಂತಾಗಿದೆ.

ನವರಾತ್ರಿಯ ನವದುರ್ಗೆಯ ಅಲಂಕಾರ ಒಂದೆಡೆ ಯಾದರೆ, ತರಕಾರಿಯಿಂದ, ಅರಿಶಿನ ಕುಂಕುಮದಿಂದ, ಅಕ್ಷತೆ, ನಾಣ್ಯ, ನೋಟಿನಿಂದ, ಕನ್ನಡಿ, ವೀಳ್ಯೆದೆಲೆ, ಒಣ ಹಣ್ಣುಗಳಿಂದಲೂ ದೇವಿಯನ್ನು ಶೃಂಗಾರ ಮಾಡಲಾಯಿತು. ಹೊಸ ಹೊಸ ಪ್ರಯೋಗಗಳ ಮೂಲಕ ನೋಡುಗರನ್ನು ಬೆಕ್ಕಸ ಬೆರಗಾಗಿಸುತ್ತಿದೆ, ಇತ್ತೀಚಿನ ಅಲಂಕಾರ ಕಲೆ, ಇದು ಕೇವಲ ದಾವಣಗೆರೆಯಷ್ಟೇ ಅಲ್ಲ.... ಎಲ್ಲೆಡೆ ಪ್ರಾರಂಭವಾಗಿದೆ. ಇದೆಲ್ಲವನ್ನು ನೋಡುವ ಭಾಗ್ಯ ಕಲ್ಪಿಸಿದೆ ನಮ್ಮ ಸಂಚಾರಿ ದೂರವಾಣಿ.

ಅಬ್ಬಬ್ಬಾ....ಏನೆಲ್ಲಾ ಅಲಂಕಾರಗಳು ದೇವಿಯರಿಗೆ... ಶ್ರೀರಂಗಪಟ್ಟಣದ ಚಾಮುಂಡೇಶ್ವರಿ ದೇವಿಗಂತೂ ಒಬ್ಬಟ್ಟಿನಿಂದ, ಚಿರೋಟಿಯಿಂದ ಅಲಂಕರಿಸಿದ್ದು ವೈರಲ್ ಆಯಿತು. ದಾವಣಗೆರೆ ರಿಂಗ್ ರಸ್ತೆಯಲ್ಲಿರುವ ಶಾರದಾಂಬೆಗೆ ಪ್ರತಿದಿನ ವೃಷಭ, ಮಯೂರ ಸೇರಿದಂತೆ ನವ ದಿನಗಳೂ ಒಂದೊಂದು ವಾಹನದ ಮೇಲೆ ದೇವಿಯನ್ನು ಕೂರಿಸಿ ಅಲಂಕರಿಸಲಾಗುತ್ತಿದೆ. ಕನ್ಯಕಾಪರಮೇಶ್ವರಿ ದೇವಿಗೆ ನವದುರ್ಗೆಯರ ಅಲಂಕಾರ ನಡೆಯುತ್ತಿದೆ. ದಾವಲ್ ಪೇಟೆಯ ಶ್ರೀ ಚೌಡೇಶ್ವರಿ ದೇವಿಗೆ ಮೊದಲ ದಿನ ಅರಿಶಿನ ಕುಂಕುಮ ಅಲಂಕಾರ ಮಾಡಲಾಗಿತ್ತು. ಹಳೇ ಬೇತೂರು ರಸ್ತೆಯ ಶ್ರೀ ಬನಶಂಕರಿ ದೇವಿಗೆ ಗಾಯತ್ರಿ ಅಲಂಕಾರ, ನಗರದಲ್ಲಷ್ಟೇ ಅಲ್ಲ...

ಇದಲ್ಲದೆ, ಅಷ್ಟಗಂಧ ಅಲಂಕಾರ, ಕವಡೆ ಅಲಂಕಾರ, ಅರಿಶಿನ ಕೊಂಬಿನ ಅಲಂಕಾರ, ಅಡಿಕೆ, ಮುತ್ತಿನ ಅಲಂಕಾರ, ಬೆಂಗಳೂರಿನಲ್ಲಂತೂ ಅಮೇರಿಕನ್ ಡಾಲರ್‌ನಿಂದಲೂ ಅಲಂಕಾರ ಮಾಡಲಾಯಿತು. ಇದಲ್ಲದೆ, ಬಣ್ಣ ಬಣ್ಣದ ಬಳೆಗಳ ಮಲ್ಹಾರದಿಂದ ದೇವಿಯನ್ನು ಶೃಂಗರಿಸಿದ ರೀತಿ ಕಲಾತ್ಮಕತೆಗೆ ಕನ್ನಡಿಯಾಗಿತ್ತು. ಇನ್ನೊಂದು ಹೆಜ್ಜೆ ಮುಂದೆ ಹೋಗಿ, ರವಿಕೆ ಕಣದಿಂದ, ರಾಶಿ ರಾಶಿ ಪಟ್ಟು ಪೀತಾಂಬರ ಸೀರೆಗಳಿಂದಲೂ ದೇವಿಯನ್ನು ಶೃಂಗಾರಗೊಳಿಸಲಾಗಿತ್ತು.

ಇಂತಹ ನಯನ ಮನೋಹರ ದೃಶ್ಯಗಳು, ಅಲಂಕಾ ರಗೊಂಡ ದೇವರುಗಳ ಚಿತ್ರಗಳನ್ನು ವಾಟ್ಸಾಪ್ ಸ್ಟೇಟಸ್ ನಲ್ಲಿ ಹಾಕುವುದು, ವಾಟ್ಸಾಪ್‌ನಲ್ಲಿ ಕಳುಹಿಸುವ ಮೂಲಕ ಹೆಚ್ಚು ಜನರು ನೋಡುವ ಹಾಗಾಗಿದ್ದು, ನವರಾತ್ರಿ ವೈಭವ ಮೊಬೈಲ್ ಸ್ಟೇಟಸ್‌ನಲ್ಲಿ ಪ್ರತಿಫಲಿಸಿದೆ. ಸಮಸ್ಯೆಗಳನ್ನು ತಂದೊಡ್ಡುವ ಸ್ಟೇಟಸ್‌ಗಳಿಗಿಂತ ನಮ್ಮ ಸಂಸ್ಕೃತಿಯನ್ನು ಸಾರುವ ಇಂತಹ ಸ್ಟೇಟಸ್‌ಗಳು ಚೆನ್ನ ಅಲ್ಲವೇ.....

# ಜೀವನ ಪಾಠದ ಹಬ್ಬ ನವರಾತ್ರಿ

ಹಿಂದೂ ಧರ್ಮಗಳಲ್ಲಿ ಹಬ್ಬಗಳು ಸಾಲುಸಾಲಾಗಿ ಬರುತ್ತವೆ. ಅದರಲ್ಲಿ ನವರಾತ್ರಿ ವಿಶೇಷ ಹಬ್ಬ. ಎಲ್ಲಾ ಹಬ್ಬಗಳು ಒಂದು ದಿನ ಅಥವಾ ಎರಡು ದಿನವಾದರೆ ಈ ಹಬ್ಬವು ಒಂಭತ್ತು ದಿನ ವಿಶೇಷವಾಗಿ ದೇವಿಯ ಆರಾಧನೆ ಮಾಡಿ ಹತ್ತನೇ ದಿನ ದಸರಾ ಹಬ್ಬವನ್ನಾಗಿ ಆಚರಿಸುತ್ತೇವೆ. ಉತ್ತರ ಭಾರತ ಮತ್ತು ದಕ್ಷಿಣ ಭಾರತದಲ್ಲಿ ಈ ಹಬ್ಬವನ್ನು ಆಚರಿಸ ಲಾಗುತ್ತದೆ. ದುಷ್ಟ ಶಕ್ತಿಯನ್ನು ದೇವಿ ಸಂಹರಿಸುತ್ತಾಳೆ ಎನ್ನುವ ನಂಬಿಕೆ ಇದೆ. ಸಾಮಾನ್ಯವಾಗಿ ದುರ್ಗೆ ಎಂದರೆ, ಹೆಚ್ಚಿನವರ ಮನಸ್ಸಿನಲ್ಲಿ ಆಕೆಯ ಉಗ್ರ ರೂಪವೇ ಪ್ರಮುಖವಾಗಿ ಪ್ರಕರವಾಗುತ್ತದೆ. ಆದರೆ, ಇದು ಆಕೆಯ ಒಂದು ರೂಪ ಮಾತ್ರವಾಗಿದ್ದು, ಪುರಾಣಗಳಲ್ಲಿ ಒಂಭತ್ತು ರೂಪಗಳನ್ನು ಬಿಂಬಿಸಲಾಗುತ್ತದೆ.

**ಎಂಟನೇ ದಿನ :** ಈ ದಿನ ಮಹಾಗೌರಿಯ ರೂಪವನ್ನು ಧರಿಸಿರುತ್ತಾಳೆ. ಇದು ಆಕೆಯ ಅತ್ಯಂತ ಸೌಂದರ್ಯವತಿಯಾದ ರೂಪವಾಗಿರುತ್ತದೆ. ಆಕೆಯ ಬಣ್ಣ ಹಿಮದಷ್ಟು ಬೆಳ್ಳಗಿದ್ದು, ಈ ದಿನ ಬಿಳಿ ಅಥವಾ ಹಸಿರು ಬಣ್ಣದ ಸೀರೆಯುಟ್ಟು ಎತ್ತಿನ ಮೇಲೆ ಆಸೀನಳಾಗಿರುತ್ತಾಳೆ. ನಾಲ್ಕು ಕೈ ಮತ್ತು ಮೂರು ಕೈಗಳಿರುವ ಈಕೆಯ ರೂಪದಲ್ಲಿ ಶಾಂತಿ ಮತ್ತು ಜ್ಞಾನವನ್ನು ಸೂಚಿಸಲಾಗುತ್ತದೆ. ಎರಡೂ ಕೈಗಳಲ್ಲಿ ಢಮರುಗ ಮತ್ತು ಹೊರಮುದ್ರೆ ಇದ್ದು ಮೇಲಿನ ಬಲಗೈಯಲ್ಲಿ ಅಭಯ ಮುದ್ರೆ, ಕೆಳಗಿನ ಬಲಗೈಯಲ್ಲಿ ತ್ರಿಶೂಲವಿದೆ. ಇವಳ ಆರಾಧನೆಯಿಂದ ಅಲೌಕಿಕ ಸಿದ್ದಿಗಳು ಪ್ರಾಪ್ತವಾಗುತ್ತವೆ ಎಂಬ ನಂಬಿಕೆ ಇದೆ.

**ಒಂಭತ್ತನೇ ದಿನ :** ಈ ದಿನ ದುರ್ಗೆಯನ್ನು ಸಿದ್ಧಧಾತ್ರಿ ರೂಪದಲ್ಲಿ ಪೂಜಿಸಲಾಗುತ್ತದೆ. ಸಾಧಕರಿಗೆ ಎಲ್ಲಾ ರೀತಿಯ ಸಿದ್ದಿಗಳನ್ನು ಕರುಣಿಸುತ್ತಾಳೆ. ಸಿದ್ದಿಗಳಾದ ಅಣಿಮ, ಮಹಿಮ, ಗರಿಮ, ಲಗಿಮ, ಪ್ರಾಪ್ತಿ, ಪ್ರಕಾಮ್ಯಾ, ಈಶ್ವಿತ್, ವಶ್ವಿತ್ ಮುಂತಾದ ಎಲ್ಲಾ ಸಿದ್ದಿಗಳನ್ನು ದಯಪಾಲಿಸುತ್ತಾಳೆ. ನಾಲ್ಕು ಕೈಗಳಿದ್ದು, ಕಮಲ ಪುಷ್ಪದ ಮೇಲೆ ಕುಳಿತಿದ್ದು, ಶಂಖ, ಚಕ್ರ, ಗಧೆ ಹಾಗೂ ಕಮಲವನ್ನು ಕೈಯಲ್ಲಿ ಹಿಡಿದಿರುತ್ತಾಳೆ. ಈ ದಿನ ದೇವ-ಅಸುರ ಸಿದ್ದಿಯೋಗಿಗಳು ಪೂಜಿಸುತ್ತಾರೆ. ಕೆಂಪು ಬಣ್ಣದ ಸೀರೆಯುಟ್ಟು ವಿಶೇಷವಾಗಿ ದೇವಿ ಶೋಭಿಸುತ್ತಾಳೆ. ಈ ದಿನ ನಮ್ಮ ಎಲ್ಲಾ ಆಯುಧಗಳು ಮತ್ತು ವಾಹನಗಳ ಪೂಜೆಯ ವಿಶೇಷವೇ ನವಮಿಯಾಗಿರುತ್ತದೆ.

ದುರ್ಗೆಯು ಈ ದಿನ ಹಿಂಸೆಯಿಂದ ಲೋಕವನ್ನು ಕಾಪಾಡಲು ಮಹಿಷಾಸುರನ ಸಂಹಾರ ಮಾಡಿದಳು ಎಂಬ ಪ್ರತೀತಿ ಇದೆ. ಈ ಮಹಿಷಾಸುರನನ್ನು ವಧೆ ಮಾಡಿದವಳು ತ್ರಿಮೂರ್ತಿಗಳಾದ ಬ್ರಹ್ಮ-ವಿಷ್ಣು-ಮಹೇಶ್ವರರ ಜೊತೆಯಾಗಿ ದುರ್ಗೆಯನ್ನು ಸ್ಥಾಪಿಸಿದರು.

ಕೊನೆಯ ದಿನ ದಸರಾ ಹಬ್ಬವಾಗಿದ್ದು ಅದನ್ನು ವಿಜಯದಶಮಿ ಎಂದು ಊರಿನ ಹಬ್ಬವಾಗಿರುತ್ತದೆ. ಇಡೀ ಊರಿನಲ್ಲಿ ಈ ಹಬ್ಬವನ್ನು ಆಚರಿಸಲಾಗುತ್ತದೆ. ಈ ದಿನ ಪಾಂಡವರು ಶತೃಗಳ ಮೇಲೆ ಜಯ ಸಾಧಿಸಿದ ದಿನವೆಂದು ಹೇಳಲಾಗುತ್ತದೆ. ಈ ದಿನ ತುಂಬಾ ವಿಶೇಷ ದಿನವಾಗಿದ್ದು, ಯಾವುದೇ ಕೆಲಸ ಮಾಡಿದರೂ ವಿಜಯ ಸಿಗುತ್ತದೆ ಎಂದು ನಂಬಿಕೆ ಇದೆ. ಇದೇ ದಿನ ಬನ್ನಿ ಮುಡಿಯುವ ಕಾರ್ಯಕ್ರಮವಿದ್ದು, ಒಬ್ಬರಿಗೊಬ್ಬರು ಬನ್ನಿ ಕೊಟ್ಟು ಬಾಳು ಬಂಗಾರವಾಗಲಿ ಎಂದು ಹಾರೈಸಿ ಮನೆಯಲ್ಲಿ ಹಿರಿಯರಿಗೆ ನಮಸ್ಕರಿಸಲಾಗುತ್ತದೆ. ಇದಲ್ಲದೇ ಒಂಭತ್ತು ದಿನಗಳು ಮನೆಮನೆಗಳಲ್ಲಿ ದೇವಸ್ಥಾನಗಳಲ್ಲಿ ದೇವಿಯ ಆರಾಧನೆ, ಹೋಮ-ಹವನಗಳು ಮತ್ತು ವಿಶೇಷ ಪೂಜೆಗಳು ಜರುಗುತ್ತವೆ. ಅಲ್ಲದೇ ಗೊಂಬೆಗಳನ್ನು ಕೂರಿಸುವ ಸಂಪ್ರದಾಯವೂ ಇರುತ್ತದೆ. ಭಜನೆ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಬಗೆ ಬಗೆಯ ಭಕ್ಷ್ಯಗಳ ನೈವೇದ್ಯ ಮಾಡಿ ದೇವರನ್ನು ಆರಾಧಿಸಲಾಗುತ್ತದೆ. ಈ ದಿನಗಳಲ್ಲಿ ನಂದಾದೀಪವನ್ನು ಹೆಚ್ಚುವುದು ವಿಶೇಷವಾಗಿರು ತ್ತದೆ. ಹೀಗೆ ದುರ್ಗಾದೇವಿಯ ಆರಾಧನೆಯ ವಿಶೇಷವೇ ನವರಾತ್ರಿ ಹಬ್ಬವಾಗಿರುತ್ತದೆ.

**ಶ್ರೀಮತಿ ಮಾಲತಿ ಮಹದೇವ ಪ್ರಸನ್ನ**
ವಕೀಲರು, ದಾವಣಗೆರೆ. ಮೊ: 9110665349

## ವಜ್ರೇಶ್ವರಿ ಸಂಸ್ಥೆಯಿಂದ ಹಿರಿಯ ನಾಗರಿಕರ ದಿನಾಚರಣೆ



ದಾವಣಗೆರೆ, ಅ.13 - ವಜ್ರೇಶ್ವರಿ ಮಹಿಳಾ ಸಂಸ್ಥೆಯಿಂದ ಹಿರಿಯ ನಾಗರಿಕರ ದಿನಾಚರಣೆ ಹಾಗೂ ಹಿರಿಯ ನಾಗರಿಕರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಹಿರಿಯರಾದ ಇಟಗಿ ಬಸಪ್ಪ, ಯಶೋಧಮ್ಮ ಹಾಗೂ ನಿರ್ಮಲಮ್ಮ ಇವರುಗಳನ್ನು ಸನ್ಮಾನಿಸಲಾಯಿತು.

ವಿನೂತನ ಮಹಿಳಾ ಸಮಾಜದ ರೇಖಾ ಓಂಕಾರಪ್ಪ, ಮಾಜಿ ಉಪ ಮಹಾಪೌರರಾದ ನಾಗರತ್ನಮ್ಮ ಅವರುಗಳನ್ನು ಗೌರವಿಸಲಾಯಿತು.

ಈ ಎಲ್ಲಾ ಕಾರ್ಯಕ್ರಮಗಳು ಅಧ್ಯಕ್ಷರಾದ ವಿಜಯ ಸಿ. ಅಕ್ಕಿ ಅವರ ನೇತೃತ್ವದಲ್ಲಿ ನಡೆದವು. ಸಂಸ್ಥೆಯ ನಿರ್ದೇಶಕರುಗಳಾದ ಸುಜಾತ ನಾಗೇಶ್, ಚಂದ್ರಿಕ ಜಗನ್ನಾಥ್, ಶಶಿ ಪ್ರಕಾಶ್, ಮಂಗಳ ಮಲ್ಲಿಕಾರ್ಜುನ್, ಸಾವಿತ್ರ ಗವಿಸಿದ್ದೇಶ್ವರ, ಗೀತಾ ಪ್ರಭಾಕರ್, ಮೀನಾಕ್ಷಿ, ಪದ್ಮಾ ಪರಶುರಾಮ್, ಪ್ರಸನ್ನ, ಚಂದ್ರಪ್ರಭು ಉಪಸ್ಥಿತರಿದ್ದರು.

## ದುರ್ಗೆಯ ಎಂಟನೇ ಅದ್ಭುತ

ಅಷ್ಟಮಿಗೆ ದುರ್ಗೆ ಮಹಾಗೌರಿ ರೂಪದಿ
ಕಷ್ಟಗಳ ಕಳೆವಳು ದುರ್ಗೆ ಭರದಿ
ಶಿಷ್ಟರ ರಕ್ಷಿಸಲು ಬರುವಳು ವೇಗದಿ
ದುಷ್ಟರ ಶಿಕ್ಷಿಸಲು ಅವತರಿಸಿ ಈ ರೂಪದಿ

ಕಪ್ಪು ಬಣ್ಣದ ದುರ್ಗೆ ಇವಳು
ಒಪ್ಪವಾಗಿ ಶಿವನಿಂದ ಸ್ವಚ್ಛಗೊಂಡವಳು
ತಪ್ಪನ್ನೆಲ್ಲ ತಿದ್ದಿ ರಕ್ಷಿಸುವಳು
ಅಪ್ಪುವಳು ತನ್ನ ಭಕ್ತರ ಮಾತೆಯಂತೆ

ಗಂಗೆಯ ನೀರಿನಿಂದ ಶುದ್ಧವಾದಳು
ಅಂಗನೆಯರ ಭಕ್ತಿಗೆ ಬೇಗ ಒಲಿವಳು
ಭಂಗವಿಲ್ಲದೆ ಬುದ್ಧಿ ಧ್ಯರ್ಯ ನೀಡುವಳು
ಹಿಂಗದೆ ಸಕಲ ಸೌಭಾಗ್ಯ ನೀಡುವಳು

ಸೌಮ್ಯ ಗುಣ ರೂಪದ ದೇವಿ
ಅಮ್ಮ ನಿನ್ನಾ ಕರುಣೆಗೆ ಸಾಟಿಯಿಲ್ಲದೇವಿ
ನಮ್ಮ ಮನೆಗಳಿಗೆ ದಯಮಾಡಿಸಮ್ಮ
ನಮ್ಮನೆಲ್ಲ ಮರೆಯದೆ ಸಲಹು ಮಾತೆ

**- ಕೋಮಲ ವಿ. ಕುಮಾರ್**

## ನವೋದಯ ಶಾಲೆಗೆ ಆಯ್ಕೆ



ದಾವಣಗೆರೆ, ಅ.13- ಚನ್ನಗಿರಿ ತಾಲ್ಲೂಕು ನವಿಲೇಹಾಳ್‌ನ ಇಂಡಿಯನ್ ಗ್ರೀನ್ ವೀವ್ ಕಾನ್ವೆಂಟ್‌ನ 6ನೇ ತರಗತಿಯ ಬಿ.ಎಸ್. ಕೀರ್ತನ, ಹೆಚ್.ಓ. ಧನುಶ್ರೀ, ಸ್ವಾಮಿ ವಿವೇಕಾನಂದ ಶಾಲೆಯ ಕೀರ್ತನ ಅವರುಗಳು ನವೋದಯ ಶಾಲೆಗೆ ಆಯ್ಕೆಯಾಗಿದ್ದಾರೆ. ಈ ವಿದ್ಯಾರ್ಥಿಗಳನ್ನು ಶಾಲೆಯ ಅಧ್ಯಕ್ಷ ಜಾಕೀರ್ ಹುಸೇನ್ ಮತ್ತು ಕಾರ್ಯದರ್ಶಿ ಮಹಮ್ಮದ್ ಶಫಿವುಲ್ಲಾ ಅಭಿನಂದಿಸಿದ್ದಾರೆ.

## ಕರಾಟೆ ಸ್ಪರ್ಧೆಯಲ್ಲಿ ನಿಧಿಗೆ ಪದಕ



ದಾವಣಗೆರೆ, ಅ. 13- ಶಿವಮೊಗ್ಗ ನಗರಪಾಲಿಕೆ, ಕರ್ನಾಟಕ ರಾಜ್ಯ ಕರಾಟೆ ಸಂಸ್ಥೆ ಹಾಗೂ ಶಿವಮೊಗ್ಗ ಸಿಟಿ ಕರಾಟೆ ಅಸೋಸಿಯೇಷನ್ ಸಂಯುಕ್ತಾಶ್ರಯದಲ್ಲಿ ಶಿವಮೊಗ್ಗದಲ್ಲಿ ಶಿವಮೊಗ್ಗ ದಸರಾ - 2021, ಯುವ ದಸರಾ ಪ್ರಯುಕ್ತ ಆಯೋಜಿಸಿದ್ದ ರಾಜ್ಯಮಟ್ಟದ ಕರಾಟೆ ಸ್ಪರ್ಧೆಯಲ್ಲಿ ನಗರದ ನಿಧಿ ಬೇತೂರು 11 ವರ್ಷದ 30 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿ ತೃತೀಯ ಸ್ಥಾನ ಗಳಿಸಿ ಕಂಚಿನ ಪದಕ ಪಡೆದಿದ್ದಾರೆ.

ಕೆ.ಪಿ.ಜೋಸ್ ಅವರಿಂದ ತರಬೇತಿ ಪಡೆದಿರುವ ನಿಧಿ, ನಗರದ ಅಭಿಷೇಕ್ ಬೇತೂರು ಹಾಗೂ ಶ್ರೀಮತಿ ಶ್ವೇತಾ ದಂಪತಿ ಪುತ್ರಿ.

## ಸೆಕ್ಯೂರಿಟಿ ಹುದ್ದೆಗಳಿಗೆ ಮಾಜಿ ಸೈನಿಕರಿಂದ ಅರ್ಜಿ

ದಾವಣಗೆರೆ, ಅ. 13- ಭಾರತೀಯ ಸ್ಟೇಟ್ ಬ್ಯಾಂಕ್ ಬೆಂಗಳೂರು ಇವರ ವತಿ ಯಿಂದ ಸೆಕ್ಯೂರಿಟಿ ಹುದ್ದೆಗಳಿಗಾಗಿ ಮಾಜಿ ಸೈನಿ ಕರಿಂದ (ಹವಾಲ್ದಾರ್ ಮತ್ತು ಅದಕ್ಕಿಂತ ಕೆಳಗಿನ ರ್‍ಯಾಂಕ್) ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಇದೇ ದಿನಾಂಕ 21 ಕೊನೆಯ ದಿನವಾಗಿರುತ್ತದೆ. ಆಸಕ್ತರು ಮಾಹಿತಿಯನ್ನು ಭರ್ತಿ ಮಾಡಿ ಉಪನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಶಿವಮೊಗ್ಗ ಇಲ್ಲಿಗೆ ಸಲ್ಲಿಸಬಹುದು ಹಾಗೂ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08182-220925 ಗೆ ಸಂಪರ್ಕಿಸಬಹುದು ಎಂದು ಶಿವಮೊಗ್ಗದ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.

## ಉದ್ಯೋಗಾಧಾರಿತ ಡಿಪ್ಲೋಮಾ ನೇರ ಪ್ರವೇಶಾತಿ ಅವಧಿ ವಿಸ್ತರಣೆ

ದಾವಣಗೆರೆ, ಅ. 13- ಮೈಸೂರಿನ ಸಿಪೆಟ್ ಸಂಸ್ಥೆಯಲ್ಲಿ ಪ್ರಸಕ್ತ ಸಾಲಿನ ಡಿಪ್ಲೋಮಾ ಮತ್ತು ಪೋಸ್ಟ್ ಗ್ರಾಜುಯೇಟ್ ಡಿಪ್ಲೋಮಾ ನೇರ ಪ್ರವೇಶ ಪಡೆಯಲು ಇದೇ ದಿನಾಂಕ 20 ರವರೆಗೆ ಅವಧಿ ವಿಸ್ತರಿಸಲಾಗಿದೆ.

ಡಿಪ್ಲೋಮಾ ಇನ್ ಪ್ಲಾಸ್ಟಿಕ್ಸ್ ಟೆಕ್ನಾಲಜಿ (ಡಿಪಿಟಿ) 3 ವರ್ಷ, ಡಿಪ್ಲೋಮಾ ಇನ್ ಪ್ಲಾಸ್ಟಿಕ್ಸ್ ಮೌಲ್ಡ್ ಟೆಕ್ನಾಲಜಿ (ಡಿಪಿಎಂಟಿ) 3 ವರ್ಷ ಹಾಗೂ ಪೋಸ್ಟ್ ಗ್ರಾಜುಯೇಟ್ ಇನ್ ಪ್ಲಾಸ್ಟಿಕ್ಸ್ ಪ್ರೊಸೆಸ್ಸಿಂಗ್ ಮತ್ತು ಟೆಸ್ಟಿಂಗ್ (ಪಿಜಿಡಿ-ಪಿಪಿಟಿ) 2 ವರ್ಷ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಬಹುದು.

ಎಸ್.ಎಸ್.ಎಲ್.ಸಿ, ಪಿಯುಸಿ (ವಿಜ್ಞಾನ), ಐಟಿಐ (ಫಿಟ್ಟರ್, ಟರ್ನರ್, ಮೆಕ್ಯಾನಿಸ್ಟ್) ಮತ್ತು ಬಿಎಸ್.ಸಿ ಪರೀಕ್ಷೆಯಲ್ಲಿ ತೇರ್ಗಡೆಯಾದವರು ಅಥವಾ ಹಾಜರಾದವರು ಅರ್ಜಿ ಸಲ್ಲಿಸಬಹುದು.

ವಿವರಕ್ಕೆ ದೂರವಾಣಿ ಸಂಖ್ಯೆ: 0821-2510618, 9791431827, 9480253024 9141075968 ಹಾಗೂ ವೆಬ್‌ಸೈಟ್ :www.cipet.gov.in ಕ್ಕೆ ಸಂಪರ್ಕಿಸಬಹುದು ಎಂದು ಸಿಪೆಟ್ ಸಂಸ್ಥೆಯ ನಿರ್ದೇಶಕರು ಮತ್ತು ಮುಖ್ಯಸ್ಥರಾದ ಆರ್.ಟಿ. ನಾಗರಳ್ಳಿ ತಿಳಿಸಿದ್ದಾರೆ.

**In the Court of the Hon'ble Senior Civil Judge At Harihar**

**G & W.C. No.17/2021**

Petitioners : 1. ) Kum. Eshwari G.D. D/o Late Sri Gopal Krishna D.B., Aged About 17 years, Student.
2) Master Chinmai G.D., S/o Late Sri Gopal Krishna D.B. Aged About 15 years, Student. Petitioners No. 1 & 2 Being Minors Represented by Petitioner No. 3
3) Smt. Sumangala G.D. W/o Late Sri. Gopal Krishna D.B. Aged About 45 years, Housewife
All Are Permanent Residents of Near Uramma Temple, Hosapete Beedi, Harihar Davangere District.
Currently residing at : No. 8, `Prabhath Nilaya', 1st Main, 1st Cross, Labour Colony, Harihar, Davangere District
V/s Respondent : Nil :

**Notice Under Order 5 Rule 20 (1-A) of C.P.C. 1908**

The above named petitioners have applied the above petition for getting Guardian and Wards Certificate in G & W.C. No. 17/2021, pending on the file of the Hon'ble Senior civil Judge Court at Harihar, in respect of the Petitioners No.1 and 2 and the above said Petition now stands posted to 17.11.2021 for the apperance of the Objectors and Objections, if any, along with suitable documents. It is submitted that if No objections is recevied by the Court, then, the Petitioner No.3 will be appointed as legal guardian of the Petitioners No.1 and 2 and thereby Guardian and Wards Certificate will be issued in favour of the Petitioner No.3 in respect of the Petitioners No. 1 and 2. Given under my Hand and Seal of the Court this the 11th day of October 2021

**sd/- Gangadar Patil**
Advocate for Petitioners
9th Main, M.C.C. "A" Block, Davangere.

By Order of the court
Sd/- Chief Ministerial Officer, Principal Senior Civil Judge Court, Harihara.

**In the Court of the First Additional Senior Civil Judge At Davangere.**

**Exe. 157 / 2021**

Decree Holder : Sri. B.G. Panduranga V/s
Judgment debtor : M/s Chandrika Theaters, Represented by its Partner, Sri. K.N. Murali Krishan, M/S/ Chandrika Theaters, Registered Partnership Firm Represented by its Partner, Sri. K.N. Murali Krishna S/o K.H. Nagaraj, Pushpanjali Theater, Lingeshwara Temple Road, Davangere.
Residential Address : Sri. K.N. Murali Krishna S/o K.H. Nagaraj, 3673, 10th main Road, MCC "B" Block, Davangere.

**CAUSE NOTICE TO THE JUDGMENT DEBTOR BY SUBSTITUTED SERVICE BY MEANS OF PAPER PUBLICATION**

Whereas, the above named decree holder has filed the execution petition against the judgment debtor for recovery of Rs. 8,89,511-00 and for ther reliefs in pursuance of the decree passed in O.S. 39/2007 by the Hon'ble first additional Senior Civil Judge, Davangere. The above execution petition is remanded to this hon'ble Court by the Hon'ble High court of Karnataka by virtue of the order passed in W.P. No. 12448/2017. The Judgment debtor is avoiding the service of the cause notice sent to him. Hence, this publication.

The above case is posted for appearance of the Judgment debtor to 23rd day of November 2021. The judgment debotor is called upon to take notice to appear in the above case on 23rd day of November 2021 at 11.00 am either personally or through and advocate, failing which all further proceedings will take place in your absence. Given under my hand and seal on 11th day of october 2021 at Davangere.

**Davangere**
**Date : 11.10.2021**

By Order of the court
Sd/- Chief Ministerial Officer, Principal Senior Civil Judge Court, Davangere.

# ರಾಷ್ಟ್ರಗೀತೆಯನ್ನು ನಿರ್ಭೀತಿಯಿಂದ ಹಾಡಬೇಕು

## ಹರಿಹರದಲ್ಲಿ ಜರುಗಿದ ರಾಷ್ಟ್ರಗಾನ ಅಭಿಯಾನ ಸಮಾರಂಭದಲ್ಲಿ ಶ್ರೀ ಶಾರದೇಶಾನಂದಜೀ ಮಹಾರಾಜ್



ಹರಿಹರ.ಅ, 13- ರಾಷ್ಟ್ರಕ್ಕೂ, ರಾಷ್ಟ್ರಗೀತೆಗೂ ಅವಿನಾಭಾವ ಸಂಬಂಧವಿದೆ. ಆದ್ದರಿಂದ ಎಲ್ಲರೂ ರಾಷ್ಟ್ರಗೀತೆಯನ್ನು ನಿರ್ಭೀತಿಯಿಂದ ಹಾಡಬೇಕು ಎಂದು ಹರಿಹರದ ರಾಮಕೃಷ್ಣ ವಿವೇಕಾನಂದಾಶ್ರಮದ ಅಧ್ಯಕ್ಷರಾದ ಶ್ರೀ ಶಾರದೇಶಾನಂದಜೀ ಮಹಾರಾಜ್ ತಿಳಿಸಿದರು.

ನಗರದ ಮರಿಯಾ ಸದನ ಸಭಾಂಗಣದಲ್ಲಿ ಚಿಂತನ ಪ್ರತಿಷ್ಠಾನ, ಮರಿಯಾ ನಿವಾಸ ಶಾಲೆ ಮತ್ತು ಸಪ್ತರ್ಷಿ ಯೋಗ ಕೇಂದ್ರಗಳ ಸಹಯೋಗದಲ್ಲಿ ದೇಶದ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಸ್ಮರಣೆಗಾಗಿ ಕೇಂದ್ರ ಸರ್ಕಾರದ ಸಂಸ್ಕೃತಿ ಇಲಾಖೆ ಆಯೋಜಿಸ ಲಾಗಿದ್ದ ರಾಷ್ಟ್ರಗಾನ ಅಭಿಯಾನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳು ರಾಷ್ಟ್ರಗೀತೆ ಹಾಡುವುದಕ್ಕೆ ಹೆದರಬಾರದು. ಸಾವಿರಾರು ವರ್ಷಗಳಿಂದ ಅಸಂಖ್ಯಾತ ಜನರ ಬಲಿದಾನದಿಂದ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದೆ. ರಾಷ್ಟ್ರ-ರಾಷ್ಟ್ರಗೀತೆ ಬೇರೆ ಬೇರೆ ಆಗಲು ಸಾಧ್ಯವಿಲ್ಲ. ಒಂದೊಕ್ಕೊಂದು ಸಂಬಂಧವಿದೆ ಎಂದರು.

ಕೈಗಾರಿಕೋದ್ಯಮಿ ಎಂ.ಆರ್. ಸತ್ಯನಾರಾಯಣ ಮಾತನಾಡಿ, ಎಲ್ಲದಕ್ಕೂ ವೈಶಿಷ್ಟ್ಯತೆ ಇರಬೇಕು. ಶಿಕ್ಷಕರು, ಗುರುಗಳಿಗೂ ಇದು ಅನ್ವಯವಾಗುತ್ತದೆ. ನಮಗೆ ಹೇಗೆ ವ್ಯಕ್ತಿಗತ ಗುರುತು ಇರುತ್ತದೆಯೋ ಅದೇ ರೀತಿ ರಾಷ್ಟ್ರಕ್ಕೆ ಒಂದು ರಾಷ್ಟ್ರಗೀತೆ ಇರುತ್ತದೆ. 1984ರಲ್ಲಿ ಫ್ರಾನ್ಸ್ ದೇಶದಲ್ಲಿ ವಿಶ್ವ ಕೈಗಾರಿಕೋದ್ಯಮಿಗಳ ಸಭೆ ನಡೆಯಿತು. ಆ ಸಭೆಗೆ ನಾನು ಭಾರತ ದೇಶದ ಪ್ರತಿನಿಧಿಯಾಗಿ ಹೋಗಿದ್ದೆ. ಸಭೆಯ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ಅದರಲ್ಲಿ 18 ದೇಶಗಳ ಪ್ರತಿನಿಧಿಗಳು ಅವರವರ ರಾಷ್ಟ್ರಗೀತೆಯನ್ನು ಹಾಡಬೇಕಿತ್ತು. ನಾನು ಸಹಾ ನಮ್ಮ ದೇಶದ ರಾಷ್ಟ್ರಗೀತೆಯನ್ನು ಹಾಡಿದೆ. ಅದಕ್ಕೆ ಸರಿಯಾಗಿ ಸಂಗೀತ ನುಡಿಸಲಾಯಿತು. ನನಗೆ ರಾಷ್ಟ್ರಗೀತೆ ಬರುತ್ತಿರಲಿಲ್ಲ ಎಂದಿದ್ದರೆ ಆಗ ಏನು ಆಗುತ್ತಿತ್ತು ನೀವೇ ಊಹಿಸಿ ಎಂದು ಹೇಳಿದರು.

ಮಾಜಿ ನಗರಸಭೆ ಅಧ್ಯಕ್ಷ ಬಿ. ರೇವಣಸಿದ್ದಪ್ಪ ಮತ್ತು ನಗರಸಭೆ ಸದಸ್ಯರಾದ ಶ್ರೀಮತಿ ಅಶ್ವಿನಿ ಕೃಷ್ಣ ಅವರುಗಳು ಮಾತನಾಡಿ, ಸ್ವಾತಂತ್ರ್ಯಕ್ಕೆ ಶ್ರಮಿಸಿದವರನ್ನು ನಾವು ಸ್ಮರಿಸಲೇಬೇಕು. ಅವರ ತ್ಯಾಗದಿಂದಲೇ ನಾವೆಲ್ಲಾ ಇಂದು ನೆಮ್ಮದಿಯಿಂದ ಬದುಕುತ್ತಿದ್ದೇವೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಹರಿಹರ ಆರೋಗ್ಯಮಾತೆ ಬಸಿಲಿಕದ ಪ್ರಧಾನ ಗುರುಗಳಾದ ಡಾ. ಅಂತೋನಿ ಪೀಟರ್ ಮಾತನಾಡಿ, ಭಾರತ ದೇಶ ವಿಶ್ವದ ದೇವರಗಳ ಕೋಣೆ. ಇಲ್ಲಿ ಅನೇಕ ಜಾತಿಗಳಿವೆ, ಅನೇಕ ಧರ್ಮಗಳಿವೆ, ವೈವಿಧ್ಯತೆ ಇದ್ದರೂ ಏಕತೆ ಇದೆ ಎಂದು ಮಾರ್ಮಿಕವಾಗಿ ವಿವರಿಸಿದರು.

ಚಿಂತನ ಪ್ರತಿಷ್ಠಾನ ಹಮ್ಮಿಕೊಂಡಿರುವ ರಾಷ್ಟ್ರಗೀತೆ ಗಾಯನ ಅಭಿಯಾನ ಯಶಸ್ವಿಯಾಗಲಿ, ತಾಲ್ಲೂಕಿನಾದ್ಯಂತ 50 ಸಾವಿರ ಜನರಿಂದ ಹಾಡು ಹೇಳಿಸುವ ಅವರ ಗುರಿ ಈಡೇರಲಿ ಎಂದು ತಿಳಿಸಿ ಅಭಿಯಾನಕ್ಕೆ ಪೀಟರ್ ಶುಭ ಕೋರಿದರು.

ಸಪ್ತರ್ಷಿ ಯೋಗಕೇಂದ್ರದ ಯೋಗ ಗುರು ಡಾ. ಕೆ.ಜೈಮುನಿ ಉಪಸ್ಥಿತರಿದ್ದರು. ಚಿಂತನ ಪ್ರತಿಷ್ಠಾನದ ಅಧ್ಯಕ್ಷ ಸುಬ್ರಹ್ಮಣ್ಯ ನಾಡಿಗೇರ್ ಸ್ವಾಗತಿಸಿದರು. ಶ್ರೀಮತಿ ಸೌಮ್ಯ ರಾಮಕೃಷ್ಣ ಕಾರ್ಯಕ್ರಮ ನಿರೂಪಿಸಿದರು. ಚಿಂತನ ಪ್ರತಿಷ್ಠಾನದ ಕಾರ್ಯದರ್ಶಿ ಡಿ.ಫ್ರಾನ್ಸಿಸ್ ಅವರು ರಾಷ್ಟ್ರಗೀತೆಯ ಮಹತ್ವ ವಿವರಿಸಿದರು.

ಶ್ರೀಮತಿ ಸುಪ್ರಿಯ ರಘು ದೇಶಭಕ್ತಿ ಗೀತೆಯನ್ನು ಹಾಡಿದರು. ಅವರ ಗೀತೆಗೆ ದಾವಣಗೆರೆಯ ಹಿರಿಯ ಚಿತ್ರ ಕಲಾವಿದ ಚಂದ್ರಶೇಖರ್ ಎಸ್.ಸಂಗಾ ಅವರು ತಮ್ಮ ಕುಂಚದಿಂದ ವಿವಿಧತೆಯಲ್ಲಿ ಏಕತೆ ಸಾರುವ ಸುಂದರ ಚಿತ್ರ ರಚಿಸಿದ್ದು ವಿಶೇಷವಾಗಿತ್ತು.

ರಾಷ್ಟ್ರಗೀತೆ ಗಾಯನ ಅಭಿಯಾನದಲ್ಲಿ ಮರಿಯಾ ನಿವಾಸ ಶಾಲೆಯ 100 ಕ್ಕೂ ಹೆಚ್ಚು ವಿದ್ಯಾರ್ಥಿಗಳು ರಾಷ್ಟ್ರಗೀತೆ ಹಾಡಿ ಪ್ರಮಾಣ ಪತ್ರ ಸ್ವೀಕರಿಸಿದರು.

# ಬಿ.ಎ ವಿದ್ಯಾರ್ಥಿಗಳಿಗೆ ಆಯ್ಕೆಯಲ್ಲಿ ಶಿಕ್ಷಣಶಾಸ್ತ್ರ ಸೇರಿಸುವಂತೆ ಮನವಿ



ಹರಪನಹಳ್ಳಿ

ಹರಪನಹಳ್ಳಿ, ಅ.13- ನೂತನ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನ್ವಯ ಬಿ.ಎ. ವಿದ್ಯಾರ್ಥಿಗಳಿಗೆ ವಿಷಯ ಆಯ್ಕೆಯಲ್ಲಿ ಶಿಕ್ಷಣಶಾಸ್ತ್ರ (ಎಜುಕೇಷನ್) ವಿಷಯ ಸೇರಿಸುವಂತೆ ಹರಪನಹಳ್ಳಿ ಎಂ.ಇಡಿ. ಪದವೀಧರರ ಒಕ್ಕೂಟ ಹಾಗೂ ಅಖಿಲ ಭಾರತ ಯುವಜನ ಫೆಡರೇಷನ್‌ನಿಂದ ಬಳ್ಳಾರಿಯ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿ ಸಿದ್ದು ಪಿ.ಆಲಗೂರ ಅವರಿಗೆ ಮನವಿ ಸಲ್ಲಿಸಿದರು.

ಅಖಿಲ ಭಾರತ ಯುವಜನ ಫೆಡರೇಷನ್ ರಾಜ್ಯ ಕಾರ್ಯದರ್ಶಿ ಹೆಚ್.ಎಂ.ಸಂತೋಷ್ ಮಾತನಾಡಿ, ನೂತನ ಶಿಕ್ಷಣ ನೀತಿಯ ಅನ್ವಯ ವಿಶ್ವವಿದ್ಯಾಲಯವು ಕಲಾ ವಿದ್ಯಾರ್ಥಿಗಳಿಗೆ ಸಂಯೋಜಿಸಿರುವ ವಿಷಯಗಳ ಪಟ್ಟಿಯಲ್ಲಿ ಶಿಕ್ಷಣ ಶಾಸ್ತ್ರ ವಿಷಯವು ಕಾಣದಿರುವುದು ಬೇಸರ ಮೂಡಿಸಿದೆ ಎಂದರು.

ಶಿಕ್ಷಣ ಶಾಸ್ತ್ರ ಉಪನ್ಯಾಸಕ ಮಹೇಶ್ ಮಾತನಾಡಿ, ಶಿಕ್ಷಣಶಾಸ್ತ್ರ ವಿಷಯವು ಶಿಕ್ಷಕ ವೃತ್ತಿಯಲ್ಲಿ ಆಸಕ್ತಿಯುಳ್ಳ ವಿದ್ಯಾರ್ಥಿಗಳಿಗೆ ಅನುಕೂಲಕರ ವಿಷಯವಾಗಿದ್ದು, ಆ ವೃತ್ತಿಗೆ ಸಂಬಂಧಿಸಿದಂತೆ ಜ್ಞಾನ ಮತ್ತು ಕೌಶಲ್ಯವನ್ನು ಒದಗಿಸುತ್ತಿದೆ. ಜೊತೆಗೆ ವಿದ್ಯಾರ್ಥಿಗಳ ಭವಿಷ್ಯವನ್ನು ನಿರ್ಮಾಣ ಮಾಡುತ್ತದೆ. ಈಗಾಗಲೇ ವಿ.ವಿ. ವ್ಯಾಪ್ತಿಯ ಅನೇಕ ಕಾಲೇಜುಗಳಲ್ಲಿ ಎಂ.ಇಡಿ ಪದವೀಧರರು ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರೆಲ್ಲರೂ ವಿ.ವಿ ಅಳವಡಿಸಿರುವ ವಿಷಯ ಸಂಯೋಜನೆಯ ಕುರಿತು ಆತಂಕಕ್ಕೆ ಒಳಗಾಗಿದ್ದಾರೆ. ಆದ್ದರಿಂದ ಶಿಕ್ಷಣಶಾಸ್ತ್ರ ವಿಷಯವನ್ನು ಕಲಾ ವಿದ್ಯಾರ್ಥಿಗಳಿಗೆ ಮೇಜರ್ ಮತ್ತು ಮೈನರ್ ವಿಷಯಗಳಾಗಿ ಅಧ್ಯಯನ ಮಾಡಲು ವಿಷಯ ಸಂಯೋಜನೆಯಲ್ಲಿ ಸೇರ್ಪಡೆಗೊಳಿಸಬೇಕು ಹಾಗೂ ಓಪನ್ ಎಲೆಕ್ಟಿವ್ ಪತ್ರಿಕೆಯಾಗಿ ಶಿಕ್ಷಣಶಾಸ್ತ್ರ ವಿಷಯವನ್ನು ಕೂಡ ಅಧ್ಯಯನ ಮಾಡಲು ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡಿದರು.

ಈ ವೇಳೆ ಉಪನ್ಯಾಸಕ ಜಿ. ಬಸವರಾಜು ಇದ್ದರು.

## ಕಾಂಗ್ರೆಸ್ ಪಕ್ಷಕ್ಕೆ ತೀವ್ರ ಮುಜುಗರ

**(3ನೇ ಪುಟದಿಂದ)** ನನ್ನ ಕಿವಿಯಲ್ಲಿ ಜನ ಹೀಗೆ ಮಾತನಾಡುತ್ತಿದ್ದರು, ಈ ಮಧ್ಯೆ ನೀರಾವರಿ ಇಲಾಖೆ ಹಗರಣ ವಿಚಾರವಾಗಿ ಬಿಜೆಪಿಯವರು ನಮ್ಮ ಪಕ್ಷದ ನಾಯಕರ ವಿರುದ್ಧ ಗೂಬೆ ಕೂರಿಸಲು ಈ ರೀತಿ ಆರೋಪ ಮಾಡಿದ್ದಾರೆ, ನಾನು ಅದನ್ನು ಅಲ್ಲಿಗೆ ನಿಲ್ಲಿಸಿ, ಪತ್ರಿಕಾಗೋಷ್ಠಿ ನಡೆಸಿದೆ. ಅದನ್ನು ಮಾಧ್ಯಮಗಳು ಬೇರೆ ರೀತಿ ಬಿಂಬಿಸುತ್ತಿವೆ ಎಂದು ಹೇಳಿ ತಿಪ್ಪೆ ಸಾರಿಸಲು ಪ್ರಯತ್ನಿಸಿದರು.

## ನಗರದಲ್ಲಿ ಇಂದು ಅನ್ನ ಸಂತರ್ಪಣೆ

ಕೊಂಡಜ್ಜಿ ರಸ್ತೆಯ ಶ್ರೀ ಬನ್ನಿ ಮಹಾಂಕಾಳಿದೇವಿ ಸೇವಾ ಸಮಿತಿ ವತಿಯಿಂದ ದಸರಾ ಹಬ್ಬದ ಪ್ರಯುಕ್ತ ಇಂದು ಮಧ್ಯಾಹ್ನ 12.30ಕ್ಕೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

## ಆರತಿ ಬೆಳಗಿ ಲಸಿಕೆ ಹಾಕಿಸಿದ ಅಧಿಕಾರಿಗಳು !



ಮಲೇಬೆನ್ನೂರು

ಮಲೇಬೆನ್ನೂರು, ಅ.13- ಪಟ್ಟಣದ 5ನೇ ವಾರ್ಡಿನಲ್ಲಿ ಮೊದಲನೇಯ ಡೋಸ್ ಲಸಿಕೆ ಹಾಕಿಸಿಕೊಳ್ಳದಿರುವ ನಾಗರಿಕರಿಗೆ ಉಪತಹ ಶೀಲ್ದಾರ್ ಆರ್.ರವಿ, ಪುರಸಭೆ ಮುಖ್ಯಾಧಿ ಕಾರಿ ಡೊಂಬರ್ ನೇತೃತ್ವದಲ್ಲಿ ಅಧಿಕಾರಿಗಳು, ಆರೋಗ್ಯ ಕೇಂದ್ರದ ಸಿಬ್ಬಂದಿ, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಆರತಿ ಬೆಳಗಿ ಮನವೊಲಿಸುವ ಪ್ರಯತ್ನ ಮಾಡಿದ ಘಟನೆ ಸೋಮವಾರ ನಡೆದಿದೆ.

ಪಟ್ಟಣದ ಪ್ರತಿ ವಾರ್ಡ್‌ನಲ್ಲಿ ಕೋವಿಡ್ ಲಸಿಕೆ ಹಾಕಿಸಿಕೊಳ್ಳದವರನ್ನು ಪಟ್ಟಿ ಮಾಡಿರುವ ಪುರಸಭೆಯವರು, ಸೋಮವಾರ ಅವರ ಮನೆಗಳಿಗೆ ತೆರಳಿ ಲಸಿಕೆ ಹಾಕಿಸಿಕೊಳ್ಳುವಂತೆ ಕರೆದರೂ ಬರದಿದ್ದಾಗ ಆರತಿ ಬೆಳಗಿ ಸ್ವಾಗತಿಸಿದರು. ಆಗ ಕೆಲವರು ಬಂದು ಲಸಿಕೆ ಹಾಕಿಸಿಕೊಂಡರೆ, ಇನ್ನೂ ಕೆಲವರು ನಮಗೆ ಲಸಿಕೆ ಬೇಡ ಎಂದು ಹಠ ಮಾಡಿದರು.

ಮುಂದಿನ ದಿನಗಳಲ್ಲಿ ಅಂತಹವರ ಮನವೊಲಿಸಿ, ಲಸಿಕೆ ಹಾಕಿಸುವುದಾಗಿ ಉಪತಹಶೀಲ್ದಾರ್ ರವಿ, ಪುರಸಭೆ ಮುಖ್ಯಾಧಿಕಾರಿ ಡೊಂಬಾರ್ 'ಜನತಾವಾಣಿ'ಗೆ ತಿಳಿಸಿದ್ದಾರೆ.

ಪುರಸಭೆ ಅಧಿಕಾರಿಗಳಾದ ಉಮೇಶ್, ದಿನಕರ್, ಪ್ರಭು, ನವೀನ್, ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿ ಕೊಟ್ರೇಶ್ ಮತ್ತಿತರರು ಈ ವೇಳೆ ಹಾಜರಿದ್ದರು.

ಸೋಮವಾರ ಪಟ್ಟಣದ ವಿವಿಧ ವಾರ್ಡ್‌ಗಳಲ್ಲಿ 425 ಜನರಿಗೆ ಲಸಿಕೆ ಹಾಕಲಾಗಿದೆ ಎಂದು ವೈದ್ಯಾಧಿಕಾರಿ ಡಾ.ಲಕ್ಷ್ಮಿದೇವಿ ತಿಳಿಸಿದರು.

# ಮಲೇಬೆನ್ನೂರಿನಲ್ಲಿ ಯುವಕರಿಂದ ರಕ್ತದಾನ ಶಿಬಿರ: ಮೆಚ್ಚುಗೆ



ಮಲೇಬೆನ್ನೂರು ಅ.13- ಪಟ್ಟಣದ ಶಾದಿಮಹಲ್‌ನಲ್ಲಿ ಮಹಮ್ಮದ್ ಪೈಗಂಬರ್ ಜನ್ಮದಿನ (ಈದ್ ಮಿಲಾದ್) ದ ಅಂಗವಾಗಿ ಮುಸ್ಲಿಂ ಸಮಾಜದ ಯುವಕರು ಹಮ್ಮಿಕೊಂಡಿದ್ದ ರಕ್ತದಾನ ಶಿಬಿರದಲ್ಲಿ 50 ಕ್ಕೂ ಹೆಚ್ಚು ಜನರು ರಕ್ತದಾನ ಮಾಡಿದರು.

ಸಮುದಾಯ ಆರೋಗ್ಯ ಕೇಂದ್ರದ ಸಹಕಾರದೊಂದಿಗೆ ಏರ್ಪಡಿಸಿದ್ದ ರಕ್ತದಾನ ಶಿಬಿರದಲ್ಲಿ ಸಂಗ್ರಹವಾದ ರಕ್ತವನ್ನು ಚಿಗಟೇರಿ ಜಿಲ್ಲಾ ಆಸ್ಪತ್ರೆಯ ರಕ್ತ ನಿಧಿ ಭಂಡಾರಕ್ಕೆ ನೀಡಿದರು.

ಟಿಹೆಚ್ಓ ಡಾ. ಚಂದ್ರಮೋಹನ್ ಶಿಬಿರ ಉದ್ಘಾಟಿಸಿ ಮಾತನಾಡಿ, ಯುವಕರು ಆಸಕ್ತಿ ವಹಿಸಿ ಏರ್ಪಡಿಸಿರುವ ರಕ್ತದಾನ ಶಿಬಿರ ರಾಜ್ಯಕ್ಕೇ ಮಾದರಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪುರಸಭೆ ಮುಖ್ಯಾಧಿಕಾರಿ ಡೊಂಬರ್, ವೈದ್ಯಾಧಿಕಾರಿ ಡಾ. ಲಕ್ಷ್ಮಿದೇವಿ, ಜಾಮಿಯಾ ಮಸೀದಿ ಆಡಳಿತಾಧಿಕಾರಿ ಅಬ್ದುಲ್ ಲತೀಫ್, ಮುಖಂಡ ಸೈಯದ್ ಜಾಕೀರ್, ಕೆ.ಪಿ. ಗಂಗಾಧರ್, ಭೋವಿಕುಮಾರ್, ಹಿರಿಯ ಆರೋಗ್ಯ ಸಹಾಯಕ ಎಂ. ಉಮ್ಮಣ್ಣ, ಸುಧಾ ಸೋಳಕಿ, ಆಶಾ ಕಾರ್ಯಕರ್ತೆಯರು ಮೇಲ್ವಿಚಾರಕಿ ಆಶಾ, ಕೊಕ್ಕನೂರು ವೈದ್ಯಾಧಿಕಾರಿ ಡಾ. ಖಾದರ್, ಪುರಸಭೆಯ ಪ್ರಭು, ನವೀನ್ ಇನ್ನಿತರರು ಭಾಗವಹಿಸಿದ್ದರು.

ಆರಂಭದಲ್ಲಿ ಸಮುದಾಯ ಆರೋಗ್ಯ ಕೇಂದ್ರದ ವೈದ್ಯ ಡಾ. ನಿಸಾರ್ ಅಹ್ಮದ್, ಪುರಸಭೆ ಮಾಜಿ ಸದಸ್ಯರಾದ ಎ. ಆರೀಫ್ ಅಲಿ, ದಾದಾವಲಿ, ಯೂಸುಫ್, ಶಿಕ್ಷಕ ರಜಾವುಲ್ಲಾ, ಯುವಕರಾದ ದಾದಾಪೀರ್ ಖಾನ್, ಅಯೂಬ್ ಖಾನ್, ರುಸ್ತುಂ ಅಲಿ, ಡಿ. ಭಾಷಾ, ಸಾಬೀರ್ ಅಲಿ ಮತ್ತು ಖಲೀಲ್ ಅಹಮದ್, ಸಲ್ಮಾ ದಂಪತಿ ರಕ್ತದಾನ ಮಾಡಿದರು.

## ಸಾಲ ನೀಡಿಕೆಗೆ ವಿಳಂಬ ಧೋರಣೆ ಸರಿಯಲ್ಲ

**(3ನೇ ಪುಟದಿಂದ)** ನೀಡುವ ಗುರಿಯ ಬದಲಿಗೆ, ಶೇ. 108.12 ರಷ್ಟು ಪ್ರಮಾಣದಲ್ಲಿ ಅಂದರೆ 1547.50 ಕೋಟಿ ರೂ.ಸಾಲ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ. ಶ್ರೀನಿವಾಸ್ ಚಿಂತಾಲ್ ಮಾತನಾಡಿ ಪಿಎಂಎಫ್‌ಎಂಇ ಯೋಜನೆಯಡಿ ಸಾಲಕ್ಕೆ ಅರ್ಜಿ ಸಲ್ಲಿಸಿರುವ 16 ರೈತರ ಸಿಬಿಲ್ ಸ್ಕೋರ್ ಉತ್ತಮವಾಗಿಲ್ಲ ಎಂಬ ಕಾರಣಕ್ಕೆ ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಹೆಚ್ಚಿನ ಅರ್ಜಿಗಳು ತಿರಸ್ಕತಗೊಳ್ಳುತ್ತವೆ ಎಂಬ ಕಾರಣಕ್ಕೆ ರೈತರು ಸಾಲ ಪಡೆಯುವುದಕ್ಕೆ ಮುಂದೆ ಬರುವುದೇ ಇಲ್ಲ. ಹಾಗಾಗಿ ಪಿಎಂಎಫ್‌ಎಂಇ ಯೋಜನೆ ಯಡಿ ಸಿಬಿಲ್ ಸ್ಕೋರ್ ಮಾನದಂಡಕ್ಕೆ ವಿನಾಯತಿ ನೀಡಬೇಕು ಎಂದು ಸಭೆಯ ಗಮನ ಸೆಳೆದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ವಿಜಯ ಮಹಾಂತೇಶ್ ದಾನಮ್ಮನವರ್ ಅಧ್ಯಕ್ಷತೆ ವಹಿಸಿದ್ದರು. ಆರ್‌ಬಿಐನ ಎಸ್.ಎಂ. ಪಾಠಕ್, ನಬಾರ್ಡ್ ಡಿಡಿಎಂ ರವೀಂದ್ರ, ಕೆನರಾ ಬ್ಯಾಂಕ್ ಕ್ಷೇತ್ರೀಯ ವ್ಯವಸ್ಥಾಪಕ ಜಿ.ಜಿ. ದೊಡ್ಡಮನಿ ಭಾಗವಹಿಸಿದ್ದರು.


**ಉಪ ವಿಭಾಗಾಧಿಕಾರಿಗಳ ಕಾರ್ಯಾಲಯ, ದಾವಣಗೆರೆ ಉಪವಿಭಾಗ, ದಾವಣಗೆರೆ.**

ನಂ.ಎಲ್.ಎ ಕ್ಯೂ:/ಸಿಆರ್/78/2021-22 ದಿನಾಂಕ : 12-10-2021

**ಪ್ರಕಟಣೆ**


ರಿನ್ಯೂ ಪವರ್ ಪ್ರೈವೇಟ್ ಲಿಮಿಟೆಡ್, ಗುರ್ಗಾಂವ್, ಹರಿಯಾಣ ಇವರು ಚಿತ್ರದುರ್ಗ ಜಿಲ್ಲೆ ಹಿರಿಯೂರಿನಲ್ಲಿರುವ 400/200 ಕೆ.ವಿ. ಪವರ್ ಗ್ರಿಡ್ ಉಪಕೇಂದ್ರದಿಂದ ದಾವಣಗೆರೆ ಜಿಲ್ಲೆ ಜಗಳೂರಿನಲ್ಲಿರುವ 220/33 ಕೆ.ಬಿ. ರಿನ್ಯೂ ಪವರ್ ಉಪಕೇಂದ್ರದಿಂದ ತನಕ 220 ಕೆ.ವಿ. ಇಹೆಚ್‌ಟಿ ಲೈನ್ ವಿದ್ಯುತ್ ಮಾರ್ಗ ಹಾದು ಹೋಗುವ ಜಮೀನಿನ ಮಾಲೀಕರಿಗೆ ಎಲೆಕ್ಟ್ರಿಕಲ್ ಕಾಯ್ದೆ 2003ರ ಭಾಗ 8 ಕಲಂ 67-68ರಂತೆ ಸಾರ್ವಜನಿಕ ಯೋಜನೆಗಳ ಮಾಹಿತಿ ನೀಡುವ ದೃಷ್ಟಿಯಿಂದ ಈ ಪ್ರಕಟಣೆ ನೀಡಲಾಗಿದೆ.

| ಕ್ರ.ಸಂ. | ಟವರ್ ಸಂಖ್ಯೆ | ಸ.ನಂ. | ಗ್ರಾಮ | ತಾಲ್ಲೂಕು |
|---|---|---|---|---|
| 01 | 59, 60, 61, 62, 63, 64, 65, 66, 67 | 91/1, 96/2, 94/2, 93/1, 83/1, 79/1, 79/2, 76, 74/2, 59/4, 60/4, 60/2, 60/3, 49/4, 49/2, 45/5, 45/2, 45/ಎ1, 45/4, 44 | ಬಿದರಕೆರೆ | ಜಗಳೂರು |
| 02 | 53, 54, 55, 56, 57, 58 | 14/1, 14/6, 14/9, 10, 6, 4/4, 4/2, 4/3, 43/1, 43/4, 7/1, 38/2, 43/5. | ನಿಬಗೂರು | |
| 03 | 52, 44, 45, 42, 43, 46, 47, 48, 49, 50, 51 | 106/1, 107/3ಬಿ, 107/2ಬಿ1, 107/2ಬಿ2, 13/3ಎ1, 85/8, 93/15, 93/16, 93/14, 93/17, 88/1ಪಿ8, 87/6, 87/5, 87/3, 86/7, 95/16, 96/2, 96/10, 82/6, 82/7, 82/4, 96/7, 97/4, 98/3, 100/3ಎ, 100/3ಬಿ, 100/6, 100/5, 101/7, 101/9, 101/10, 101/3, 104/8, 104/4, 104/1. | ಕಟ್ಟಿಗೆಹಳ್ಳಿ | |
| 04 | 37, 38, 39, 40, 41 | 7/2ಬಿ2, 7/4, 7/2, 7/3, 11/10, 11/3, 12/3, 12/4, 13/2, 13/10, 24/4, 23/1, 23/2, 18/1, 18/9, 19/4, 19/1, 36/1, 21. | ತೋರಣಗಟ್ಟೆ | |
| 05 | 1, 69, 70, 68, 71 | 143, 142/1, 140/3, 140/2, 140/1, 39, 38, 8/5, 8/6, 8/4, 139/5, 139/2, 139/4, 139/3, 137/1, 137/2, 136/2, 162/, 163/4, 163/3, 164/2, 120/3, 120/1, 124. | ಮಠದ ದ್ಯಾಮವ್ವನಹಳ್ಳಿ ಸಂತೆಮುದ್ದಾಪುರ | |
| 06 | 3, 4, 5, 6, 7, 8, 9, 10, 10ಎ, 11, 12,13,14, | 51/1, 26, 50, 49/3, 48, 27, 28, 62, 22/2, 22/1, 69/1, 69/3, 65/2ಬಿ2, 63, 64, 49/2ಪಿ2, 50/1ಎಫ್2, 50/1ಎಫ್1, 47, 22, 46, 228, 229, 24, 42/1, 41/4, 41/5, 41/2, 41/12, 41/8, 41/9, 41/3ಬಿ, 41 | ಸಿದ್ದಮ್ಮನಹಳ್ಳಿ ಮತ್ತು ಕಾಮಗೇತನಹಳ್ಳಿ | |
| 07 | 23, 15, 16, 17, 18, 19, 22, 20, 21 | 112/1, 112/2, 112/3, 112/4, 112/5, 188/2ಎ, 180/1ಬಿ, 180/2, 180/3, 179/1, 179/2, 178/1ಎಪಿ1, 154/2, 155/4, 136/2ಬಿ, 121/7, 113/3, 115, 114/1, 116/1, 117/2, 110/2, 110/1, 110/4, 117/11 | ದೊಣೆಹಳ್ಳಿ | |
| 08 | 24, 23 | 6/5, 6/6, 6/1, 88/2ಬಿ2, 88/2ಬಿ1, 7/1, 7/4, 7/3, 7/2, 6/4 | ಹೊನ್ನೆಮರಡಿ | |
| 09 | 35, 36 | 113/2, 113/1, 112/2, 122/3, 112/7, 112/6, 6/1 | ಕಲ್ಲೇದೇವಪುರ | |
| 10 | 25, 26, 32, 33, 30, 31, 27, 28, 29, 34 | 92/4, 92/3, 88/5, 88/11, 91/7, 91/2, 91/4, 88/10, 88/8, 88/9, 88/2ಎ1, 88/2ಎ2, 133/5, 133, 133/6, 133/7, 136/1, 120/3ಎ4, 152, 131/1, 132/3, 119/4, 119/8, 119/3, 120/3ಬಿ1, 120, 136/2, 136/3, 136, 140/3 | ಜಮ್ಮಾಪುರ | |
| 11 | 10ಎ, 11, 12 | 22, 46, 228, 229, 24/1 | ಭರಮಸಮುದ್ರ | |

ಎಲೆಕ್ಟ್ರಿಕಲ್ ಕಾಯ್ದೆ 2003ರ ಭಾಗ 8 ಕಲಂ 67-68ರಂತೆ ಸದರಿ ಯೋಜನೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಉಪವಿಭಾಗಾಧಿಕಾರಿಗಳು, ದಾವಣಗೆರೆ ಉಪವಿಭಾಗ ದಾವಣಗೆರೆ ಇವರ ಕಚೇರಿಗೆ ಮೇಲ್ಕಂಡ ಸ.ನಂ.ಗಳ ಮಾಲೀಕರು ಈ ಪ್ರಕಟಣೆ ಪ್ರಕಟವಾದ 7 ದಿನಗಳ ಒಳಗಾಗಿ ಲಿಖಿತವಾಗಿ ಸಲ್ಲಿಸಲು ತಿಳಿಸಿದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಚೇರಿಗೆ ಭೇಟಿ ನೀಡಿ ಮಾಹಿತಿ ಪಡೆಯತಕ್ಕದ್ದು.

ಸಹಿ/-
ಉಪವಿಭಾಗಾಧಿಕಾರಿಗಳು,
ದಾವಣಗೆರೆ ಉಪವಿಭಾಗ, ದಾವಣಗೆರೆ


# ಗ್ರಾ.ಪಂ. ಅಧ್ಯಕ್ಷರನ್ನು ಮತದಾರರೇ ಆಯ್ಕೆ ಮಾಡುವ ವಿಧಾನ ಜಾರಿಗೆ ಬರಬೇಕು



ಹರಪನಹಳ್ಳಿಯಲ್ಲಿ ಕೆ.ಸಿ. ಕೊಂಡಯ್ಯ

ಹರಪನಹಳ್ಳಿ, ಅ.13- ಗ್ರಾಮ ಪಂಚಾಯಿತಿ ಅಧ್ಯಕ್ಷರನ್ನು ಮತದಾರರೇ ಆಯ್ಕೆ ಮಾಡುವ ವಿಧಾನ ಜಾರಿಗೆ ಬರಬೇಕು ಎಂದು ವಿಧಾನ ಪರಿಷತ್ ಸದಸ್ಯ ಕೆ.ಸಿ. ಕೊಂಡಯ್ಯ ಹೇಳಿದರು.

ತಾಲ್ಲೂಕಿನ ದೇವರ ತಿಮ್ಮಲಾಪು ರದ ಶ್ರೀ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಜರುಗಿದ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿ, ಗ್ರಾಮ ಪಂಚಾಯಿ ತಿಗಳ ಸಬಲೀಕರಣಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಸಾಕಷ್ಟು ಅನುದಾನ ನೀಡಲಾಗು ತ್ತಿದ್ದು, ಗ್ರಾಮ ಪಂಚಾಯಿತಿಯಲ್ಲಿ ಗ್ರಾಮದ ಅಭಿವೃದ್ಧಿಗಾಗಿ ಬಜೆಟ್ ತಯಾರು ಮಾಡಿ ಗ್ರಾಮದ ಅಭಿವೃದ್ಧಿ ಮಾಡಬೇಕು. ಆ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿ ಸದಸ್ಯರಿಗೆ ಪೂರ್ಣ ಪ್ರಮಾಣದ ಅಧಿ ಕಾರ ನೀಡಬೇಕು. ಗ್ರಾಮ ಪಂಚಾಯಿತಿ ಅಧ್ಯಕ್ಷರ ಅವಧಿಯನ್ನು 5 ವರ್ಷಗಳಿಗೆ ಏರಿಸಬೇಕು ಎಂದರು.

ಗ್ರಾ.ಪಂ. ಸದಸ್ಯರಿಗೆ ಮತದಾನದ ಹಕ್ಕು ಕೊಡಿಸಿದ್ದಲ್ಲದೇ ನಾನು ವಿಧಾನ ಪರಿಷತ್ ಸದಸ್ಯನಾದ ಮೇಲೆ ಗ್ರಾಮ ಪಂಚಾಯ್ತಿಗಳಿಗೆ ಹೆಚ್ಚಿನ ಅಧಿಕಾರ ನೀಡುವಂತೆ ಸರ್ಕಾರದ ಮಟ್ಟದಲ್ಲಿ ಸದನದಲ್ಲಿ ನಿರಂತರ ಹೋರಾಟ ಮಾಡುತ್ತಿದ್ದೇನೆ ಎಂದು ಹೇಳಿದರು.

ಹಡಗಲಿಯ ಮಾಜಿ ಶಾಸಕ ನಂದಿಹಳ್ಳಿ ಹಾಲಪ್ಪ ಮಾತನಾಡಿ, ಕೆ.ಸಿ. ಕೊಂಡಯ್ಯನವರು ಪಂಚಾಯತ್ ರಾಜ್ಯ ವ್ಯವಸ್ಥೆಗೆ ಪೂರಕವಾಗಿ ಸಾಕಷ್ಟು ಕೆಲಸ ಮಾಡಿದ್ದು, ರಾಜ್ಯ ಸಭೆ ಹಾಗೂ ಲೋಕಸಭೆಯಲ್ಲಿ ಜನಪರ ಕೆಲಸ ಮಾಡಿದ ಅನುಭವ ಅವರಿಗಿದ್ದು, ನಮ್ಮಂತಹ ಅನೇಕ ರಾಜಕಾರಣಿಗಳಿಗೆ ಮಾರ್ಗದರ್ಶಕರಾಗಿದ್ದಾರೆ ಎಂದರು.

ಕೆಪಿಸಿಸಿ ಮಹಿಳಾ ಪ್ರಧಾನ ಕಾರ್ಯದರ್ಶಿ ಎಂ.ಪಿ.ಲತಾ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೇಲೂರು ಅಂಜಪ್ಪ, ಕೆಪಿಸಿಸಿ ಮಾಧ್ಯಮ ವಿಶ್ಲೇಷಕರಾದ ಎಂ.ಪಿ.ವೀಣಾ ಮಹಂ ತೇಶ್, ತಾಲ್ಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ಮತ್ತೂರು ಬಸವರಾಜ್, ಚಿಗಟೇರಿ ಯುವ ಕಾಂಗ್ರೆಸ್ ಅಧ್ಯಕ್ಷ ಹರಿಯಮ್ಮನ ಹಳ್ಳಿ ಶಿವರಾಜ್, ಪುರಸಭೆ ಸದಸ್ಯರುಗಳಾದ ಟಿ. ವೆಂಕಟೇಶ್, ಎಂ.ವಿ.ಅಂಜಿನಪ್ಪ, ಡಿ. ಅಬ್ದುಲ್ ರಹಿ ಮಾನ್ ಸಾಬ್, ಗೊಂಗಡಿ ನಾಗರಾಜ್, ಲಾಟಿ ದಾದಾ ಪೀರ್ ಮುಖಂಡರುಗಳಾದ ಡಾ. ಉಮೇಶ್ ಬಾಬು, ಆಲದಹಳ್ಳಿ ಷಣ್ಮುಖಪ್ಪ, ಎಂ. ರಾಜಶೇಖರ್, ಬಿ.ಕೆ.ಪ್ರಕಾಶ್, ಡಾ.ಕೆ.ಬಿ. ಕೊಟ್ರೇಶ್, ಕಾನಹಳ್ಳಿ ರುದ್ರಪ್ಪ, ಉದಯಶಂಕರ್, ಎಚ್.ವಸಂತಪ್ಪ, ಬಸಾಪುರ ಮಂಜು ನಾಥ, ಪೂಜಾರ ಮರಿಯಪ್ಪ, ತಿಮ್ಮಾರೆಡ್ಡಿ, ಹಾರಕನಾಳು ಪ್ರಕಾಶಗೌಡ, ದುಗ್ಗಾವತ್ತಿ ಮಂಜುನಾಥ್, ಶ್ರೀಕಾಂತ್ ಯಾದವ್, ಶೃಂಗಾರತೋಟ ಬಸವರಾಜ್, ರಿಯಾಜ್, ಜಟ್ಟೆ ಪ್ಪರ ಮಂಜುನಾಥ್, ಈಶ ಹಾಗೂ ಮತ್ತಿತರರಿದ್ದರು.

# ಶಿಕ್ಷಣ ಎನ್ನುವುದು ಕೇವಲ ಅಂಕಗಳಿಗೆ ಮಾತ್ರ ಸೀಮಿತ

## ಹರಿಹರದ ಸಂತ ಅಲೋಶಿಯಸ್ ಪದವಿ ಪೂರ್ವ ಕಾಲೇಜಿನ ಕಾರ್ಯಕ್ರಮದಲ್ಲಿ ಬ್ರಹ್ಮಾಕುಮಾರಿ ಲೀಲಾಜಿ ವ್ಯಾಕುಲತೆ



ದಾವಣಗೆರೆ, ಅ.13- ಪ್ರಾಚೀನ ಕಾಲ ದಲ್ಲಿ ಗುರುಕುಲಗಳಲ್ಲಿ ನೈತಿಕ ಮೌಲ್ಯಗಳೊಂ ದಿಗೆ ಶಿಕ್ಷಣ ನಡೆಯುತ್ತಿತ್ತು. ಆದರೆ ಪ್ರಸ್ತುತ ದಿನಗಳಲ್ಲಿ ಶಿಕ್ಷಣ ಎನ್ನುವುದು ಕೇವಲ ಅಂಕಗಳಿಗೆ ಮಾತ್ರ ಸೀಮಿತವಾಗುತ್ತಿದೆ ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿದ್ಯಾಲಯದ ದಾವಣಗೆರೆ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ವ್ಯಾಕುಲತೆ ವ್ಯಕ್ತಪಡಿಸಿದರು.

ಇಲ್ಲಿನ ಸಂತ ಅಲೋಶಿಯಸ್ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಇಂದು ಹೆಚ್ಚಿನ ಶಿಕ್ಷಣ ಸಂಸ್ಥೆಗಳು ಮೌಲ್ಯಯುತ ಶಿಕ್ಷಣಕ್ಕೆ ಆದ್ಯತೆ ನೀಡುತ್ತಿಲ್ಲ. ಶಿಕ್ಷಕರದ್ದು ಕೇವಲ ವೇತನಕ್ಕಾಗಿ ದುಡಿಮೆ ಎಂಬ ವಾತಾವರಣ ನಿರ್ಮಾಣವಾಗುತ್ತಿದೆ ಎಂದು ಅಭಿಪ್ರಾಯಪಟ್ಟರು.

ವೇದಿಕೆಯಲ್ಲಿ ಉಪಸ್ಥಿತರಿದ್ದ ಕಾಲೇಜು ಪ್ರಾಂಶುಪಾಲ ಬ್ಯಾಪ್ಟಿಸ್ಟ್ ಸನ್ನಿ ಗುಡಿನ್ಹೊ ರವರು ಮಾತನಾಡಿ, ಯುವಕರಲ್ಲಿ ನಾಯಕತ್ವ ಗುಣಗಳು ಇರಬೇಕು. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಶಿಕ್ಷಣದೊಂದಿಗೆ ಕ್ರಿಯಾತ್ಮಕತೆ ಹಾಗೂ ಸೃಜನ ಶೀಲ ಗುಣಗಳನ್ನು ಹೊಂದಿದ ವರು ಮಾತ್ರ ಗೆಲ್ಲಲು ಸಾಧ್ಯ ಎಂದು ಹೇಳಿದರು.

ಕಾಲೇಜಿನ ಮುಖ್ಯಸ್ಥ ಫಾ. ಎರಿಕ್ ಮಥಾಯಸ್, ಉಪ ಪ್ರಾಂಶುಪಾಲರಾದ ಶ್ರೀಮತಿ ಪುಷ್ಪಲತಾ ಅರಸ್ ಹಾಗೂ ಮೌಸಿನ್ ಉಲ್ಲಾ, ಪ್ರಿನ್ಸಿ ಫ್ಲಾವಿಯಾ ಪಿಂಟೋ ಹಾಗೂ ಕಾರ್ಯಕ್ರಮ ಸಂಯೋಜಕರಾದ ವಿಲಿಶಾ ಡಿಸೋಜಾ, ವಿದ್ಯಾರ್ಥಿ ನಾಯಕ ಆದಿಲ್ ಉಪಸ್ಥಿತರಿದ್ದರು.

## ಜೈನ್ ಲೇಔಟ್‌ನಲ್ಲಿ ನವರಾತ್ರಿ ಭಜನೆ




ದಾವಣಗೆರೆ, ಅ.13 - ನಗರದ ಜೈನ್ ಲೇಔಟ್‌ನ ಬನ್ನಿ ಮಹಾಂಕಾಳಿ ದೇವಸ್ಥಾನದಲ್ಲಿ ಸಂಗೀತ ಸುಧಾ ಗ್ರೂಪ್‌ನಿಂದ ನವರಾತ್ರಿ ಅಂಗವಾಗಿ ಲಲಿತ ಸಹಸ್ರನಾಮ ಭಜನೆ ಹಾಗೂ ದೇವಿಗೆ ಉಡಿ ತುಂಬುವ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಲೇಔಟ್‌ನ ಸುಧಾ ಕೃಷ್ಣ ಮೂರ್ತಿ, ಪೂರ್ಣಿಮಾ, ಚಂದ್ರಕಲಾ, ಸುಧಾ, ಪುಷ್ಪ, ರೂಪಾ, ಶೈಲ ಮತ್ತು ಇತರರು ಭಾಗವಹಿಸಿದ್ದರು.

## ನಗರದಲ್ಲಿ ಇಂದು 'ಸಲಗ' ಚಿತ್ರ ಬಿಡುಗಡೆ

ದುನಿಯಾ ವಿಜಯ್ ನಟಿಸಿ, ನಿರ್ದೇಶಿಸಿರುವ 'ಸಲಗ' ಚಿತ್ರ ಇಂದು ಅಶೋಕ ಚಿತ್ರಮಂದಿರದಲ್ಲಿ ಬಿಡುಗಡೆಯಾಗಲಿದ್ದು, ದುನಿಯಾ ವಿಜಯ್ ಅಭಿಮಾನಿಗಳ ಸಂಘದಿಂದ ಬೆಳಿಗ್ಗೆ 6.30 ಕ್ಕೆ ಫ್ಯಾನ್ಸ್ ಶೋ ಆಯೋಜಿಸಲಾಗಿದೆ.

ಮಾಸ್ತಿ ಗುಡಿ ಚಿತ್ರೀಕರಣದ ಸಂದರ್ಭದಲ್ಲಿ ನಿಧನರಾದ ದಿ॥ ಅನಿಲ್, ದಿ॥ ಉದಯ್ ಅವರಿಗೆ 9.30 ಕ್ಕೆ ವಿಶೇಷ ಪೂಜೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಜೆ.ಎನ್. ವೆಂಕಟೇಶ್, ಹೆಚ್.ಎಸ್.ದೊಡ್ಡೇಶ್ ತಿಳಿಸಿದ್ದಾರೆ. ಪಾಲಿಕೆ ಸದಸ್ಯರಾದ ಜೆ.ಎನ್. ಶ್ರೀನಿವಾಸ್, ಮಾಜಿ ಮೇಯರ್ ಬಿ.ಜಿ. ಅಜಯ್‌ಕುಮಾರ್, ಎಸ್. ಅಜಯ್, ಚೇತನ್, ಮೈಲಾರಿ ಎಂ., ವಾಸು ವಿ., ಶಂಕರ್ ಎರೇಸೀಮೆ, ರಮೇಶ್ ಜರೇಕಟ್ಟೆ, ಮುತ್ತು, ಮಂಜು, ಕಿಟ್ಟಿ, ರಘು, ಗಣೇಶ್, ಭರತ್, ಬಿ.ಟಿ. ಬಸವರಾಜ್, ಜೀವನ್ ಭಾಗವಹಿಸಲಿದ್ದಾರೆ.

# ಭದ್ರಾದಿಂದ ವಾಣಿ ವಿಲಾಸಕ್ಕೆ ನೀರು ಹರಿಸುವುದನ್ನು ನಿಲ್ಲಿಸಬೇಕು



ಭಾರತೀಯ ರೈತ ಒಕ್ಕೂಟದ ಜಿಲ್ಲಾ ಘಟಕದಿಂದ ಸಿಎಂಗೆ ಮನವಿ

ದಾವಣಗೆರೆ, ಅ.13- ಭದ್ರಾದಿಂದ ವಾಣಿ ವಿಲಾಸಕ್ಕೆ ನೀರು ಹರಿಸುವುದನ್ನು ನಿಲ್ಲಿಸುವುದು, ಭದ್ರಾ ಮೇಲ್ದಂಡೆ ಮತ್ತು ಎತ್ತಿನ ಹಳ್ಳ ಯೋಜನೆಗಳ ಪರಿಷ್ಕರಣೆ ಸೇರಿದಂತೆ ಇನ್ನಿತರೆ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಭಾರತೀಯ ರೈತ ಒಕ್ಕೂಟದ ಜಿಲ್ಲಾ ಘಟಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿತು.

ನಿನ್ನೆ ನಗರಕ್ಕಾಗಮಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿದ ಭಾರತೀಯ ರೈತ ಒಕ್ಕೂಟದ ಜಿಲ್ಲಾಧ್ಯಕ್ಷ ಎಚ್.ಆರ್. ಲಿಂಗರಾಜ್, ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಸೇರಿದಂತೆ ಇತರರು ಮನವಿ ಪತ್ರ ಸಲ್ಲಿಸಿದರು.

ನೀರಿಗಾಗಿ ಭದ್ರಾ ಮೇಲ್ದಂಡೆ ಯೋಜನೆ ಚರ್ಚೆಯಲ್ಲಿ ಹಾಲಿ ಭದ್ರಾ ಅಚ್ಚುಕಟ್ಟು ಭಾಗಿದಾರರು ಮತ್ತು ಸಂಬಂಧ ಪಟ್ಟ ಅಧಿಕಾರಿಗಳು ಮತ್ತು ಅಂದಿನ ಅಧಿಕಾರಿಗಳ ನೇತೃತ್ವದಲ್ಲಿ ಚರ್ಚೆ ನಡೆದು ಅಂತಿಮವಾಗಿ ತೀರ್ಮಾನಿಸಿದ ಯಾವುದೇ ಷರತ್ತುಗಳು ಪಾಲನೆಯಾಗಿಲ್ಲ. ತುಂಗಾ ಅಣೆಕಟ್ಟೆಯಿಂದ ನೀರನ್ನು ಎತ್ತಿ ಭದ್ರಾಕ್ಕೆ ಹರಿಸಿ ಭದ್ರಾದಲ್ಲಿ ಸಿಗುವ 6 ಟಿ.ಎಂ.ಸಿ. ಜೊತೆಗೆ 180 ಅಡಿ ಮೇಲೆ ತೂಬಿನಿಂದ ಕಾಲುವೆಗೆ ನೀರು ಹರಿಸಲು ತೀರ್ಮಾನಿಸಿತ್ತು , ಇದೇನೂ ಆಗಿಲ್ಲ. ಬದಲಾಗಿ 2 ವರ್ಷಗಳಿಂದ ಭದ್ರಾ ಅಣೆಕಟ್ಟೆಯಿಂದಲೇ 700 ಕ್ಯೂಸೆಕ್ ನೀರನ್ನು ಹರಿಸಲಾಗುತ್ತಿದೆ . ಅಣೆಕಟ್ಟು ತುಂಬಿದಾಗ ನಮ್ಮ ಅಭ್ಯಂತರವಿಲ್ಲ. 1 ಟಿಎಂಸಿ ನೀರು ಅಣೆಕಟ್ಟೆಯಿಂದ ವಾಣಿ ವಿಲಾಸಕ್ಕೆ ಹರಿಸಲಾಗಿದೆ . ಇನ್ನೂ ಮುಂದೆ ಹರಿಸಿದರೆ ನಮಗೆ ತೊಂದರೆಯಾಗುತ್ತದೆ. ಭದ್ರಾದಿಂದ ವಾಣಿ ವಿಲಾಸಕ್ಕೆ ನೀರು ಹರಿಸುವುದನ್ನು ನಿಲ್ಲಿಸಿ ಮುಂದೆ ಆಗಬಹುದಾದ ಘರ್ಷಣೆಯನ್ನು ತಪ್ಪಿಸಬೇಕು.

ತುಂಗಾದಿಂದ ಎತ್ತುವ ಮತ್ತು ಭದ್ರಾದಿಂದ ಎತ್ತುವ ನೀರನ್ನು ಸುರಂಗಗಳು, ಪಂಪ್‌ಗಳು, ಭೂಸ್ವಾಧೀನ ಎಲ್ಲವನ್ನು ತಪ್ಪಿಸಲು ತುಂಗಾದಿಂದ ಎತ್ತುವ ನೀರನ್ನು ಮತ್ತು ಭದ್ರಾದ ಹೆಚ್ಚುವರಿ ನೀರನ್ನು ವಾಣಿವಿಲಾಸ ಸಾಗರಕ್ಕೆ ಹರಿಸಬೇಕು, ಎತ್ತಿನಹಳ್ಳ ನೀರು ಕೇವಲ 50 ಕಿ.ಮೀ. ಕಾಲುವೆ ಮೂಲಕ ಹರಿಸಿ ಕಡೂರಿನ ಪಕ್ಕದಲ್ಲಿರುವ ವೇದಾವತಿ ಉಪ ಹಳ್ಳಕ್ಕೆ ಹರಿಸಿದರೆ ಅದು ಕೂಡ ವಾಣಿ ವಿಲಾಸಕ್ಕೆ ಸೇರುತ್ತದೆ. ಅಪಾರ ಪ್ರಮಾಣದ ಹಣ ಉಳಿಯುತ್ತದೆ ಎಂದರು.

ಬೆಂಬಲ ಬೆಲೆ ಖರೀದಿ ಬಗ್ಗೆ ಈಗಿನ ಪ್ರತಿ ರೈತನಿಂದ ಪಡೆಯುವ ಧಾನ್ಯದ ಹಾಸ್ಯ ಕಾರಕ ಮಿತಿಯನ್ನು ಕೂಡಲೇ ರದ್ದುಗೊಳಿಸಬೇಕು, ಭಾರತ ಆಹಾರ ನಿಗಮದಿಂದ ಕರ್ನಾಟಕದಲ್ಲಿ ಖರೀದಿ ಕೇಂದ್ರ ತೆರೆಯಬೇಕು. ಪ್ರತಿ ಕ್ವಿಂಟಾಲ್ ಭತ್ತಕ್ಕೆ ಛತ್ತೀಸ್‌ಘಡ ಮಾದರಿಯಲ್ಲಿ ಕನಿಷ್ಠ 2,250 ಬೋನಸ್ ಘೋಷಿಸಿ ಬೆಂಬಲ ಬೆಲೆಗೆ ಸೇರಿಸಬೇಕು, ಕನಿಷ್ಠ 10 ಲಕ್ಷ ಟನ್ ಭತ್ತವನ್ನು ಕರ್ನಾಟಕದಿಂದ ಖರೀದಿಸಲು ಭಾರತ ಆಹಾರ ನಿಗಮಕ್ಕೆ ಒಪ್ಪಿಸಬೇಕು.

ಭದ್ರಾ ಡ್ಯಾಂ ನಲ್ಲಿ ಕ್ರೆಸ್ಟ್ ಗೇಟ್‌ಗಳಿಂದ ನೀರು ನದಿಗೆ ಧುಮುಕುವ ಗೇಟ್‌ಗಳಿಂದ ಕೆಳ ಭಾಗದಲ್ಲಿ 2 ವರ್ಷಗಳಿಂದ ಮಾಡಿದ ಸ್ಪಿಲ್ಲಿಂಗ್ ಬೇಸಿನ್ 2018 ರಲ್ಲಿ ವಿಶ್ವ ಬ್ಯಾಂಕಿನ ಹಣದಿಂದ 7 ಕೋಟಿ ಮಂಜೂರು ಮಾಡಿಸಿ ಕಾಮಗಾರಿ ಮಾಡಿದ ಸ್ಪಿಲ್ಲಿಂಗ್ ಬೇಸಿನ್ ಮಾಡಿದ ಕೆಲವೇ ಗಂಟೆಗಳಲ್ಲಿ ನೀರಿಗೆ ಕೊಚ್ಚಿ ಹೋಗಿದೆ . ಇದುವರೆಗೂ ಸಂಬಂಧ ಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿಲ್ಲ . ಇದನ್ನು ನೋಡಿದರೆ ಭಾರೀ ಭ್ರಷ್ಟಾಚಾರವಾಗಿದೆ . ಆದ್ದರಿಂದ ತನಿಖೆ ಮಾಡಿ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡು ರೈತರಿಗೆ ನ್ಯಾಯ ದೊರಕಿಸಬೇಕು.

2006-07 ರಲ್ಲಿ ನಾಲೆಗಳ ಆಧುನೀಕರಣ ಮಾಡಿದೆ. ಇದುವರೆಗೂ ನಾಲೆಯ ಹೂಳನ್ನು ತೆಗೆಸಿಲ್ಲ. ಆಧುನೀಕರಣದ ಕೆಲ ಭಾಗ ದುರಸ್ಥಿಯಾಗಿದೆ. ಇದುವರೆಗೂ ಸರಿಪಡಿಸಿಲ್ಲ. ಮುಖ್ಯ ನಾಲೆಗಳಲ್ಲಿ ಗೇಟ್‌ಗಳನ್ನು ರಿಪೇರಿ ಮಾಡಿಲ್ಲ. ಕೊನೆ ಭಾಗದ 30 ಸಾವಿರ ಎಕರೆ ಜಮೀನು ನೀರಿಲ್ಲದೆ ವಂಚಿತವಾಗಿದೆ. ನಾಲೆಗಳ ಪಕ್ಕದಲ್ಲಿರುವ ರಸ್ತೆಗಳನ್ನು ಮೆಟ್ಟಿಂಗ್ ಮಾಡಿ ಟಾರ್ ರಸ್ತೆಗಳನ್ನು ಮಾಡುವುದು ಹಾಗೂ ನ್ಯಾಯಾಲಯದ ಆದೇಶವಿದ್ದರೂ ಸಹ ಅಕ್ರಮವಾಗಿ ಅಳವಡಿಸಿರುವ ಪಂಪ್ ಸೆಟ್‌ಗಳನ್ನು ತೆರವುಗೊಳಿಸಿರುವುದಿಲ್ಲ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಬೇಕು, ಅಪ್ಪರ್ ಭದ್ರಾ ಸ್ಕೀಮ್‌ನಲ್ಲಿ ತುಂಗಾದಿಂದ ಭದ್ರೆಗೆ ನೀರನ್ನು ಎತ್ತಿ ನೀರನ್ನು ಹರಿಸಬೇಕು. ಭದ್ರಾದಿಂದ ನೀರನ್ನು ಕೊಟ್ಟರೆ ಭದ್ರಾ ರೈತರು ವಂಚಿತರಾಗುತ್ತಾರೆ. ಈ ಬಗ್ಗೆ ಗಮನ ಹರಿಸಬೇಕು ಎಂದು ಕೋರಿದ್ದಾರೆ.

## ನಗರದಲ್ಲಿ ಮದಕರಿ ನಾಯಕ ಜಯಂತೋತ್ಸವ



ದಾವಣಗೆರೆ, ಅ.13- ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ವತಿಯಿಂದ ರಾಜವೀರ ಮದಕರಿ ನಾಯಕ ಜಯಂತ್ಯೋತ್ಸವವನ್ನು ಇಂದು ನಗರದಲ್ಲಿ ಆಚರಿಸಲಾಯಿತು.

ರಾಜವೀರ ಮದಕರಿ ನಾಯಕ ವೃತ್ತ (ಹೊಂಡದ ಸರ್ಕಲ್)ದಲ್ಲಿ ರುವ ರಾಜವೀರ ಮದಕರಿ ನಾಯಕ ಕಂಚಿನ ಪ್ರತಿಮೆಗೆ ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷರೂ ಆದ ನಗರಸಭೆ ಮಾಜಿ ಅಧ್ಯಕ್ಷ ಬಿ. ವೀರಣ್ಣ ಮಾಲಾರ್ಪಣೆ ಮಾಡಿದರು.

ಇದೇ ಸಂದರ್ಭದಲ್ಲಿ ಸಾರ್ವಜನಿಕರಿಗೆ ಸಿಹಿ ವಿತರಿಸಲಾಯಿತು.

ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್, ವಕೀಲ ಎನ್.ಎಂ. ಆಂಜನೇಯ ಗುರೂಜಿ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ, ಮಹಾನಗರ ಪಾಲಿಕೆ ಸದಸ್ಯರೂ ಆದ ಜಿಲ್ಲಾ ವಾಲ್ಮೀಕಿ ಯುವ ಘಟಕದ ಜಿಲ್ಲಾಧ್ಯಕ್ಷ ವಿನಾಯಕ ಪೈಲ್ವಾನ್, ಎಸ್.ಟಿ ನೌಕರರ ಸಂಘದ ಅಧ್ಯಕ್ಷ ಶ್ರೀನಿವಾಸ ನಾಯಕ, ಮುಖಂಡರುಗಳಾದ ಮಾಯಕೊಂಡ ಯೋಗೀಶ್, ಸತೀಶ್, ಕುಮಾರ್, ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಕೊಮಾರನಹಳ್ಳಿಯಲ್ಲಿ ನಾಳೆ ಲಕ್ಷ್ಮಿರಂಗನಾಥಸ್ವಾಮಿ ರಥೋತ್ಸವ

ಮಲೇಬೆನ್ನೂರು, ಅ.13- ಕೊಮಾರನಹಳ್ಳಿ ಗ್ರಾಮದಲ್ಲಿ ವಿಜಯದಶಮಿ ಅಂಗವಾಗಿ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಯ ರಥೋತ್ಸವವು ನಾಡಿದ್ದು ದಿನಾಂಕ 15ರ ಶುಕ್ರವಾರ ಮಧ್ಯಾಹ್ನ 12ಕ್ಕೆ ಸರಳವಾಗಿ ಜರುಗಲಿದೆ.

# ವ್ಯವಹಾರದ ಜೊತೆಗೆ ಸಾಮಾಜಿಕ ಸೇವೆ ಅಗತ್ಯ



**ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ ಕಾರ್ಯಕ್ರಮದಲ್ಲಿ ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್ ಆಶಯ**

ದಾವಣಗೆರೆ, ಅ.13- ನಾವು ಜಗತ್ತಿಗೆ ತಂದೆ-ತಾಯಿಗಳಿಂದ ಬಂದರೂ, ಪ್ರಕೃತಿಯು ನಮಗೆಲ್ಲಾ ಉಚಿತವಾಗಿ ಗಾಳಿ, ನೀರು, ಬೆಳಕು ಕೊಟ್ಟಿದೆ. ಅದರ ಋಣ ತೀರಿಸುವ ಹೊಣೆ ನಮ್ಮ ಮೇಲಿರುತ್ತದೆ. ಹಾಗಾಗಿ ನಮ್ಮ ದುಡಿಮೆಯಲ್ಲಿ ಸ್ವಲ್ಪವನ್ನಾದರೂ ಸಹಾಯ ಮಾಡಬೇಕು ಎಂದು ನಗರ ಪಾಲಿಕೆ ಮಾಜಿ ಮಹಾಪೌರರೂ ಆಗಿರುವ ಹಾಲಿ ಸದಸ್ಯ ಬಿ.ಜಿ. ಅಜಯ್ ಕುಮಾರ್ ಆಶಯ ವ್ಯಕ್ತಪಡಿಸಿದರು.

ನಗರದ ಅಕ್ಕಮಹಾದೇವಿ ಶಾಲಾ ಆವರಣದಲ್ಲಿ ಇಂದು ನಡೆದ ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಶಾಲೆಗಳಲ್ಲಿನ ಅನುದಾನ ರಹಿತ ಶಿಕ್ಷಕ ಸಿಬ್ಬಂದಿ ವರ್ಗದವರಿಗೆ ಕೋವಿಡ್-19 ಪ್ರಯುಕ್ತ ಆಹಾರದ ಕಿಟ್ ವಿತರಣಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಹಾಗೂ ಆಹಾರದ ಕಿಟ್‌ಗಳ ಪ್ರಾಯೋಜಕರಾಗಿ ಅವರು ಮಾತನಾಡಿದರು.

ತಾನು ಕಷ್ಟದಿಂದ ಬೆಳೆದು ಬಂದಿರುವೆ, ದೇವರು ಶಕ್ತಿ ಕೊಟ್ಟಷ್ಟು ನಾನು ಸಹಾಯ ಮಾಡುತ್ತೇನೆ. ನಾನು ಸುಮಾರು 46 ವಿವಿಧ ರೀತಿಯ ಕೆಲಸಗಳನ್ನು ಮಾಡುವುದರ ಮೂಲಕ ಇಂದು ಉನ್ನತ ಸ್ಥಾನಮಾನಕ್ಕೆ ಬಂದಿದ್ದೇನೆ ಎಂದು ಅವರು ತಮ್ಮ ಅನುಭವಗಳನ್ನು ಶಿಕ್ಷಕರೊಂದಿಗೆ ಹಂಚಿಕೊಂಡರು.


ಪ್ರಾಸ್ತಾವಿಕವಾಗಿ ಮಾತನಾಡಿದ ಸಂಸ್ಥೆಯ ಕಾರ್ಯದರ್ಶಿ ಮನೋಹರ್ ಎಸ್. ಚಿಗಟೇರಿ ಅವರು, ಅಜಯ್‌ರವರ ಸರಳ ವ್ಯಕ್ತಿತ್ವ ಹಾಗೂ ಸನ್ನಡತೆಯ ಬಗ್ಗೆ ಶ್ಲಾಘಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಉಪಾಧ್ಯಕ್ಷ ಬಸವರಾಜಪ್ಪ ಬೆಳಗಾವಿ ಮಾತನಾಡಿ, ಕೊರೊನಾ ಸಂದರ್ಭದಲ್ಲಿ ಅಜಯ್ ಕುಮಾರ್ ಅವರು ಮೇಯರ್ ಆಗಿ ಕಾರ್ಯ ನಿರ್ವಹಿಸಿದ್ದ ರೀತಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಶಿಕ್ಷಕರ ಪರವಾಗಿ ಕೋವಿಡ್ ಸಮಯದ ದಯನೀಯ ದಿನಗಳ ಬಗ್ಗೆ ಮುಖ್ಯೋಪಾಧ್ಯಾಯ ಹೆಚ್. ನಿಂಗಪ್ಪ ಮಾತನಾಡಿದರು.

ಶಿಕ್ಷಕರ ಪರವಾಗಿ ಮುಖ್ಯ ಶಿಕ್ಷಕರಾದ ಎಸ್.ಎಂ. ಶೈಲಜಾ ಅಜಯ್‌ಕುಮಾರ್ ಅವರಿಗೆ ಅಭಿನಂದನೆ ಸಲ್ಲಿಸಿದರು. ವೇದಿಕೆಯಲ್ಲಿ ಅಜಯ್‌ಕುಮಾರ್ ಅವರ ಪುತ್ರ ಭರತ್ ಬಿ.ಎ. ಉಪಸ್ಥಿತರಿದ್ದರು.

ಗೀತಾಬಾಯಿ ಹೆಚ್.ಆರ್. ಪ್ರಾರ್ಥನೆ, ರಂಗನಾಥ್ ಸ್ವಾಗತ, ನಾಗರಾಜ್ ವಂದನಾರ್ಪಣೆ, ರುದ್ರೇಶ್ ಮೂರ್ತಿ ಕೆ.ಪಿ. ಕಾರ್ಯಕ್ರಮ ನಿರೂಪಿಸಿದರು.



ಕುಂಬಾರಪೇಟೆ ಶ್ರೀ ಬನ್ನಿ ಮಹಾಂಕಾಳಿ ದೇವಸ್ಥಾನದಲ್ಲಿ ದುರ್ಗಾಷ್ಟಮಿಯ ಪ್ರಯುಕ್ತ ದೇವಿಗೆ ದುರ್ಗಾ ಅಲಂಕಾರ



ಎಸ್ ಓ ಜಿ ಕಾಲೋನಿಯ ಕರ್ಮಫಲದಾತ ಶ್ರೀ ಶನೈಶ್ಚರ ಸ್ವಾಮಿ ದೇವಸ್ಥಾನದಲ್ಲಿ ನವರಾತ್ರಿಯ ಏಳನೇ ದಿನದಂದು ಶ್ರೀ ಚೌಡೇಶ್ವರಿ ಅಮ್ಮನವರಿಗೆ ದುರ್ಗಾಷ್ಟಮಿಯ ಪ್ರಯುಕ್ತ ದುರ್ಗಾ ಪೂಜಾ ಅಲಂಕಾರ

# ಸತ್ಯಾಗ್ರಹ ಮುಂದೂಡಿದ್ದರೂ ಉಡುತಡಿಯ ಸಭೆ ಮೂಲಕ ಚಳುವಳಿಗೆ ಚಾಲನೆ



**ಹೊನ್ನಾಳಿಯಲ್ಲಿ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ**

ಹೊನ್ನಾಳಿ, ಅ.13- ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಹೋರಾಟದ ನಾಲ್ಕನೇ ಹಂತವಾಗಿ ಇಂದಿನಿಂದ ಶಿಕಾರಿಪುರ ತಾಲ್ಲೂಕು ಅಕ್ಕಮಹಾದೇವಿ ಜನ್ಮ ಸ್ಥಳವಾದ ಉಡುತಡಿಯ ಮೂಲಕ 'ಗ್ರಾಮ ಪಂಚಾಯಿತಿಯಿಂದ ವಿಧಾನಸಭೆವರೆಗೆ' ಎಂದು ಸಾರುವ ಹೋರಾಟ ಹಮ್ಮಿಕೊಳ್ಳಲಾಗುತ್ತಿದೆ ಎಂದು ಕೂಡಲಸಂಗಮದ ಪಂಚಮಸಾಲಿ ಜಗದ್ಗುರು ಶ್ರೀ ಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಶ್ರೀಗಳು ಬೆಂಗಳೂರಿನಿಂದ ಶಿಕಾರಿಪುರದ ಉಡುತಡಿ ಸಭೆಗೆ ಹೋಗುವ ಮಾರ್ಗ ಮಧ್ಯೆ ಹೊನ್ನಾಳಿಯಲ್ಲಿ ಸಾಯಿ ಆಗ್ರೋ ಏಜೆನ್ಸಿ ಮಾಲೀಕ ಹಾಲೇಶ್‌ರವರ ನಿವಾಸಕ್ಕೆ ಭೇಟಿ ನೀಡಿ ಮಾತನಾಡಿದರು.

ಹಾನಗಲ್ ಉಪಚುನಾವಣೆಯಲ್ಲಿ 60 ಸಾವಿರ ಸಮಾಜ ಬಾಂಧವರು ಚುನಾವಣಾ ಫಲಿತಾಂಶದ ನಿರ್ಣಾಯಕರಾಗಿದ್ದು, ಉದಾಸಿ ಕುಟುಂಬಕ್ಕೆ ನೀಡಿದ್ದರೆ ಅಭ್ಯಂತರ ಇರಲಿಲ್ಲ. ಬೇರೆ ಅಭ್ಯರ್ಥಿಗಳಿಗೆ ಎರಡೂ ರಾಷ್ಟ್ರೀಯ ಪಕ್ಷಗಳು ಅವಕಾಶ ನೀಡಿವೆ, ನಮ್ಮ ಸಮಾಜಕ್ಕೆ ಆದ್ಯತೆ ನೀಡಬೇಕೆಂದು ಹಾವೇರಿಯಲ್ಲಿ ಸಮಾಜದೊಂದಿಗೆ ತಾವು ಸಭೆ ನಡೆಸಿ, ಒತ್ತಾಯಿಸಲಾಗಿತ್ತು ಎಂದು ಹೇಳಿದರು.

2ಎ ಮೀಸಲಾತಿಗಾಗಿ 38 ದಿನಗಳ ರಾಜ್ಯ ಪ್ರವಾಸ ಕೈಗೊಂಡು ಎಚ್ಚರಿಕೆ ನೀಡಲಾಗಿತ್ತು. ಮುಖ್ಯಮಂತ್ರಿಗಳು ಮೂರು ತಿಂಗಳ ಒಳಗಾಗಿ ಮೀಸಲಾತಿ ಹೋರಾಟದ ವರದಿ ತರಿಸಿಕೊಳ್ಳುತ್ತೇವೆ ಎಂದಿದ್ದು, ಆ ಕಾರ್ಯಕ್ಕೆ ತ್ವರಿತವಾಗಿ ಮುಂದಾಗಬೇಕು. ಸಿ.ಸಿ. ಪಾಟೀಲರು ಚನ್ನಮ್ಮನ ಮೇಲೆ ಪ್ರಮಾಣ ಮಾಡಿ, ಮೀಸಲಾತಿ ವಿಷಯವಾಗಿ ಭರವಸೆಯ ಮಾತನಾಡಿರುವುದರಿಂದ ಈ ಬಗ್ಗೆ ನಂಬಿಕೆ ಇದೆ. ಈ ಎಲ್ಲಾ ಕಾರಣಕ್ಕೆ ಸತ್ಯಾಗ್ರಹ ಮುಂದೂಡಿಕೆ ಮಾಡಿದ್ದೇವೆ. ಆದರೂ ಉಡುತಡಿಯಲ್ಲಿ ಇಂದಿನಿಂದ ಚಳುವಳಿ ಮಾತ್ರ ಆರಂಭ ಮಾಡಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಸಾಯಿ ಆಗ್ರೋದ ಮಾಲೀಕ ಹಾಲೇಶ್, ದಾವಣಗೆರೆ ಸಮಾಜದ ಪ್ರಮುಖರಾದ ಆರ್.ವಿ. ಅಶೋಕ್ ಗೋವಿನಾಳ್, ಕಾರ್ಪೊರೇಟರ್ ಸ್ವಾಗಿ ಶಾಂತಕುಮಾರ್, ಬೆಂಗಳೂರಿನ ಬಿ.ಎಸ್. ನಟರಾಜ್, ದೀಪಕ್ ಜುಂಜರ್‌ವಾಡ, ಮಾಯಕೊಂಡ ಜಗದೀಶ್, ಚನ್ನಪ್ಪ ಚಿಕ್ಕಮೇಗಳಗೇರೆ, ಕಾರಿಗನೂರು ಗಂಗಾಧರ್, ಹೊನ್ನಾಳಿಯ ಪಟ್ಟಣಶೆಟ್ಟಿ ಪರಮೇಶ್, ಕಾಯಿ ಬಸಣ್ಣ, ಬೆನಕನಹಳ್ಳಿ ಈರಣ್ಣ, ಹಿರೇಮಠ ಬಸಣ್ಣ, ಸಮಾಜದ ಯುವ ಘಟಕದ ಅಧ್ಯಕ್ಷ ಹೋಟೆಲ್ ಗಿರೀಶ್, ಉಪಾಧ್ಯಕ್ಷ ಪ್ರಶಾಂತ್, ಇಡ್ಲಿ ಗಾಡಿ ಶಿವು, ಹರೀಶ್, ಕೊಟ್ಟೂರು ರಾಜು, ಉಪನ್ಯಾಸಕ ಪ್ರಸನ್ನ, ಮೃತ್ಯುಂಜಯ ಪಾಟೀಲ್, ಗಂಗಾಧರ್, ಷಡಕ್ಷರಿ ಕಮ್ಮಾರಗಟ್ಟೆ, ಕೆ.ಎಸ್. ಪ್ರಶಾಂತ್, ಲೋಕೇಶಪ್ಪ, ಗಮಕಿ ವಿಶ್ವನಾಥ್ ಮತ್ತಿತರರು ಇದ್ದರು.

ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಶ್ರೀಗಳು ಹಾರ ಹಾಕುವುದರೊಂದಿಗೆ ಉಡುತಡಿಯ ಸಭೆಗೆ ತೆರಳಿದರು.

**ಬೆಳ್ಳಿ ಫೋಟೋಗಳು ಸಿಗುತ್ತವೆ**

ಮದುವೆ, ಗೃಹಪ್ರವೇಶ ಇತ್ಯಾದಿ ಸಮಾರಂಭಗಳಿಗೆ ಉಡುಗೊರೆಯಾಗಿ ಕೊಡಲು ಅನುಕೂಲ ದರದಲ್ಲಿ ಬೆಳ್ಳಿ ದೇವರ ಮೂರ್ತಿಗಳ ಫೋಟೋಗಳು ದೊರೆಯುತ್ತವೆ. ಗಣೇಶ, ಬಾಲಾಜಿ, ಲಕ್ಷ್ಮಿ, ಸರಸ್ವತಿ, ಶ್ರೀ ಕನ್ನಿಕಾ ಪರಮೇಶ್ವರಿದೇವಿ, ಸತ್ಯನಾರಾಯಣಸ್ವಾಮಿ, ಧರ್ಮಸ್ಥಳ ಮಂಜುನಾಥಸ್ವಾಮಿ, ಈಶ್ವರ ಲಿಂಗು, ನಂದಿ, ಯಲ್ಲಮ್ಮ ದೇವಿ, ಶಿವ-ಪಾರ್ವತಿ, ರಾಘವೇಂದ್ರ, ಆಂಜನೇಯ, ಶಿರಡಿ ಸಾಯಿಬಾಬಾ ಮುಂತಾದ ದೇವರ ಫೋಟೋಗಳು ಲಭ್ಯ. ಬೆಳ್ಳಿಯ ಬಾಳೆಕಂಬ, ಡಿಜೈನ್ ತಟ್ಟೆಗಳು, ಬೆಳ್ಳಿಯ ಹೂ ಬುಟ್ಟಿ ಮತ್ತು ಕಾಮಧೇನು, ಕಲ್ಪವೃಕ್ಷ ನಮ್ಮಲ್ಲಿ ದೊರೆಯುತ್ತವೆ. ಹೊಸದಾಗಿ ಅಂಗಡಿ ಪ್ರಾರಂಭಿಸಲು ಮಾಡುವ ಪೂಜೆ ವೈಟ್ ಮೆಟಲ್‌ನ ಸರ್ವಾಲಂಕಾರದ ದೇವಿ ಫೋಟೋಗಳು ದೊರೆಯುತ್ತವೆ.


**ಲಕ್ಷ್ಮಿ ಬಾಲಾಜಿ ಸಿಲ್ವರ್ ಫೋಟೋ ಫ್ರೇಮ್ಸ್**

ಮಳಿಗೆ ನಂ.34, ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಶಿವಪ್ಪಯ್ಯ ಸರ್ಕಲ್ ಹತ್ತಿರ, ದಾವಣಗೆರೆ.

99451 59582, 98862 18185

## ನಾರಾಯಣ ಗುರುಗಳ ಆದೇಶ ಪಾಲಿಸಬೇಕು

### ಹಾವೇರಿಯ ಆರ್ಯ ಈಡಿಗ ಸಮಾವೇಶದಲ್ಲಿ ಬಿ.ಕೆ. ಹರಿಪ್ರಸಾದ್




ರಾಣೇಬೆನ್ನೂರು, ಅ.13- ವಿದ್ಯೆಯಿಂದ ಸ್ವತಂತ್ರರಾಗಿ, ಸಂಘಟಿತರಾಗಿ ಎನ್ನುವ ನಮ್ಮ ಕುಲಗುರುಗಳಾದ ನಾರಾಯಣ ಗುರುಗಳ ಆದೇಶವನ್ನು ಪಾಲಿಸೋಣ ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹೇಳಿದರು.

ಹಾವೇರಿಯಲ್ಲಿ ಸಮಾಜದ ಗುರು ಶ್ರೀ ಪ್ರಣವಾನಂದ ಸ್ವಾಮಿಗಳ ಸಾನ್ನಿಧ್ಯದಲ್ಲಿ ನಡೆದ ಜಿಲ್ಲಾ ಆರ್ಯ ಈಡಿಗ ಸಮಾಜದ ಸಮಾವೇಶದಲ್ಲಿ ಅವರು ಮಾತನಾಡಿದರು.

ನಾರಾಯಣ ಗುರುಗಳು ನಮ್ಮ ಸಮಾಜಕ್ಕೆ ದೇವಸ್ಥಾನ ಪ್ರವೇಶ ದೊರಕಿಸುವ ಚಳುವಳಿ ನಡೆಸಿದರು. ಜೊತೆಗೆ ಶಿವಲಿಂಗ ದೇವಸ್ಥಾನ ನಿರ್ಮಿಸಿದರು. ನಾವು ಈಗ ಶಾಲೆಗಳನ್ನು ಕಟ್ಟಿ, ನಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ ಮೆಡಿಕಲ್, ಇಂಜಿನಿಯರಿಂಗ್ ಕಾಲೇಜುಗಳನ್ನು ಕಟ್ಟಬೇಕಿದೆ ಎಂದು ಹೇಳಿದರು.

ಗುರುಗಳ ಆಶೀರ್ವಾದ ನಮ್ಮ ಸಮಾಜದ ಮೇಲಿದೆ. ಇಡೀ ಈಡಿಗ ಸಮಾಜ ಸ್ವಾಭಿಮಾನದ ಬದುಕು ನಡೆಸುತ್ತಿದೆ ಎಂದು ಸಮಾವೇಶ ಉದ್ಘಾಟಿಸಿದ ಕೇಂದ್ರ ಪ್ರವಾಸೋದ್ಯಮ ಸಚಿವ ಶ್ರೀಪಾದನಾಯ್ಕ ಹೇಳಿದರು. ಮಾಜಿ ಸ್ಪೀಕರ್ ಕಾಗೋಡ ತಿಮ್ಮಪ್ಪ, ಕೃಷ್ಣ ಈಳಿಗೇರ, ಸತೀಶ ಈಳಿಗೇರ, ನಗರಾಧ್ಯಕ್ಷ ಸಂಜೀವ ನೇರಲಗಿ, ಮಾಜಿ ಸಚಿವ ರುದ್ರಪ್ಪ ಲಮಾಣಿ ಇನ್ನಿತರರು ಪಾಲ್ಗೊಂಡಿದ್ದರು.

## ವಿಜಯದಶಮಿ ಮಹೋತ್ಸವ ಸಮಿತಿಯಿಂದ ನವದುರ್ಗಾ ಪೂಜೆ



ದಾವಣಗೆರೆ, ಅ.13 - ಸಾರ್ವಜನಿಕ ವಿಜಯ ದಶಮಿ ಮಹೋತ್ಸವ ಸಮಿತಿಯಿಂದ ದುರ್ಗಾಷ್ಟಮಿಯ ಪ್ರಯುಕ್ತ ನವದುರ್ಗೆಯರ ಪೂಜೆಗೆ ಕುಮಾರಿಯರನ್ನು ಆಯ್ಕೆ ಮಾಡಿ ಬೀರಲಿಂಗೇಶ್ವರ ದೇವಸ್ಥಾನದ ಮೈದಾನದಲ್ಲಿ ದೇವಿ ಪ್ರತಿಷ್ಠಾಪನೆಯ ಎದುರು ರಾಷ್ಟ್ರ ಸೇವಿಕಾ ಸಮಿತಿಯ ಸೇವಕಿಯರು ಸೇರಿ ಆಚರಿಸಲಾಯಿತು



